JJ-51

RMC

ಕರ್ನಾಟಕ ವಿಧಾನಸಭೆಯ ನಡವಳಿಗಳು
KARNATAKA LEGISLATIVE ASSEMBLY DEBATES

(B) 25232.

ಅಧಿಕೃತ ವರದಿ
OFFICIAL REPORT

ಮೂರನೇ ಅಧಿವೇಶನ
3RD SESSION

ಸಂಪುಟ – ೬ (ಕ್ರಮಾಂಕ – ೧ ಮತ್ತು ೨)
Volume - 6 (No. 1 & 2)

(೯ನೇ ಮತ್ತು ೧೦ನೇ ಜುಲೈ ೨೦೦೯)
(9th and 10th July 2009)

ಕರ್ನಾಟಕ ವಿಧಾನ ಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆ

ಹದಿಮೂರನೇ ವಿಧಾನಸಭೆ

ಮೂರನೇ ಅಧಿವೇಶನ

ಶ್ರೀ ಜಗದೀಶ್ ಶೆಟ್ಟರ್

ಅಧ್ಯಕ್ಷರು

ಕರ್ನಾಟಕ ವಿಧಾನ ಸಭೆ

(ಹದಿಮೂರನೇ ವಿಧಾನಸಭೆ–ಮೂರನೇ ಅಧಿವೇಶನ)

ಗುರುವಾರ 09ನೇ ಜುಲೈ 2009ರಂದು ಸದನವು

ವಿಧಾನ ಸೌದದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ/ಮಧ್ಯಾಹ್ನ 11.00 ಗಂಟೆಗೆ ಸಮಾವೇಶಗೊಂಡಿತ್ತು.

ಅಧ್ಯಕ್ಷರು/ಉಪಾಧ್ಯಕ್ಷರು ಶ್ರೀ ಜಗದೀಶ ಶೇಟ್ಟರ್ ರವರು

ಪೀಠವನ್ನು ಅಲಂಕರಿಸಿದ್ದರು

ಕರ್ನಾಟಕ ವಿಧಾನ ಸಭೆ
ವಿಷಯಾನುಕ್ರಮಣಿಕೆ
ಗುರುವಾರ, 09ನೇ ಜುಲೈ, 2009

ಸರದಿ ಸಂಖ್ಯೆ

1. **ಸಂತಾಪ ಸೂಚನೆ:** 01–26

ವಿಷಯ: ಮಾಜಿ ಸಚಿವ ಶ್ರೀ ಹಾರನಹಳ್ಳಿ ರಾಮಸ್ವಾಮಿ ಮತ್ತಿತರ ಗಣ್ಯರ ನಿಧನದ ಬಗ್ಗೆ

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು)
ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು)
ಶ್ರೀ ಹೆಚ್.ಡಿ.ರೇವಣ್ಣ
ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್
ಶ್ರೀ ಟಿ.ಬಿ.ಜಯಚಂದ್ರ
ಶ್ರೀ ತಿಪ್ಪೇಸ್ವಾಮಿ
ಶ್ರೀ ಕೆ.ಎಂ.ಶಿವಲಿಂಗೇಗೌಡ
ಶ್ರೀ ಡಿ.ಕೆ.ಶಿವಕುಮಾರ್
ಶ್ರೀ ಎನ್. ಯೋಗೇಶ್ ಭಟ್
ಶ್ರೀ ಕರಡಿ ಸಂಗಣ್ಣ ಅಪರಪ್ಪ
ಶ್ರೀ ಶ್ರೀನಿವಾಸ ಪ್ರಸಾದ್

2. **ಪ್ರಕಟಣೆ:** 26–27

ವಿಷಯ: ಶ್ರೀ ಸಿ.ಪಿ.ಯೋಗೀಶ್ವರ, ವಿಧಾನ ಸಭೆಯ ಶಾಸಕರು, ಚನ್ನಪಟ್ಟಣ ಮತ್ತಿತ್ತರ ಶಾಸಕರ ಸಲ್ಲಿಸಿರುವ ರಾಜೀನಾಮೆಯನ್ನು ಅಂಗೀಕರಿಸಿರುವ ಬಗ್ಗೆ ಮತ್ತು ಜಾತ್ಯಾತೀತ ಜನತಾದಳದ ಶಾಸಕಾಂಗ ಪಕ್ಷದ ಪದಾಧಿಕಾರಿಗಳ ಘೋಷಣೆ.

3. **ನಿಲುವಳಿ ಸೂಚನೆ ಅನುಮತಿ ಕೋರಿ ಚರ್ಚೆ:** 27–74

ವಿಷಯ: ಮೈಸೂರು ನಗರದಲ್ಲಿ ಇತ್ತೀಚೆಗೆ ಜರುಗಿದ ಕೋಮು ಗಲಭೆಯ ಬಗ್ಗೆ.

ಶ್ರೀ ಸಿದ್ಧರಾಮಯ್ಯ, ಮಾನ್ಯ ವಿರೋಧ ಪಕ್ಷದ ನಾಯಕರು
ಶ್ರೀ ಟಿ.ಬಿ.ಜಯಚಂದ್ರ
ಶ್ರೀ ಬಸವರಾಜ ಬೊಮ್ಮಾಯಿ, ಮಾನ್ಯ ಜಲಸಂಪನ್ಮೂಲ ಸಚಿವರು
ಶ್ರೀ ಸುರೇಶ್ ಕುಮಾರ್, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು
ಶ್ರೀ ಬಿ.ಎಸ್.ಯಡಿಯೂರಪ್ಪ, ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಡಿ.ಕೆ.ಶಿವಕುಮಾರ್
ಡಾ.ವಿ.ಎಸ್.ಆಚಾರ್ಯ, ಮಾನ್ಯ ಗೃಹ ಸಚಿವರು

ಶ್ರೀ ತನ್ವೀರ್ ಸೇಠ್
ಶ್ರೀ ಹೆಚ್.ಡಿ.ರೇವಣ್ಣ
ಶ್ರೀ ಹೆಚ್.ಎಸ್.ಶಂಕರ ಲಿಂಗೇಗೌಡ
ಶ್ರೀ ಜಿ.ಜನಾರ್ಧನ ರೆಡ್ಡಿ
(ನಿಲುವಳಿ ಸೂಚನೆಯನ್ನು ತಿರಸ್ಕರಿಸಿ ನಿಯಮ 69ರ ಅಡಿಯಲ್ಲಿ ಪರಿವರ್ತಿಸಿ ಚರ್ಚೆಗೆ ಅನುಮತಿ ನೀಡಲಾಯಿತು)

4.ಪ್ರಶ್ನೋತ್ತರ: **74–158**

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು
ಶ್ರೀ ಸಿದ್ದು ಸವದಿ, ಪ್ರ.ಸಂ. 1(142)
ಶ್ರೀ ಎಂ.ಶ್ರೀನಿವಾಸ್, ಪ್ರ.ಸಂ. 2(146)
ಶ್ರೀ ಪಾಟೀಲ್.ಎ.ಎಸ್.(ನಡಹಳ್ಳಿ), ಪ್ರ.ಸಂ. 3(34)
ಶ್ರೀ ಕಿಮ್ಮನೆ ರತ್ನಾಕರ್, ಪ್ರ.ಸಂ. 4(126)
ಶ್ರೀ ಹೆಚ್.ಸಿ.ಬಾಲಕೃಷ್ಣ, ಪ್ರ.ಸಂ. 6(130)
ಶ್ರೀ ಎಂ.ಟಿ.ಕೃಷ್ಣಪ್ಪ, ಪ್ರ.ಸಂ. 7(32)
ಶ್ರೀ ಹೆಚ್.ಎಸ್.ಮಹಾದೇವ ಪ್ರಸಾದ್, ಪ್ರ.ಸಂ. 8(124)
ಶ್ರೀ ಕೆ.ಎಂ.ಶಿವಲಿಂಗೇಗೌಡ, ಪ್ರ. ಸಂ. 9(132)
ಶ್ರೀ ಬಿದರೂರು.ಎಸ್.ವಿರೂಪಾಕ್ಷಪ್ಪ, ಪ್ರ.ಸಂ. 10 (110)
ಶ್ರೀ ಹೆಚ್.ಡಿ.ರೇವಣ್ಣ, ಪ್ರ.ಸಂ. 11(119)
ಶ್ರೀ ನರಸಿಂಹ ನಾಯಕ, ಪ್ರ.ಸಂ. 13(128)
ಶ್ರೀ ಖಾದರ್ ಯು.ಟಿ. ಪ್ರ.ಸಂ. 14(107)
ಶ್ರೀ ತಿಪ್ಪೇಸ್ವಾಮಿ, ಪ್ರ.ಸಂ. 15(117)

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. (ಅನುಬಂಧ–1)

5. <u>ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸಾಪಿಸಲಾದ ವಿಷಯಗಳು</u> **158–166**

(ಅ) ಗುಲ್ಬರ್ಗ ಹಾಲು ಉತ್ಪಾದಕರ ಸಂಘಕ್ಕೆ ನಿರ್ದೇಶಕರ ನಾಮಕರಣದ ಬಗ್ಗೆ.
ಶ್ರೀ ಹೆಚ್.ಡಿ. ರೇವಣ್ಣ
ಶ್ರೀ ಸಿದ್ಧರಾಮಯ್ಯ, ಮಾನ್ಯ ವಿರೋಧ ಪಕ್ಷದ ನಾಯಕರು
ಶ್ರೀ ಹೆಚ್.ಸಿ.ಬಾಲಕೃಷ್ಣ
ಶ್ರೀ ಲಕ್ಷ್ಮಣ ಸಂಗಪ್ಪ ಸವದಿ, ಸಹಕಾರ ಸಚಿವರು

(ಆ) ಕುರುವೇಕೆರೆ ತಾಲ್ಲೂಕಿನ ಹುಲ್ಲೆಕೆರೆ ಹಾಸ್ಟೆಲ್‌ನಲ್ಲಿ ಮಹಿಳೆ ಮೇಲೆ ದೌರ್ಜನ್ಯ ಕುರಿತು
ಶ್ರೀ ಎಂ.ಟಿ. ಕೃಷ್ಣಪ್ಪ
ಶ್ರೀ ಡಿ.ಸುಧಾಕರ್ (ಸಮಾಜ ಕಲ್ಯಾಣ ಸಚಿವರು)

6. <u>ಅನುಬಂಧಗಳು</u> **166–244**

ಕರ್ನಾಟಕ ವಿಧಾನ ಸಭೆ
ಶುಕ್ರವಾರ, 10ನೇ ಜುಲೈ, 2009
ವಿಷಯಾನುಕ್ರಮಣಿಕೆ

1. ಸಂತಾಪ ಸೂಚನೆ: **245–246**

ಶ್ರೀ ರಾಜ ಅಮರಪ್ಪ ನಾಯಕ, ಮಾಜಿ ವಿಧಾನ ಸಭೆ ಮಾಜಿ ಸದಸ್ಯರ ನಿಧನದ ಬಗ್ಗೆ.

2. ಪ್ರಶ್ನೋತ್ತರ: **246–318**

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

1. ಶ್ರಿ ಟಿ.ಬಿ.ಜಯಚಂದ್ರ	16(294)
2. ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ	12(155)
3. ಡಾ.ಶರಣ ಪ್ರಕಾಸ್ ರುದ್ರಪ್ಪ ಪಾಟೀಲ್	18(301)
4. ಶ್ರೀ ಎಸ್.ಆರ್.ಮಹೇಶ್	21(305)
5. ಶ್ರೀ ಕರಡಿ ಸಂಗಣ್ಣ ಅಮರಪ್ಪ	19(40)
6. ಶ್ರೀ ಹೆಚ್.ಗೋಪಾಲ ಭಂಡಾರಿ	22(332)
7. ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್	25(303)
8. ಶ್ರೀ ನಾಡಗೌಡ ವೆಂಕಟರಾವ್	26(42)
9. ಶ್ರೀ ಸುಭಾಷ್ ಆರ್.ಗುತ್ತೇದಾರ್	27(164)
10.ಶ್ರೀ ಎಂ.ಸತ್ಯನಾರಾಯಾಣ	29(1)
11.ಶ್ರೀ ಎನ್.ಎ.ಹ್ಯಾರಿಸ್	30(288)

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು (2ನೇ ಪಟ್ಟಿ)

(ಅನುಬಂಧ–1)

3.ಸಹಕಾರ ಸಚಿವರ ಹೇಳಿಕೆ: **318–336**

ವಿಷಯ: ಗುಲ್ಬರ್ಗಾ ಹಾಲು ಒಕ್ಕೂಟವನ್ನು ಸೂಪರ್ ಸೀಡ್ ಮಾಡಿರುವ ಬಗ್ಗೆ.

(ಅ)ಜೆಡಿ(ಎಸ್) ಪಕ್ಷದ ಸದಸ್ಯರಿಂದ ಧರಣಿ

(ಆ)ಜೆಡಿ(ಎಸ್) ಪಕ್ಷದ ಸದಸ್ಯರಿಂದ ಸಭಾತ್ಯಾಗ

4. ವಿತ್ತೀಯ ಕಾರ್ಯಕಲಾಪ: **336–436**

2009–10ನೇ ಸಾಲಿನ ಅನುದಾನ ಬೇಡಿಕೆಗಳ ಮಂಡನೆ

(ಅನುಬಂಧ–2)

ಕರ್ನಾಟಕ ವಿಧಾನಸಭೆಯ ನಡವಳಿಗಳು
KARNATAKA LEGISLATIVE ASSEMBLY DEBATES

(B)25232

ಅಧಿಕೃತ ವರದಿ
OFFICIAL REPORT

ಮೂನೇ ಅಧಿವೇಶನ

3RD SESSION

ಸಂಪುಟ – ೬ (ಕ್ರಮಾಂಕ – ೧ ಮತ್ತು ೨)

Volume - 6 (No. 1 & 2)

(೯ನೇ ಮತ್ತು ೧೦ನೇ ಜುಲೈ ೨೦೦೯)

(9th and 10th July 2009)

ಕರ್ನಾಟಕ ವಿಧಾನ ಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

0-1054-1

1. ಸಂತಾಪ ಸೂಚನೆ

ವಿಷಯ:- ಮಾಜಿ ಸಚಿವರಾದ ಶ್ರೀ ಹಾರನಹಳ್ಳಿ ರಾಮಸ್ವಾಮಿ, ಮತ್ತಿತರ ಗಣ್ಯರ ನಿಧನದ ಬಗ್ಗೆ.

ಮಾನ್ಯ ಸಭಾಧ್ಯಕ್ಷರು:–

ಮಾಜಿ ಸಚಿವರಾಗಿದ್ದ ಶ್ರೀ ಹಾರನಹಳ್ಳಿ ರಾಮಸ್ವಾಮಿ, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಿ.ಎಂ.ಇದಿನಬ್ಬ, ಶ್ರೀ ವಿ. ವಾಸುದೇವ, ಶ್ರೀ ಜೆ. ಶಂಕರೇಗೌಡ, ಶ್ರೀ ಎಂ. ಬಿ. ದಿವಟರ್, ಶ್ರೀ.ಬಿ. ಪಿ. ಗಂಗಾಧರ್ ಹಾಗೂ ವಿಧಾನ ಪರಿಷತ್ತಿನ ಹಾಲಿ ಸದಸ್ಯರಾದ ಶ್ರೀ ಬಿ.ಟಿ. ಚನ್ನಬಸಪ್ಪ ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಶ್ರೀ ಹಾರನಹಳ್ಳಿ ರಾಮಸ್ವಾಮಿ

ಮಾಜಿ ಸಚಿವರು ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಹಾರನಹಳ್ಳಿ ರಾಮಸ್ವಾಮಿ ಅವರು 1922ನೇ ಫೆಬ್ರವರಿ, 22ರಂದು ಅರಸೀಕೆರೆ ತಾಲ್ಲೂಕು ಹಾರನಹಳ್ಳಿಯಲ್ಲಿ ಜನಿಸಿದ್ದು, ಬಿ.ಎಸ್ಸಿ ಹಾಗೂ ಎಲ್.ಎಲ್.ಬಿ ಪದವೀಧರರು. ವೃತ್ತಿಯಲ್ಲಿ ವಕೀಲರಾಗಿದ್ದ ಶ್ರೀಯುತರು ಸ್ವಾತಂತ್ರ್ಯ ಹೋರಾಟಗಾರರು. 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಹಾಗೂ 1947ರಲ್ಲಿ ರಾಜ್ಯದಲ್ಲಿ ಜವಾಬ್ದಾರಿಯುತ ಸರ್ಕಾರದ ರಚನೆಗಾಗಿ ನಡೆದ ಹೋರಾಟಗಳಲ್ಲಿ ಭಾಗಿಯಾಗಿ ಸೆರೆಮನೆವಾಸ ಅನುಭವಿಸಿದ್ದರು. ಯುವ ಹೋರಾಟಗಾರರಾಗಿ ಕರ್ನಾಟಕ ಏಕೀಕರಣಕ್ಕಾಗಿ ದುಡಿದಿದ್ದ ಶ್ರೀಯುತರು ಕಾಂಗ್ರೆಸ್ ಪಕ್ಷದ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದರು. ಇಪ್ಪತ್ತು ವರ್ಷಗಳ ಕಾಲ ಹಾಸನ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಹಕಾರಿ ಸಂಘ ಹಾಗೂ ಭಾರತ ಸೇವಾ ದಳದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಹಾಗೂ ಅಧ್ಯಕ್ಷರಾಗಿ, ಕಾನೂನು ಕಾಲೇಜಿನ ಮೊದಲ ಪ್ರಾಂಶುಪಾಲರು ಹಾಗೂ ಪ್ರೊಫೆಸರ್ ಆಗಿ ಸೇವೆ ಸಲ್ಲಿಸಿದ್ದು ಶ್ರೀಯುತರು, ಸಂವಿಧಾನ ಹಾಗೂ ಅಂತರಾಷ್ಟ್ರೀಯ ಕಾನೂನುಗಳನ್ನು ಬೋಧಿಸುತ್ತಿದ್ದರು. 1960 ರಿಂದ 1966ರವರೆಗೆ ಹಾಗೂ 1990 ರಿಂದ 1992ರವರೆಗೆ ವಿಧಾನಪರಿಷತ್ತಿನ ಸದಸ್ಯರಾಗಿದ್ದು, 1978 ರಿಂದ 1983ರವರೆಗೆ ಗಂಡಸಿ ವಿಧಾನಸಭಾ ಕ್ಷೇತ್ರದಿಂದ ವಿಧಾನಸಭೆಗೆ ಚುನಾಯಿತರಾಗಿದ್ದರು. 1992ರಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಮುಜರಾಯಿ ಇಲಾಖೆಯ ಸಚಿವರಾಗಿ, 2000ದಲ್ಲಿ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ಅಪ್ಪಟ ಗಾಂಧಿವಾದಿ, ಲೋಕಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷರಾಗಿ, ಕೊರವಂಜಿ ಮಾಸ ಪತ್ರಿಕೆಯ ಅಂಕಣಕಾರರಾಗಿ, ಜನವಾಣಿ ಪತ್ರಿಕೆಯ ಉಪ ಸಂಪಾದಕರಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು ಬಹುಮುಖ ವ್ಯಕ್ತಿತ್ವವನ್ನು ಹೊಂದಿದ್ದರು.

ಶ್ರೀಯುತರು ದಿನಾಂಕ 4.4.2009ರಂದು ನಿಧನ ಹೊಂದಿದರು.

2. ಶ್ರೀ ಬಿ.ಎಂ.ಇದಿನಬ್ಬ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಿ.ಎಂ.ಇದಿನಬ್ಬ ಅವರು 1920ನೇ ಸೆಪ್ಟೆಂಬರ್, 17ರಂದು ಉಪ್ಪಿನಂಗಡಿಯ ಸಮೀಪದ ಹಳ್ಳಿಯಲ್ಲಿ ಜನಿಸಿದ್ದರು. ಶ್ರೀಯುತರು ಸ್ವಾತಂತ್ರ್ಯಯ ಹೋರಾಟಗಾರರು. ಮಂಗಳೂರಿನ ದಕ್ಷಿಣ ಕನ್ನಡ ಕೃಷಿಕರ ಮಾರಾಟ ಸಹಕಾರ ಸಂಘದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀಯುತರು ಪ್ರಸಿದ್ಧ ಸಾಹಿತಿಗಳು. ಹೃದಯ ಗೀತೆಗಳು, ಹರಿದ ಕೋಟು ಮುಂತಾದ ಆರು ಕಥಾ ಸಂಕಲನಗಳು, ಮಕ್ಕಳಿಗಾಗಿ ಸಾಹಿತ್ಯ ಕೃತಿಗಳು ಹಾಗೂ ಆರುನೂರಕ್ಕೂ ಹೆಚ್ಚು ಲೇಖನಗಳನ್ನು ಪ್ರಕಟಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರಾಗಿ, ಕರ್ನಾಟಕ ಸಾಹಿತ್ಯ ಅಕಾಡಮಿಯ ಸದಸ್ಯರಾಗಿ, ರಾಜ್ಯ ಸರ್ಕಾರದ ವಿವಿಧ ಪ್ರಶಸ್ತಿಗಳ ಆಯ್ಕೆ ಸಮಿತಿ ಸದಸ್ಯರಾಗಿ, ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದ ಶ್ರೀಯುತರು ನಾಲ್ಕು ಎಂಟು ಹಾಗೂ ಒಂಭತ್ತನೇ ವಿಧಾನಸಭೆಗೆ ಉಳ್ಳಾಲ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ರಾಜ್ಯೋತ್ಸವ ಪ್ರಶಸ್ತಿ, ಗೊರೂರು ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ ಮುಂತಾದ ಗೌರವಗಳಿಗೆ ಪಾತ್ರರಾಗಿದ್ದು, ನೂರಾರು ಸಂಘ ಸಂಸ್ಥೆಗಳಿಂದ ಸನ್ಮಾನಿತರಾಗಿದ್ದರು.

ಶ್ರೀಯುತರು ದಿನಾಂಕ 11.4.2009ರಂದು ನಿಧನ ಹೊಂದಿದರು.

3. ಶ್ರೀ ವಿ.ವಾಸುದೇವ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ವಿ.ವಾಸುದೇವ ಅವರು 1956ನೇ ಜುಲೈ, 17ರಂದು ಮೈಸೂರಿನಲ್ಲಿ ಜನಿಸಿದ್ದು, ಬಿ.ಎ. ಪದವೀಧರರು. ವೃತ್ತಿಯಲ್ಲಿ ಕೃಷಿಕರಾಗಿದ್ದ ಶ್ರೀಯುತರು ಸಂಘ ಸಂಸ್ಥೆಗಳ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯ ಪಾತ್ರ ವಹಿಸುತ್ತಿದ್ದು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಜನರ ಶೋಷಣೆಯ ವಿರುದ್ಧ ಸಂಘಟಿಸಿದ್ದರು. ಅಖಿಲ ಕರ್ನಾಟಕ ದಲಿತ ಹಾಗೂ ಅಲ್ಪಸಂಖ್ಯಾತ ಸಂಘಟನೆಯ ಅಧ್ಯಕ್ಷರಾಗಿದ್ದ ಶ್ರಿಯುತರು ಏಳನೇ ವಿಧಾನಸಭೆಗೆ ಟಿ.ನರಸೀಪುರ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 13.4.2009ರಂದು ನಿಧನ ಹೊಂದಿದರು.

4. ಶ್ರೀ ಜಿ.ಶಂಕರೇಗೌಡ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಜಿ.ಶಂಕರೇಗೌಡ ಅವರು 1937ನೇ ಜುಲೈ, 20ರಂದು ಹೊಸಪೇಟೆಯಲ್ಲಿ ಜನಿಸಿದ್ದು, ಕೃಷಿಕರಾಗಿದ್ದರು. ಸರಳ ವ್ಯಕ್ತಿತ್ವವನ್ನು ಹೊಂದಿದ್ದ ಶ್ರೀಯುತರು ರೈತರ ಪರವಾಗಿ ಅಪಾರ ಕಾಳಜಿಯನ್ನು ಹೊಂದಿದ್ದು, ಥಿಯೋಸಾಫಿಕಲ್ ಮಹಿಳಾ ಕಾಲೇಜಿನ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಶ್ರೀಯುತರು ಏಳು ಹಾಗೂ ಹತ್ತನೇ ವಿಧಾನಸಭೆಗೆ ಹೊಸಪೇಟೆ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 27.4.2009ರಂದು ನಿಧನ ಹೊಂದಿದರು.

5. ಶ್ರೀ ಎಂ.ಬಿ.ದಿವಟರ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ.ಬಿ.ದಿವಟರ್ ಅವರು 1950ನೇ ಜೂನ್, 5 ರಂದು ಕೊಪ್ಪಳದಲ್ಲಿ ಜನಿಸಿದ್ದರು. ಎಂ.ಎ ಪದವೀಧರರಾಗಿದ್ದ ಶ್ರೀಯುತರು ಕೃಷಿಕರಾಗಿದ್ದರು. ಕೊಪ್ಪಳ ಪುರಸಭೆಯ ಅಧ್ಯಕ್ಷರಾಗಿದ್ದ ಶ್ರೀಯುತರು ವಿವಿಧ ಶಿಕ್ಷಣ ಸಂಸ್ಥೆಗಳ ಸ್ಥಾಪಿತರು. ಸಿಂಗಟಾಲೂರು ಮತ್ತು ಹಿರೇಹಳ್ಳ ಯೋಜನೆಯ ಅನುಷ್ಠಾನಕ್ಕೆ ತೀವ್ರ ಹೋರಾಟ ನಡೆಸಿದ್ದ ಶ್ರೀಯುತರು ಏಳು ಹಾಗೂ ಒಂಭತ್ತನೇ ವಿಧಾನಸಭೆಗೆ ಕೊಪ್ಪಳ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 26.5.2009ರಂದು ನಿಧನ ಹೊಂದಿದರು.

6. ಶ್ರೀ ಬಿ.ಪಿ.ಗಂಗಾಧರ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಿ.ಪಿ.ಗಂಗಾಧರ್ ಅವರು 1924ನೇ ಮೇ, 12ರಂದು ಮಧುಗಿರಿ ತಾಲ್ಲೂಕು ಬೆಲ್ಲದನಾಡು ಗ್ರಾಮದಲ್ಲಿ ಜನಿಸಿದ್ದರು. ಬಿ.ಎಸ್ಸಿ ಹಾಗೂ ಕಾನೂನು ಪದವೀಧರರಾಗಿದ್ದ ಶ್ರೀಯುತರು ವಕೀಲರಾಗಿದ್ದರು. 1942ರ 'ಕ್ವಿಟ್ ಇಂಡಿಯಾ' ಚಳವಳಿಯಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದ್ದ ಶ್ರೀಯುತರು ಸ್ವಾತಂತ್ರ್ಯ ಹೋರಾಟಗಾರರು. ಹಲವಾರು ಸಂಘ ಸಂಸ್ಥೆಗಳಲ್ಲಿ ಪದಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದ ಶ್ರಿಯುತರು ನಾಲ್ಕನೇ ವಿಧಾನಸಭೆಗೆ ತುಮಕೂರು ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 03.7.2009ರಂದು ನಿಧನ ಹೊಂದಿದರು.

7.ಶ್ರೀ ಬಿ.ಟಿ.ಚನ್ನಬಸಪ್ಪ

ವಿಧಾನಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಶ್ರೀ ಬಿ.ಟಿ.ಚನ್ನಬಸಪ್ಪ ಅವರು 1958ನೇ ಜುಲೈ, 21ರಂದು ಚಿತ್ರದುರ್ಗ ಜಿಲ್ಲೆಯ ಭೀಮಸಮುದ್ರದಲ್ಲಿ ಜನಿಸಿದ್ದು, ಕೃಷಿಕರು ಹಾಗೂ ವ್ಯಾಪಾರಸ್ಥರು, ಸಮಾಜಸೇವೆಯಲ್ಲಿ ಆಸಕ್ತಿ ಹೊಂದಿದ್ದ ಶ್ರೀಯುತರು ಹಲವಾರು ಶಿಕ್ಷಣ ಸಂಸ್ಥೆಗಳ ಪದಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದರು. ಇಂದಿರಾ ಪ್ರಿಯದರ್ಶಿನಿ, ರಾಷ್ಟ್ರೀಯ ನಿರ್ಮಾಣ ಪ್ರಶಸ್ತಿ ಹಾಗೂ ಭಾರತೀಯ ಉದ್ಯೋಗ ರತ್ನ ಪ್ರಶಸ್ತಿಗಳು ಶ್ರೀಯುತರಿಗೆ ಲಭ್ಯವಾಗಿದ್ದವು. 1998 ಹಾಗೂ 2004ರಲ್ಲಿ ಎರಡು ಬಾರಿ ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್ತಿಗೆ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 16.4.2009ರಂದು ನಿಧನ ಹೊಂದಿದರು.

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಇಂದು ತಾವು ಮಂಡಿಸಿರುವಂಥ ಸಂತಾಪ ಸೂಚಕ ನಿರ್ಣಯವನ್ನು ಬೆಂಬಲಿಸಿ, ಕಳೆದ ಅಧಿವೇಶನದ ನಂತರ ನಮ್ಮನ್ನು ಅಗಲಿರುವಂಥ ನಾಯಕರ ಬಗ್ಗೆ ನನ್ನ ಕೆಲವು ಅಭಿಪ್ರಾಯಗಳನ್ನು ತಮ್ಮ ಮುಂದಿಡಲು ನಾನು ಬಯಸುತ್ತೇನೆ.

ಹಾರ್ನಳ್ಳಿ ರಾಮಸ್ವಾಮಿಯವರ ಬಹುಮುಖ ಸಾಧನೆಯ ಬಗ್ಗೆ ನಮ್ಮೆಲ್ಲರಿಗೂ ತಿಳಿದಿದೆ. ಕಾನೂನು, ಶಿಕ್ಷಣ, ಪತ್ರಿಕೋದ್ಯಮ ಹಾಗೂ ಸಮಾಜಸೇವೆಯಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡು ಅನನ್ಯ ಸೇವೆಯನ್ನು ಈ ನಾಡಿಗೆ ಮಾಡಿದ್ದಾರೆ. 1942ನೇ ಇಸವಿಯಲ್ಲಿ ನಡೆದ Quit India ಚಳುವಳಿಯಲ್ಲಿ ಭಾಗವಹಿಸಿದ್ದ ಶ್ರೀಯುತರು, ಸ್ವಾತಂತ್ರ್ಯ ಪೂರ್ವದಲ್ಲಿ ನಡೆದ ಇತರ ಜನಪರ ಹೋರಾಟಗಳಲ್ಲಿಯೂ ಭಾಗಿಯಾಗಿ ಸೆರೆಮನೆ ವಾಸವನ್ನು ಅನುಭವಿಸಿದ್ದರು. ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಹಾಗೂ ಅಧ್ಯಕ್ಷರಾಗಿ, ಕಾನೂನು ಕಾಲೇಜಿನ ಮೊದಲ ಪ್ರಾಂಶುಪಾಲರು ಹಾಗೂ Professor ಆಗಿದ್ದ ಅವರು 1960ರಿಂದ ಸಕ್ರಿಯ ರಾಜಕಾರಣಿಯಾಗಿ ತಮ್ಮನ್ನು ತೊಡಗಿಸಿಕೊಂಡು ಶಾಸಕರಾಗಿ, ಸಚಿವರಾಗಿ, ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ಲೋಕ ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷರಾಗಿ, ಸಂಯುಕ್ತ ಕರ್ನಾಟಕ ಪತ್ರಿಕೆಗೆ ಒಂದು ಹೊಸ ಆಯಾಮವನ್ನು ನೀಡಿದರು. ಅವರು ನಿಧನದಿಂದ ಒಂದು ರೀತಿಯಲ್ಲಿ ವೈಯಕ್ತಿಕವಾಗಿ ನನಗೆ ತುಂಬಲಾರದ ನಷ್ಟವಾಗಿದೆ. ನನಗೆ ಯಾವುದೇ ಕ್ಲಿಷ್ಟ ಸಮಸ್ಯೆಗಳು ಎದುರಾದಾಗ, ನನಗೆ ದಿಕ್ಕು ತೋಚದೇ ಇದ್ದಾಗ, ನಾನು ಹೋಗಿ ಅವರನ್ನು ಭೇಟಿ ಮಾಡಿ ಆ ಸಮಸ್ಯೆಗಳ ಬಗ್ಗೆ ಅವರ ಜೊತೆಗೆ ಸಮಾಲೋಚನೆ ಮಾಡಿದಾಗ ಅವರು ಹೇಳುತ್ತಿದ್ದಂಥ ತಿಳುವಳಿಕೆಯ ಮಾತುಗಳು ನನಗೆ ಒಂದು ರೀತಿ ನೆಮ್ಮದಿಯನ್ನು ತರುತ್ತಿದ್ದವು. ಅಂಥ ಹಿರಿಯ ವ್ಯಕ್ತಿಯನ್ನು ನಾವು ಕಳೆದುಕೊಂಡು ಬಡವಾಗಿದ್ದೇವೆ.

ಅದೇ ರೀತಿ, ಬಿ.ಎಂ.ಇದಿನಬ್ಬರವರು ಮೂರು ಬಾರಿ ಉಳ್ಳಾಲ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿ ಅತ್ಯಂತ ಸಮರ್ಥ ರೀತಿಯಲ್ಲಿ ಶಾಸಕರಾಗಿ ಕಾರ್ಯ ನಿರ್ವಹಿಸಿದ್ದರು. ಬಿ.ಎಂ. ಇದಿನಬ್ಬರವರು ಬಹುಮುಖ ಪ್ರತಿಭೆಯುಳ್ಳಂಥ ಒಬ್ಬ ಹಿರಿಯ ವ್ಯಕ್ತಿಯಾಗಿದ್ದರು. ಬಾಲ್ಯದಿಂದಲೇ ಸಾಹಿತ್ಯದ ಬಗ್ಗೆ ಒಲವನ್ನು ಹೊಂದಿದ್ದಂಥ ಶ್ರೀಯುತರು ಮಂಗಳೂರು ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಕನ್ನಡ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಅನೇಕ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದರು. 1987ರಲ್ಲಿ ರಾಜ್ಯೋತ್ಸವ ಪ್ರಶಸ್ತಿಗೂ ಸಹ ಅವರು ಪಾತ್ರರಾಗಿದ್ದರು. ತಮ್ಮೆಲ್ಲರ ಗಮನಕ್ಕೆ ಒಂದು ಸಂಗತಿಯನ್ನು ತರಲು ಇಚ್ಛೆಪಡುತ್ತೇನೆ, ಆಶ್ಚರ್ಯದ ಸಂಗತಿ ಎಂದರೆ ಇದಿನಬ್ಬರವರು 600ಕ್ಕೂ ಹೆಚ್ಚು ಲೇಖನಗಳನ್ನು ಪ್ರಕಟಿಸಿದ್ದರು. ಗಾಂಧಿವಾದಿ, ಕನ್ನಡದ ಕೋಗಿಲೆಯಾಗಿದ್ದ ಶ್ರೀ ಇದಿನಬ್ಬರವರು ಇವತ್ತು ನಮ್ಮನ್ನು ಅಗಲಿದ್ದಾರೆ.

ಅದೇ ರೀತಿ, ಎಂ.ಪಿ.ಈಶ್ವರಪ್ಪನವರು ಹಿರಿಯ ರಾಜಕಾರಣಿಯಾಗಿದ್ದರು. ವಿಧಾನ ಪರಿಷತ್ತಿನ ಮಾಜಿ ವಿರೋಧ ಪಕ್ಷದ ನಾಯಕರಾಗಿದ್ದಂಥ ಎಂ.ಪಿ. ಈಶ್ವರಪ್ಪನವರು ಜೂನ್ 2009ರಲ್ಲಿ ನಮ್ಮನ್ನು ಅಗಲಿದ್ದಾರೆ. ಅವರು ಸಮರ್ಥ ವಕೀಲರಾಗಿ, ಕರ್ನಾಟಕ ಗೃಹ ಮಂಡಳಿಯ ಅಧ್ಯಕ್ಷರಾಗಿ, ಭಾರತ ತೈಲ ಸಂಸ್ಥೆಯ ಅಧ್ಯಕ್ಷರಾಗಿ, ಜನಾನುರಾಗಿಯಾಗಿ ಅನೇಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದರು.

1956ನೇ ಜುಲೈ 17ರಂದು ಮೈಸೂರಿನಲ್ಲಿ ಜನಿಸಿದ್ದ ವಿ.ವಾಸುದೇವ್‌ರವರು 7ನೇ ವಿಧಾನಸಭೆಗೆ ಟಿ.ನರಸೀಪುರ ಕ್ಷೇತ್ರದಿಂದ ಚುನಾಯಿತರಾಗಿದ್ದರು. ಅವರು ಅಖಿಲ ಕರ್ನಾಟಕ ದಲಿತ ಮತ್ತು ಅಲ್ಪಸಂಖ್ಯಾತ ಸಂಘಟನೆಯ ಅಧ್ಯಕ್ಷರಾಗಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನರ ಶೋಷಣೆಯ ವಿರುದ್ಧ ನಿರಂತರವಾಗಿ ಹೋರಾಟ ಮಾಡಿಕೊಂಡು ಬಂದಂಥ ಒಬ್ಬ ಧೀಮಂತ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ.

ಅದೇ ರೀತಿ, ಬಿ.ಟಿ.ಚನ್ನಬಸಪ್ಪನವರು ನಮ್ಮೆಲ್ಲರಿಗೂ ಅತ್ಯಂತ ಆತ್ಮೀಯರು, ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ಚುನಾಯಿಸಲ್ಪಟ್ಟಿದ್ದ ಅವರು ಒಬ್ಬ ಕೃಷಿಕರಾಗಿ, ಸಮಾಜ ಸೇವಕರಾಗಿ ಹಾಗೂ ಶಿಕ್ಷಣ ತಜ್ಞರಾಗಿ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಂಥವರು. ಇಂದು ಅವರು ನಮ್ಮನ್ನು ಅಗಲಿದ್ದಾರೆ.

ಅದೇ ರೀತಿ, ಹೊಸಪೇಟೆಯವರಾದ ಶ್ರಿಯುತ ಜಿ. ಶಂಕರೇಗೌಡರು 7 ಮತ್ತು 10ನೇ ವಿಧಾನಸಭೆಗೆ ಆ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಅವರು ಕೃಷಿಕರ ಬಗ್ಗೆ ಅತೀವ ಕಾಳಜಿಯನ್ನು ಹೊಂದಿದ್ದಂಥ ಅವರು ನನ್ನ ಅತ್ಮೀಯ ಸ್ನೇಹಿರಾಗಿದ್ದರು. ಅವರನ್ನು ಇಂದು ನಾವು ಕಳೆದುಕೊಂಡಿದ್ದೇವೆ.

ಅದೇ ರೀತಿ, ಶ್ರೀಯುತ ಎಂ.ಬಿ.ದಿವಟರ್‌ರವರು ಕೊಪ್ಪಳ ಕ್ಷೇತ್ರದಿಂದ ಎರಡು ಬಾರಿ ವಿಧಾನಸಭೆಗೆ ಆಯ್ಕೆಯಾಗಿದ್ದರು. ಸಿಂಗಟಾಲೂರು ಮತ್ತು ಹಿರೇಹಳ್ಳ ಯೋಜನೆಗಳ ಅನುಷ್ಠಾನಕ್ಕಾಗಿ ಅವರು ತೀವ್ರ ಹೋರಾಟ ನಡೆಸಿದ್ದರು. ಎಂ.ಎ.ಪದವೀದರರರಾಗಿದ್ದಂಥ ಶ್ರೀಯುತರು ವಿವಿಧ ಶಿಕ್ಷಣ ಸಂಸ್ಥೆಗಳ ಮೂಲಕ ಸೇವೆ ಸಲ್ಲಿಸಿದ್ದರು.

ಅದೇ ರೀತಿ, ಬಿ.ಪಿ.ಗಂಗಾಧರ್‌ರವರು 4ನೇ ವಿಧಾನಸಭೆಗೆ ತುಮಕೂರು ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಅವರು ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಬಿ.ಎಸ್ಸಿ. ಹಾಗೂ ಕಾನೂನು ಪದವೀಧರರಾಗಿದ್ದ ಶ್ರೀಯುತರು ಇಂದು ನಮ್ಮನ್ನು ಅಗಲಿದ್ದಾರೆ.

ನಾಡುನುಡಿಯ ಬಗ್ಗೆ, ನಾಡಿನ ಅಭಿವೃದ್ಧಿಯ ಬಗ್ಗೆ ತಮ್ಮ ಜೀವನದುದ್ದಕ್ಕೂ ದುಡಿದಂಥ ಇಂಥ ಮಹನೀಯರನ್ನು ಕಳೆದುಕೊಂಡು ಕನ್ನಡ ನಾಡು ಬಡವಾಗಿದೆ. ಇವರೆಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರಿ, ಅವರ ನಿಧನದಿಂದ ಉಂಟಾಗಿರುವಂಥ ನೋವನ್ನು ತಡೆದುಕೊಳ್ಳತಕ್ಕಂಥ ಶಕ್ತಿ ಅವರ ಕುಟುಂಬ ವರ್ಗದವರಿಗೆ ಬರಲಿ

ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡಿ, ಅಧ್ಯಕ್ಷರು ಮಂಡಿಸಿರುವ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸಿ, ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ತಾವು ಇವತ್ತು ಈ ಸದನದ ಮುಂದೆ ಮಂಡಿಸಿರತಕ್ಕಂಥ ಸಂತಾಪ ಸೂಚಕ ನಿರ್ಣಯಕ್ಕೆ ಬೆಂಬಲವನ್ನು ಸೂಚಿಸುತ್ತಾ, ಕಳೆದ ಅಧಿವೇಶನದ ನಂತರ, ಹಿಂದೆ ಈ ಮನೆಯ ಸದಸ್ಯರಾಗಿದ್ದಂಥ 4–5 ಜನರು ಕಾಲವಾಗಿದ್ದಾರೆ. ಮೇಲ್ಮನೆಯ ಒಬ್ಬರು ಹಾಲಿ ಸದಸ್ಯರು ಇವತ್ತು ನಮ್ಮನ್ನು ಅಗಲಿದ್ದಾರೆ. ಅವರಿಗೆ ಸಂತಾಪ ವ್ಯಕ್ತ ಮಾಡತಕ್ಕಂಥ ಅವಕಾಶವನ್ನು ತಾವು ಕಲ್ಪಿಸಿ ಕೊಟ್ಟಿದ್ದೀರಿ.

ಮೊದಲನೆಯದಾಗಿ, ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು, ಸಮಾಜದ ಅನೇಕ ಕ್ಷೇತ್ರಗಳಲ್ಲಿ ಸೇವೆಯನ್ನು ಮಾಡಿದಂಥ ಒಬ್ಬ ಆದರ್ಶ ನಾಯಕ ಎಂದು ಈ ಸಂದರ್ಭದಲ್ಲಿ ನೆನೆದುಕೊಳ್ಳಲು ನಾನು ಇಚ್ಛೆಪಡುತ್ತಿದ್ದೇನೆ. ಅವರು ವಿಧಾನಸಭೆಯಲ್ಲಿ ಸದಸ್ಯರಾಗಿದ್ದರು. ಮೇಲ್ಮನೆಯಲ್ಲೂ ಸಹ 2 ಬಾರಿ ಸದಸ್ಯರಾಗಿದ್ದರು. ಅವರು ತಮ್ಮ ಜೀವನದುದ್ದಕ್ಕೂ ಕೂಡ ಗಾಂಧಿವಾದಿಯಾಗಿ ಬದುಕಿದ್ದರು. ಅವರು ಸರಳವಾದಂಥ ಜೀವನವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, ತಮ್ಮ ಉಸಿರಿರುವ ಕೊನೆಯ ಘಳಿಗೆಯವರೆಗೆ ಕೂಡ ಗಾಂಧಿವಾದದಲ್ಲಿ, ಅವರ ಕಾರ್ಯತತ್ವದಲ್ಲಿ ಅಚಲವಾದ ನಂಬಿಕೆಯನ್ನು ಇಟ್ಟುಕೊಂಡು ಬದುಕಿದಂಥ ಒಬ್ಬ ಮಹಾನ್ ನಾಯಕ ಎಂದು ನಾವೆಲ್ಲರೂ ಸ್ಮರಿಸಿಕೊಳ್ಳಬೇಕಾಗುತ್ತದೆ. ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದವರು, ಅದಕ್ಕಾಗಿ ಜೈಲುವಾಸ ಅನುಭವಿಸಿದಂಥವರು ಅವರು. ಬಹಳ ಮುಖ್ಯವಾಗಿ ಅವರು ಶಿಕ್ಷಣ ಕ್ಷೇತ್ರದಲ್ಲಿ ಅಪಾರವಾದಂಥ ಕೆಲಸವನ್ನು ಮಾಡಿದ್ದಾರೆ. ಮಲೆನಾಡು ವಿದ್ಯಾ ಸಂಸ್ಥೆಯಲ್ಲಿ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಅನೇಕ ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ಲೋಕ ಶಿಕ್ಷಣ ಸಂಸ್ಥೆಯ, ಸಂಯುಕ್ತ ಕರ್ನಾಟಕ ಪತ್ರಿಕೆಯ ಅಧ್ಯಕ್ಷರಾಗಿ ಕೂಡ ಕೆಲಸ ಮಾಡಿ ಆ ಪತ್ರಿಕೆಗೆ ಒಂದು ಹೊಸ ಆಯಾಮವನ್ನು ಕೊಡತಕ್ಕಂಥ, ಪತ್ರಿಕೋದ್ಯಮದ ಮೌಲ್ಯಗಳನ್ನು ಎತ್ತಿ ಹಿಡಿಯತಕ್ಕಂಥ ಎಲ್ಲ ಪ್ರಾಮಾಣಿಕ ಪ್ರಯತ್ನಗಳನ್ನೂ ಕೂಡ ಅವರು ಮಾಡಿದ್ದಾರೆ. ಅವರು ಶಾಸಕರಾಗಿದ್ದಾಗ ನಾನು ಇಲ್ಲಿ ಇರಲಿಲ್ಲ. ಅವರು 1978ರಿಂದ 1983ರವರೆಗೆ ಇಲ್ಲಿ ಶಾಸಕರಾಗಿದ್ದರು. ನಾವು ಇಲ್ಲಿಗೆ 1983ರ ನಂತರ ಬಂದಂಥದವರು. ಈ ಮಧ್ಯೆ 2 ಬಾರಿ ಅವರು ಮೇಲ್ಮನೆಯ ಸದಸ್ಯರಾಗಿದ್ದರು. ಅವರು ಒಮ್ಮೆ ಇಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಯಾಗಿ ಈ ರಾಜ್ಯದ ಸೇವೆಯನ್ನು ಮಾಡತಕ್ಕಂಥ ಪ್ರಯತ್ನವನ್ನು ಮಾಡಿದ್ದಾರೆ. ಅವರು ಸ್ವತ: ವಕೀಲರಾಗಿದ್ದರು, ಕಾನೂನಿನ Professor ಆಗಿದದರು. ಸಂವಿಧಾನ ಮತ್ತು ಅಂತರರಾಷ್ಟ್ರೀಯ ವಿಚಾರಗಳ ಬಗ್ಗೆ ಕಾನೂನು ಕಾಲೇಜಿನಲ್ಲಿ ಸ್ವತ: ಅವರು ಪ್ರಾಧ್ಯಾಪಕರಾಗಿ ಕೆಲಸ ಮಾಡಿದ್ದರು. ಹಾಗಾಗಿ, ಅವರು ಕಾನೂನು ತಜ್ಞರು ಕೂಡ ಆಗಿದ್ದರು. ಬಹಳ ಮುಖ್ಯವಾಗಿ ಅವರು ರಾಜ್ಯದ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಒಂದು

ಪ್ರಮುಖವಾದಂಥ ವರದಿಯನ್ನು ರಾಜ್ಯ ಸರ್ಕಾರಕ್ಕೆ ಕೊಟ್ಟಿದ್ದಾರೆ. ಯಾವ್ಯಾವ ಭಾಗಗಳಲ್ಲಿ ಆಡಳಿತ ಸುಧಾರಣೆಯಾಗಬೇಕು, ಆಡಳಿತದಲ್ಲಿ ಅನಗತ್ಯ ವೆಚ್ಚವನ್ನು ಯಾವ ರೀತಿ ಕಡಿಮೆ ಮಾಡಬೇಕು, ರಾಜ್ಯದಲ್ಲಿ resources ಅನ್ನು ಹೆಚ್ಚು mobilize ಮಾಡಬೇಕಾದರೆ ಏನು ಮಾಡಬೇಕು, ಆಡಳಿತ ಜನರ ಬಳಿ ಹೋಗಬೇಕಾದರೆ, ಪರಿಣಾಮಕಾರಿಯಾಗಿರಬೇಕಾದರೆ ಸರ್ಕಾರ ಯಾವ ರೀತಿ ಕೆಲಸ ಮಾಡಬೇಕನ್ನತಕ್ಕಂಥ ಅನೇಕ ವಿಚಾರಗಳಲ್ಲಿ ಬಹಳ ಪ್ರಾಮುಖ್ಯವಾದ ವರದಿಯನ್ನು ಅವರು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅದು ಇವತ್ತಿಗೂ ಕೂಡ ಆಡಳಿತ ನಡೆಸತಕ್ಕಂಥವರಿಗೆ, ಆಡಳಿತದಲ್ಲಿ ಬದಲಾವಣೆಯನ್ನು ತರಬೇಕೆನ್ನುವುದಕ್ಕೆ, ಆಡಳಿತದಲ್ಲಿ ಪಾರದರ್ಶಕವನ್ನು ತರಬೇಕೆನ್ನತಕ್ಕಂಥದ್ದಕ್ಕೆ ಬಹಳ ಉಪಯೋಗವಾಗುತ್ತದೆ ಎನ್ನುವುದು ನನ್ನ ಭಾವನೆ. ನಾನೂ ಕೂಡ ಆ ವರದಿಯನ್ನು ಓದಿದ್ದೇನೆ. ಅವರು ಸರ್ಕಾರದಲ್ಲಿದ್ದು, ಶಾಸಕರಾಗಿ, ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡಿ, ಜನರ ನಡುವೆ ಕೆಲಸ ಮಾಡಿ ಎಲ್ಲ ಅನುಭವಗಳನ್ನೂ ಕೂಡ ಆ ವರದಿಯಲ್ಲಿ ಅವರು ತಂದಿದ್ದಾರೆನ್ನುವುದನ್ನು ನಾನಿವತ್ತು ನೆನಪಿಸಿಕೊಳ್ಳಬೇಕಾಗುತ್ತದೆ. ಆ ವರದಿ ಅತ್ಯಂತ ಉಪಯುಕ್ತವಾಗುತ್ತದೆ. ಇವತ್ತು ಮತ್ತು ಮುಂದೆಯೂ ಕೂಡ ಸರ್ಕಾರ ಬಳಸಿಕೊಳ್ಳಲಿಕ್ಕೆ ಅದು ಅತ್ಯಂತ ಪ್ರಸ್ತುತ ಎನ್ನುವ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಅಂಥ ಒಬ್ಬ ಅಪ್ಪಟ ಗಾಂಧಿವಾದಿ, ಜೀವನದಲ್ಲಿ ಆದರ್ಶಗಳನ್ನು ಅಳವಡಿಸಿಕೊಂಡು, ಮೌಲ್ಯಗಳಲ್ಲಿ ಯಾವತ್ತೂ ಕೂಡ ರಾಜಿ ಮಾಡಿಕೊಳ್ಳದೆಯೇ ಬದುಕಿದ್ದಂಥ ಒಬ್ಬ ವ್ಯಕ್ತಿ ಎಂದು ಹೇಳಬೇಕಾಗುತ್ತದೆ. ಇವತ್ತು ಗಾಂಧಿವಾದಿಗಳನ್ನು ಒಬ್ಬೊಬ್ಬರನ್ನಾಗಿ ನಾವು ಕಳೆದುಕೊಳ್ಳುತ್ತಿದ್ದೇವೆ. ಆ ಕೊಂಡಿ ಇವತ್ತು ಕಡಿಮೆಯಾಗುತ್ತಾ ಇದೆ. ಅವರು ಬದುಕಿದ ರೀತಿ ಅವರು ಅವರ ಜೀವನದಲ್ಲಿ ಅಳವಡಿಸಿಕೊಂಡಿದ್ದಂತಹ ಮೌಲ್ಯಗಳು, ಇಂಥವರ ಆದರ್ಶಗಳು ಇವತ್ತಿಗೆ ಮತ್ತು ಇನ್ನೂ ಅನೇಕ ವರ್ಷಗಳಿಗೆ ಯುವಕರಿಗೆ, ನಮಗೆ, ಮುಂದಿನ ಪೀಳಿಗೆಗೆ ಮಾದರಿಯಾಗುತ್ತದೆನ್ನುವ ಮಾತನ್ನು ಈ ಸಂಧರ್ಭದಲ್ಲಿ ಹೇಳುತ್ತಾ, ಅಂಥ ಒಬ್ಬ ವ್ಯಕ್ತಿಯನ್ನು ನಾವು ದಿ:4.04.2009ರಂದು ಕಳೆದುಕೊಂಡಿದ್ದೇವೆ. ಇಡೀ ರಾಜ್ಯಕ್ಕೆ ಅವರ ನಿಧನದಿಂದ ದೊಡ್ಡ ನಷ್ಟವುಂಟಾಗಿದೆ. ನಮ್ಮೆಲ್ಲರಿಗೂ ಕೂಡ ನಷ್ಟವುಂಟಾಗಿದೆ. ಅವರು ಅಪ್ಪಟ ಕಾಂಗ್ರೆಸಿಗರೂ ಕೂಡ ಆಗಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಕೊನೆಯವರೆಗೂ ಕೂಡ ಕಾಂಗ್ರೆಸ್‌ನಲ್ಲಿದ್ದುಕೊಂಡು ಕಾಂಗ್ರೆಸ್‌ನ ಅನುಯಾಯಿಯಾಗಿ, ಮಾರ್ಗದರ್ಶಕರಾಗಿದ್ದರು. ರಾಜಕೀಯದಲ್ಲಿದ್ದಂತಹ ಅನೇಕ ಜನರಿಗೆ ಮಾರ್ಗದರ್ಶನವನ್ನು ಮಾಡುವ ಕೆಲಸವನ್ನು ಕೂಡ ಅವರು ಮಾಡಿಕೊಂಡು ಬಂದಿದ್ದರು. ಹಾಗಾಗಿ, ಅವರ ನಿಧನ ಕಾಂಗ್ರೆಸ್ ಪಕ್ಷಕ್ಕೂ ಕೂಡ ದೊಡ್ಡ ನಷ್ಟವಾಗಿದೆ ಮತ್ತು ಸಮಾಜಕ್ಕೆ, ನಾಡಿಗೆ ಕೂಡ ದೊಡ್ಡ ನಷ್ಟವಾಗಿದೆ. ಅಂಥ ವ್ಯಕ್ತಿಯನ್ನು ನಾವು

ಕಳೆದುಕೊಂಡಿದ್ದೇವೆ. ಈ ಸಂದರ್ಭದಲ್ಲಿ ನಾನು ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ಪ್ರಾರ್ಥನೆ ಮಾಡುತ್ತೇನೆ.

ಹಾಗೆಯೇ, ಇದಿನಬ್ಬರವರು ನಮ್ಮ ಜೊತೆಯಲ್ಲಿ ಇಲ್ಲಿ ಶಾಸಕರಾಗಿದ್ದರು. ಇವರು ಉಳ್ಳಾಲ ಕ್ಷೇತ್ರದಿಂದ ಮೂರು ಬಾರಿ ಆ ಕ್ಷೇತ್ರವನ್ನು ಪ್ರತಿನಿಧಿಸಿ, ಕರ್ನಾಟಕ ವಿಧಾನಸಭೆಯಲ್ಲಿ ಕೆಲಸ ಮಾಡಿದ್ದಾರೆ. ಅವರಿಗೆ ಸಾಹಿತ್ಯದಲ್ಲಿ ಅಪಾರವಾದ ಅಭಿರುಚಿ ಇತ್ತು, ಕನ್ನಡದದಲ್ಲಿ ಅವರು ಬಹಳಷ್ಟು ಸಾಹಿತ್ಯ ರಚನೆ ಮಾಡಿದ್ದರು. ಕನ್ನಡದ ಬಗ್ಗೆ ಅಪಾರವಾದಂಥ ಅಭಿಮಾನವನ್ನಿಟ್ಟುಕೊಂಡಿದ್ದರು. ಅವರು ಸ್ವತಃ ಕವಿಯಾಗಿದ್ದರು. ನಾವು Treasury Bench ನಲ್ಲಿದ್ದಾಗ ಅವರು ಅಲ್ಲಿ ಕುಳಿತಿದ್ದರು. ವಿಧಾನ ಸಭೆಯಲ್ಲಿ ಅನೇಕ ವಿಷಯಗಳು ಚರ್ಚೆಗೆ ಬಂದಾಗ, ಕನ್ನಡ ಮಾತೃ ಭಾಷೆಯಾಗಿರುವವರು ಕೂಡ ಅಷ್ಟೊಂದು ಸ್ಪಷ್ಟವಾಗಿ ಇದಿನಬ್ಬರವರು ಮಾತನಾಡುವ ಹಾಗೆ ಮಾತನಾಡುತ್ತಿರಲಿಲ್ಲ. ಅಷ್ಟರಮಟ್ಟಿಗೆ ಕನ್ನಡದಲ್ಲಿ ಅವರಿಗೆ ಪರಿಶ್ರಮವಿತ್ತು, ಪ್ರೌಢಿಮೆ ಇತ್ತು. ಅವರು ಅನೇಕ ಸಾಹಿತ್ಯ ರಚಿಸಿದ್ದು, ಪುಸ್ತಕಗಳನ್ನು ಬರೆದಿರುವುದು, ಕೃತಿಗಳನ್ನು ರಚನೆ ಮಾಡಿರುವುದು ಇದೆ. ಅವರು ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಬಹಳ ವರ್ಷ ಕೆಲಸ ಮಾಡಿದ್ದಾರೆ. ಅವರ ಸಾಹಿತ್ಯ ಅಭಿರುಚಿಯನ್ನು ನೋಡಿ ಆ ಭಾಗದ ಜನರು ಹರ್ಷ ವ್ಯಕ್ತಪಡಿಸಿದ್ದಾರೆ. ಅವರು ಕನ್ನಡ ಸಾಹಿತ್ಯಕ್ಕೆ ಅಪಾರವಾದ ಸೇವೆಯನ್ನು ನೀಡಿದ್ದಾರೆ. ಅದರ ಜೊತೆಗೆ, ಕಾಂಗ್ರೆಸ್ ಸರ್ಕಾರ ಇದ್ದಾಗ ಅವರನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ಮಾಡಿದ್ದರು. 1983ರಲ್ಲಿ ಕರ್ನಾಟಕದಲ್ಲಿ ಮೊದಲನೇ ಬಾರಿಗೆ ಕನ್ನಡ ಕಾವಲು ಸಮಿತಿಯ ಸಮಿತಿಯ ಅಧ್ಯಕ್ಷನನ್ನಾಗಿ ನನ್ನನ್ನು ನೇಮಿಸಿದ್ದರು. ಆ ಸಮಿತಿಗೆ ನಾನು ಮೊದಲನೇ ಅಧ್ಯಕ್ಷನಾಗಿದ್ದೆ. ಅದು ಆದಮೇಲೆ ಅದರ ಹೆಸರು ಬದಲಾವಣೆಯಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಎಂದು ಮಾಡಿ ಅದಕ್ಕೆ ಇನ್ನೂ ಹೆಚ್ಚು ವಿಸ್ತಾರವಾಗಿ ಅಧಿಕಾರ ಕೊಟ್ಟು, ಅದರ ಕ್ಷೇತ್ರ ವಿಸ್ತಾರ ಮಾಡಿ ಅದಕ್ಕೊಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿದರು. ಈಗ ಮೇಲ್ಮನೆ ಸದಸ್ಯರಾಗಿರುವಂಥ ಮಾನ್ಯ ಮುಖ್ಯಮಂತ್ರಿ ಚಂದ್ರುರವರು ಇದಕ್ಕೆ ಆದ್ಯಕ್ಷರಾಗಿದ್ದಾರೆ. ಇದಿನಬ್ಬರವರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಆಡಳಿತದಲ್ಲಿ ಕನ್ನಡ ಇರಬೇಕೆನ್ನುವುದರ ಬಗ್ಗೆ ಬಹಳಷ್ಟು ಶ್ರಮವನ್ನು ಪಟ್ಟಿದ್ದಾರೆ. ಅನೇಕ ಶಿಫಾರಸುಗಳನ್ನು, ಸಲಹೆಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಇವತ್ತಿಗೂ ಅವು ಬಹಳ ಪ್ರಸ್ತುತ. ಇವತ್ತು ಆಡಳಿತದಲ್ಲಿ ಇನ್ನೂ ಸಂಪೂರ್ಣವಾಗಿ ಕನ್ನಡ ಬಳಕೆಯಾಗಿಲ್ಲವೆನ್ನುವುದನ್ನು ಕೂಡ ನಾವು ನೋಡುತ್ತಿದ್ದೇವೆ. 1984ರಿಂದ ಇವತ್ತಿನವರೆಗೆ ಅನೇಕ circular ಗಳು ಹೊರಟಿದ್ದರೂ ಕೂಡ ಕನ್ನಡ ರಾಜ್ಯದ ಆಡಳಿತದ ಭಾಷೆಯಾಗಿಲ್ಲ. ಮಾನ್ಯ ಮುಖ್ಯಮಂತ್ರಿ ಚಂದ್ರುರವರು ಇವತ್ತಿಗೂ ಕೂಡ ಅನೇಕ ಅಧಿಕಾರಿಗಳು ಕನ್ನಡವನ್ನು ಬಳಸುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಈ ಕೂಗನ್ನು ಅವರೂ ಕೂಡ ಅನೇಕ ಸಲ ವಿಧಾನಸಭೆ ಒಳಗಡೆ, ಹೊರಗಡೆ ಮಾಡಿದ್ದರು. ಇವತ್ತು ಕನ್ನಡ ಆಡಳಿತ

ಭಾಷೆಯಾಗಬೇಕೆನ್ನುವುದರ ಬಗ್ಗೆ ಅಪಾರವಾದ ಕಾಳಜಿಯನ್ನಿಟ್ಟುಕೊಂಡು ಅದರ ಅಗತ್ಯತೆ ಎಷ್ಟಿದೆ ಎನ್ನುವುದನ್ನು ಕೂಡ ತಿಳಿದುಕೊಂಡಿದ್ದರಿಂದ ಅವರು ಬಹಳಷ್ಟು ಶಿಫಾರಸುಗಳನ್ನು ಮಾಡಿದ್ದರು. ಅನೇಕ ಪ್ರಶಸ್ತಿಗಳೂ ಕೂಡ ಅವರಿಗೆ ಸಿಕ್ಕಿವೆ. ಅವರ ಕನ್ನಡ ಸಾಹಿತ್ಯಕ್ಕೆ 2–3 ಪ್ರಶಸ್ತಿಗಳು ಅವರಿಗೆ ಸಿಕ್ಕಿವೆ. ಕನ್ನಡ ರಾಜ್ಯೋತ್ಸವ, ಗೊರೂರು, ಅತ್ತಿಮಬ್ಬೆ ಪ್ರಶಸ್ತಿಗಳು ಹೀಗೆ ಅವರು ಅನೇಕ ಸಂಘ ಸಂಸ್ಥೆಗಳಿಂದ ಸನ್ಮಾನಕ್ಕೆ ಕೂಡ ಒಳಗಾಗಿದ್ದರು. ಹಾಗಾಗಿ, ಕನ್ನಡ ಸಾಹಿತ್ಯ ಲೋಕದಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿದ್ದ ಒಬ್ಬ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಇವರೂ ಕೂಡ ಗಾಂಧಿವಾದಿಯಾಗಿದ್ದರು. ಬಹಳ ಸರಳವಾಗಿರುತ್ತಿದ್ದರು. ಗಾಂಧೀಜಿಯವರ ವಿಷಯದಲ್ಲಿ ಬಹಳಷ್ಟು ನಂಬಿಕೆ ಇಟ್ಟುಕೊಂಡಿದ್ದರು. ಅಂಥವರನ್ನು ನಾವು ಕಳೆದುಕೊಂಡಿದ್ದೇವೆ. ಅವರು ದಿ:11–04–2009ರಂದು ನಿಧನರಾಗಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲೆಂದು ಈ ಸಂಧರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ವಾಸುದೇವರವರು ನಮ್ಮ ಮೈಸೂರಿನವರು. ಅವರು 1983ರಲ್ಲಿ ಟಿ. ನರಸೀಪುರ ಕ್ಷೇತ್ರದಿಂದ ಎರಡು ವರ್ಷಗಳ ಕಾಲ ಶಾಸಕರಾಗಿದ್ದರು. ಕ್ರಾಂತಿರಂಗ ಪಕ್ಷದಿಂದ ಗೆದ್ದು ಆನಂತರ ಜನತಾ ಪಕ್ಷಕ್ಕೆ ಬಂದು ಎರಡು ವರ್ಷಗಳ ಕಾಲ ಶಾಸಕರಾಗಿದ್ದರು. ನಂತರ, ಮಧ್ಯಂತರ ಚುನಾವಣೆಯಾದ ಮೇಲೆ ಹೆಚ್.ಸಿ. ಮಹದೇವಪ್ಪನವರು ಆ ಕ್ಷೇತ್ರದಿಂದ M.L.A. ಆದರು ಅದಕ್ಕೆ ಮೊದಲು ಅವರು ಎರಡು ವರ್ಷಗಳ ಕಾಲ ಶಾಸಕರಾಗಿದ್ದರು. ಅವರು ಯಾವಾಗಲೂ ಕೂಡ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಸಾಮಾಜಿಕ ನ್ಯಾಯದಿಂದ ವಂಚಿತರಾದವರ ಪರವಾಗಿ ಹೋರಾಟ ಮಾಡುತ್ತಿದ್ದರು, ಸಂಘಟನೆ ಮಾಡತಕ್ಕಂಥಹ ಕೆಲಸವನ್ನು ಅವರು ಮಾಡುತ್ತಿದ್ದರು. ಆದರೆ, ಅವರು ಬಹಳ ಚಿಕ್ಕವಯಸ್ಸಿನಲ್ಲಿಯೇ ಕಾಲವಾಗಿದ್ದರೆ. ಅವರು ನಮಗೆಲ್ಲರಿಗೂ ಒಳ್ಳೆಯ ಸ್ನೇಹಿತರಾಗಿದ್ದರು. ಅವರನ್ನು ನಾವು ಕಳೆದುಕೊಂಡಿದ್ದೇವೆ. ಅವರು ದಿ:13–04–2009ರಂದು ನಮ್ಮನ್ನೆಲ್ಲ ಅಗಲಿದ್ದಾರೆ. ಅವರ ಆತ್ಮಕ್ಕೂ ಕೂಡ ಶಾಂತಿ ಸಿಗಲೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ.

ಜಿ. ಶಂಕರೇಗೌಡರವರು ಹೊಸಪೇಟೆ ಕ್ಷೇತ್ರದಿಂದ ಎರಡು ಸಲ ಅಂದರೆ, 1983ರಲ್ಲಿ ಒಂದು ಸಾರಿ ಮತ್ತು ಅಮೇಲೆ ಇನ್ನೊಂದು ಸಾರಿ ಆಯ್ಕೆಯಾಗಿದ್ದರು. ಅವರು ಶಿಕ್ಷಣ ಸಂಸ್ಥೆಗಳಲ್ಲಿ ಅಪಾರವಾಗಿ ಕೆಲಸ ಮಾಡಿದಂಥವರು. ಅವರು ಬಹಳ ಸಜ್ಜನ ವ್ಯಕ್ತಿಯಾಗಿದ್ದರು. ಅವರು ಎಂ.ಎಲ್.ಎ.ಯಾಗಿ ನಮ್ಮ ಜೊತೆಯಲ್ಲಿದ್ದರು. ಅವರು ಬಹಳ ಕಡಿಮೆ ಮಾತನಾಡುತ್ತಿದ್ದರು. ಅವರು ಒಬ್ಬ ಹೋರಾಟಗಾರರು. ಎಲ್ಲದಕ್ಕಿಂತ ಹೆಚ್ಚಾಗಿ ರೈತಪರವಾದಂಥಹ ಹೋರಾಟ ಮಾಡುತ್ತಿದ್ದರು. ಹೊಸಪೇಟೆ ಮತ್ತು ಆ ಭಾಗದಲ್ಲಿ ರೈತರ ಪರವಾಗಿ, ಕಬ್ಬು ಬೆಳೆಗಾರರ ಪರವಾಗಿ ಹೋರಾಟ ಮಾಡುತ್ತಿದ್ದರು ಮತ್ತು ಒಬ್ಬ ರೈತ ಪರವಾಗಿ ಕಾಳಜಿ ಇಟ್ಟುಕೊಂಡಿದ್ದವರು,

KAR-010549

ಗ್ರಾಮೀಣ ಜನರ ಬದುಕಿನ ಬಗ್ಗೆ ಅಪಾರವಾದ ಕಾಳಜಿ ಇಟ್ಟುಕೊಂಡಿದ್ದವರು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಎಂ.ಬಿ. ದಿವಟರ್‌ರವರು ಕೊಪ್ಪಳ ಕ್ಷೇತ್ರದಿಂದ ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಅವರು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದರು. ನಾವು ಶಾಸನ ಸಭೆಯಲ್ಲಿದ್ದಾಗ ಅವರೂ ಕೂಡ ಇಲ್ಲಿದ್ದರು. ಅವರು ಬಹಳ ಒಳ್ಳೆಯ ಮನುಷ್ಯರು. ಅವರು ಮಿತಭಾಷಿಯಾಗಿದ್ದರು. ಅವರು ಸ್ನೇಹಮಹಿಯಾಗಿದ್ದರು ಮತ್ತು ಜನಪರ ಕಾಳಜಿ ಇಟ್ಟುಕೊಂಡಿದ್ದರು. ಅವರೂ ಕೂಡ ನಮ್ಮನ್ನಗಲಿದ್ದು ದಿನಾಂಕ 26.05–2009ರಲ್ಲಿ ನಿಧನರಾಗಿದ್ದಾರೆ. ಅವರ ಆತ್ಮಕ್ಕೆ ಕೂಡ ಶಾಂತಿ ಸಿಗಲೆಂದು ಪ್ರಾರ್ಥಿಸುತ್ತೇನೆ.

ಬಿ.ಪಿ.ಗಂಗಾಧರ್‌ರವರು ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನವರು. ಅವರು ಒಂದು ಸಲ ವಿಧಾನಸಭೆಯ ಸದಸ್ಯರಾಗಿದ್ದರು. ಅವರು ಸಮಾಜವಾದಿ ಪಕ್ಷದಲ್ಲಿದ್ದು ಸ್ವಾತಂತ್ರ್ಯಕ್ಕೋಸ್ಕರ ಹೋರಾಟ ಮಾಡಿದವರು. ನಾನು ಅನೇಕ ಸಲ ಅವರನ್ನು ಭೇಟಿಯಾಗಿದ್ದೇನೆ. ಸಮಾಜವಾದದಲ್ಲಿ ಅವರು ಅಪಾರವಾದ ನಂಬಿಕೆಯನ್ನಿಟ್ಟುಕೊಂಡು ಪ್ರಮಾಣಿಕವಾಗಿ ಇದ್ದಂಥ ಒಬ್ಬ ವ್ಯಕ್ತಿಯಾಗಿದ್ದರು. ಜೊತೆಗೆ ಅವರು ವಕೀಲಿ ಕೆಲಸವನ್ನು ಕೂಡ ತುಮಕೂರಿನಲ್ಲಿ ಮಾಡುತ್ತಿದ್ದರು. ಅವರು ವಿಧಾನಸಭಾ ಸದಸ್ಯರಾಗಿದ್ದಾಗ ಮೈಸೂರು ವಿಧಾನಸಭೆ ಎನ್ನುವುದು ಕರ್ನಾಟಕ ವಿಧಾನಸಭೆ ಎಂದಾಗಬೇಕು ಮತ್ತು ಮೈಸೂರು ರಾಜ್ಯ ಎಂದಿರುವುದು ಕರ್ನಾಟಕ ಎಂದಾಗಬೇಕು ಎನ್ನುವ ಬಗ್ಗೆ ವಿಧಾನಸಭೆಯಲ್ಲಿ ಬಹಳ ದೀರ್ಘವಾಗಿ ತಮ್ಮ ವಾದವನ್ನು ಮಂಡಿಸಿದ್ದಾರೆ. ಇವತ್ತು ಏನಾದರೂ ಕರ್ನಾಟಕ ವಿಧಾನಸಭೆ ಎಂದು ನಾಮಕರಣವಾಗಿದ್ದರು, ಮೈಸೂರು ರಾಜ್ಯಕ್ಕೆ ಕರ್ನಾಟಕ ರಾಜ್ಯ ಎಂದು ಆಗಿದ್ದರು ಅದಕ್ಕೆ ಅವರೂ ಕಾರಣ ಮತ್ತು ಅವರು ಕರ್ನಾಟಕ ಏಕೀಕರಣಕ್ಕೆ ಹೋರಾಟ ಮಾಡಿದ ವ್ಯಕ್ತಿಯಾಗಿದ್ದರು. ಅವರು ಎಲ್ಲಾ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗಿಯಾಗಿ ಕರ್ನಾಟಕ ಎಂದು ನಾಮಕರಣವಾಗಲಿಕ್ಕೆ, ಕರ್ನಾಟಕ ವಿಧಾನಸಭೆ ಎಂದು ಆಗಲಿಕ್ಕೆ ಅವರು ಕೊಡುಗೆಯೂ ಇದೆ ಎಂದು ನಾನು ಅವರನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಲಿಕ್ಕೆ ಬಯಸುತ್ತೇನೆ. ಅವರು ನಮ್ಮನ್ನು ಆಗಲಿದ್ದಾರೆ. ಅವರ ಆತ್ಮಕ್ಕೂ ಕೂಡ ಶಾಂತಿ ಸಿಗಲೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಬಿ.ಟಿ. ಚನ್ನಬಸಪ್ಪರವರು ಎರಡು ಬಾರಿ ಮೇಲ್ಮನೆ ಸದಸ್ಯರಾಗಿದ್ದರು. ಅವರು 2004ರಲ್ಲಿ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿ ಕೆಲಸ ಮಾಡುತ್ತಿದ್ದರು. ಅವರು sitting member ಆಗಿದ್ದರು. ಅವರ ವಯಸ್ಸು ಇನ್ನೂ ಚಿಕ್ಕದಿತ್ತು. ಅವರು ಸುಮಾರು ತಮ್ಮ 50ನೇ ವಯಸ್ಸಿನಲ್ಲಿ ತೀರಿ ಹೋಗಿದ್ದಾರೆ. ಅವರು ಬಹಳ ಸಜ್ಜನ ವ್ಯಕ್ತಿ. ಅವರು ತಮ್ಮನ್ನು ವಾಣಿಜ್ಯೋದ್ಯಮದಲ್ಲೂ ಕೂಡ ತೊಡಗಿಸಿಕೊಂಡಿದ್ದರು.

ನಮ್ಮ ಜೊತೆ ಅವರು ಮೊದಲನೇ ಬಾರಿ ಶಾಸಕರಾಗಿದ್ದರು. ನಾನು ಜನತಾ ಪಾರ್ಟಿಯಲ್ಲಿದ್ದಾಗ ಅವರು ಮೇಲ್ಮನೆ ಸದಸ್ಯರಾಗಿ ಕೆಲಸ ಮಾಡುತ್ತಿದ್ದರು. ಅವರು ಈಗ ಅಕಾಲ ಮರಣಕ್ಕೆ ತುತ್ತಾಗಿದ್ದಾರೆ. ಅವರಿಗೂ ಕೂಡ ಅನೇಕ ಪ್ರಶಸ್ತಿಗಳು ದೊರಕಿವೆ. ನಾವು ಒಬ್ಬ ಒಳ್ಳೆಯ ವ್ಯಕ್ತಿಯನ್ನು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಮತ್ತು ಎಲ್ಲರಿಗೂ ಕೂಡ ಚಿರಶಾಂತಿ ದೊರಕಲಿ ಮತ್ತು ಅವರ ಕುಟುಂಬವರ್ಗದವರಿಗೆ ಇವರ ಸಾವಿನ ದು:ಖವನ್ನು ಭರಿಸುವ ಶಕ್ತಿ ಬರಲೆಂದು ಹೇಳುತ್ತಾ, ನಿಮಗೆ ಮತ್ತೊಮ್ಮೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ(ಹೊಳೆನರಸೀಪುರ): ಮಾನ್ಯ ಅಧ್ಯಕ್ಷರೆ, ಮಾಜಿ ಸಚಿವರಾದ ಹಾರ್ನಳ್ಳಿ ರಾಮಸ್ವಾಮಿ, ವಿಧಾನಸಭೆಯ ಮಾಜಿ ಸದಸ್ಯರಾದ ಬಿ.ಎಂ. ಇದಿನಬ್ಬ, ವಾಸುದೇವ. ಜಿ. ಶಂಕರೇಗೌಡ, ಎಂ.ಬಿ. ದಿವಟರ, ಬಿ.ಪಿ.ಗಂಗಾಧರ, ಮತ್ತು ವಿಧಾನಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಚನ್ನಬಸಪ್ಪ ಇವರ ನಿಧನಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ. ಸನ್ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು ಹಾಸನ ಜಿಲ್ಲೆಯವರು. ಅವರು ಸ್ವಾತಂತ್ರ್ಯಯ ಹೋರಾಟಗಾರರಾಗಿದ್ದರು ಮತ್ತು ಅವರು ಹಲವಾರು ವಿದ್ಯಾ ಕ್ಷೇತ್ರಗಳಲ್ಲಿ ತೊಡಗಿದ್ದರು. ವಕೀಲ ವೃತ್ತಿಯಿಂದ ಪ್ರಾರಂಭ ಮಾಡಿ 1960ರಿಂದ 66ರ ವರೆಗೆ ಮತ್ತು 1990ರಿಂದ 1992ರ ವರೆಗೆ ವಿಧಾನಪರಿಷತ್ತಿನ ಸದಸ್ಯರಾಗಿದ್ದರು. 1972ರಿಂದ 1983ರವರೆಗೆ ಗಂಡಸಿ ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿದ್ದರು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿ, ಮುಜರಾಯಿ ಇಲಾಖಾ ಸಚಿವರಾಗಿ 2000ನೇ ಇಸವಿಯಲ್ಲಿ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಅವರು ಉತ್ತಮ ಹೋರಾಟಗಾರರಾಗಿದ್ದರು ಮತ್ತು ಪಕ್ಷಾತೀತವಾಗಿದ್ದಂಥ ಧುರೀಣರಲ್ಲಿ ಹಾರ್ನಳ್ಳಿ ರಾಮಸ್ವಾಮಿಯವರು ಸಹ ಒಬ್ಬರಾಗಿದ್ದರು ಎಂದು ಹೇಳಬೇಕಾಗುತ್ತದೆ. ಅವರ ನಿಧನ ನಮ್ಮ ಜಿಲ್ಲೆಗೆ, ರಾಜ್ಯಕ್ಕೆ, ರಾಜ್ಯದ ಜನತೆಗೆ ಅಗಾಧವಾದ ನೋವನ್ನುಂಟುಮಾಡಿದೆ. ಅದರ ಜೊತೆಗೆ ಇದಿನಬ್ಬರವರು 1920ರಲ್ಲಿ ಜನಿಸಿ ಮೈಸೂರು ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಕೃಷಿಕ ಸಮಾಜದ ಮಾರಾಟ ಸಹಕಾರ ಸಂಘದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಪ್ರಸ್ತುತ ಸಾಹಿತಿಗಳಾಗಿದ್ದವರು ಮತ್ತು ವಿಧಾನಸಭಾ ಸದಸ್ಯರಾಗಿ ಇವರು ಹಲವಾರು ಸಾಹಿತ್ಯವನ್ನು ನಿರ್ಮಿಸಿದ್ದರು. ಅವರ ನಿಧನಕ್ಕೆ ಮತ್ತು ವಾಸುದೇವರರವರು ಮೈಸೂರು ಜಿಲ್ಲೆಯವರು, ಶಂಕರೇಗೌಡರು, ದಿವಟರ್‌ರವರು, ಗಂಗಾಧರ, ಎರಡು ಬಾರಿ ವಿಧಾನಪರಿಷತ್ತಿನ ಸದಸ್ಯರಾಗಿದ್ದ ಚನ್ನಬಸಪ್ಪರವರುಗಳು ನಿಧನ ಹೊಂದಿದ್ದು ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಅವರ ಕುಟುಂಬ ವರ್ಗಕ್ಕೆ ಅವರ ಸಾವಿನ ದು:ಖವನ್ನು ಭರಿಸುವ ಶಕ್ತಿ ಸಿಗಲೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್(ಹುಬ್ಬಳ್ಳಿ ಧಾರವಾಡ ಪಶ್ಚಿಮ): ಮಾನ್ಯ ಅಧ್ಯಕ್ಷರೆ, ತಾವು ಸಂತಾಪ ಸೂಚಕ ನಿರ್ಣಯ ತಂದಿದ್ದಕ್ಕೆ ಮತ್ತು ನನಗೆ

ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ. ಇವತ್ತಿನ ದಿವಸ ನಮ್ಮ ನಾಯಕರಾದ ಮಾನ್ಯ ಮುಖ್ಯಮಂತ್ರಿಯವರು ಮತ್ತು ಅನೇಕ ಸದಸ್ಯರು ಈಗಾಗಲೇ ಸನ್ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರ ಬಗ್ಗೆ ಅನೇಕ ವಿಚಾರಗಳನ್ನು ಸಭೆಯ ಮುಂದೆ ಹೇಳಿದ್ದಾರೆ. ರಾಮಸ್ವಾಮಿಯವರು ಅಪ್ಪಟ ಗಾಂಧಿವಾದಿಗಳಾಗಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮನ್ನು ತೊಡಗಿಸಿಕೊಂಡು ಅವರು ತಮ್ಮ ಇಡೀ ಜೀವನವನ್ನೇ ಗಾಂಧೀಜಿಯವರ ತತ್ವ ಸಿದ್ಧಾಂತಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಕಾರ್ಯ ನಿರ್ವಹಿಸಿದ್ದವರು. ಈ ವಿಧಾನಸಭೆಯ ಸದಸ್ಯರಾಗಿ, ಮಂತ್ರಿಯಾಗಿ, ಪ್ರಜಾತಂತ್ರ ಮತ್ತು ಜನತಂತ್ರದ ವಿಷಯವಾಗಿ ಸಾಕಷ್ಟು ಚಿಂತನೆಯನ್ನು ಮಾಡಿದ ಒಬ್ಬ ಚಿಂತಕರು. ಪ್ರಜಾತಂತ್ರದ ಬಗ್ಗೆ ಬಹಳ ಗಟ್ಟಿಯಾಗಿ ಆಡಳಿತ ಸುಧಾರಣೆ ಬಗ್ಗೆ ಬಹಳ ಉತ್ತಮವಾದ ವರದಿಯನ್ನು ಸಹ ಅವರು ಕೊಟ್ಟಿದ್ದಾರೆ. ಇವತ್ತಿನ ದಿವಸ ಅವರು ಕೊಟ್ಟಂಥ ವರದಿ ಬಹಳ ಮಹತ್ವದ್ದಾಗಿದೆ ಮತ್ತು ಆಡಳಿತ ಸುಧಾರಣೆ ಸಲುವಾಗಿ ಅದನ್ನು ಅನುಷ್ಠಾನದಲ್ಲಿ ತರಬೇಕಾದದ್ದು ಸಹ ಬಹಳ ಅಗತ್ಯವಾಗಿದೆ. ಅವರು ಒಬ್ಬ ಗಾಂಧಿವಾದಿಗಳಾಗಿ ಅನೇಕ ಹೋರಾಟಗಳಲ್ಲಿ ಭಾಗವಹಿಸಿ ಅವರು ಸ್ವಾತಂತ್ರ್ಯ ಚಳುವಳಿ ಮೂಲಕ ಜೈಲುವಾಸ ಅನುಭವಿಸಿ ತಮ್ಮ ಇಡೀ 87 ವರ್ಷಗಳ ಜೀವನದಲ್ಲಿ ಅವರು ಕೊಟ್ಟಂಥ ಅನೇಕ ವಿಚಾರಗಳು ಇವತ್ತು ನಮಗಲ್ಲ, ಇಲ್ಲಿನವರೆಗೆ ಮತ್ತು ಮುಂದಿನ ಪೀಳಿಗೆಗೆ ಆದರ್ಶವಾಗಿರುತ್ತಾರೆ. ಜನತಂತ್ರದಲ್ಲಿ ಇಂಥ ಆದರ್ಶವಾಗಿ ಬದುಕಿ ನಮಗೆಲ್ಲ ಮಾರ್ಗದರ್ಶನ ಮಾಡಿದಂಥವರ ಆದರ್ಶವನ್ನು ನಮ್ಮ ಜೀವನದಲ್ಲಿ ನಾವು ಇಟ್ಟುಕೊಂಡು ಇವತ್ತು ಪ್ರಜಾತಂತ್ರವನ್ನು ಸರಿಯಾಗಿ ನಡೆಸಬೇಕಾದಂಥ ಅಗತ್ಯವಿದೆ. ಇವರು ಅನೇಕ ಸಂಘಸಂಸ್ಥೆಗಳ ಮೂಲಕ ತಮ್ಮ ಸೇವೆ ಮಾಡಿದ್ದಾರೆ. ಬಹಳ ಮುಖ್ಯವಾಗಿ ಶಿಕ್ಷಣ ಕ್ಷೇತ್ರದಲ್ಲಿ ಮಲನಾಡು ಭಾಗದಲ್ಲಿನ ತಮ್ಮ ಒಂದು ಸಂಸ್ಥೆಯಲ್ಲಿ ಕಾರ್ಯದರ್ಶಿಯಾಗಿ, ಶಿಕ್ಷಣದ ಉನ್ನತಿಗಾಗಿ ಮಕ್ಕಳ ಶಿಕ್ಷಣಕ್ಕಾಗಿ ಬಹಳ ದೊಡ್ಡ ಕಾರ್ಯ ಮಾಡಿದ್ದಾರೆ. ಶಾಸನ ಸಭೆಗೆ ಅವರು ನೀಡಿದಂಥ ಅನೇಕ ವರದಿಗಳಲ್ಲಿ ಅವರು ವಿಚಾರವನ್ನು ನಾವು ಇವತ್ತು ಮೆಲಕು ಹಾಕಿ ನೋಡಬೇಕಾದ ಅಗತ್ಯತೆ ಇದೆ. ಸಂಯುಕ್ತ ಕರ್ನಾಟಕ ಎನ್ನುವ ಪತ್ರಿಕೆ ಮೊಟ್ಟಮೊದಲು ಸ್ವಾತಂತ್ರ್ಯಕ್ಕಾಗಿ ಕೆಲಸ ಮಾಡಿದಂಥ ಪತ್ರಿಕೆ. ಇದು ಲೋಕ ಶಿಕ್ಷಣ ಟ್ರಸ್ಟಿನ ಪತ್ರಿಕೆಯಾಗಿದ್ದು, ಉತ್ತಮವಾಗಿದ್ದು, ಇದರ ಬೆಳವಣಿಗೆಗೆ ಶ್ರೀಯುತರು ಸಾಕಷ್ಟು ಶ್ರಮಿಸಿದ್ದಾರೆ. ಅವರು ಯಾವತ್ತು ಪಕ್ಷಪಾತದಿಂದ ನಡೆದಂಥವರಲ್ಲ. ಕಾಂಗ್ರೆಸ್‌ನಲ್ಲಿದ್ದರೂ ಕೂಡ ಅಲ್ಲಿರುವಂಥ ಲೋಪದೋಷಗಳನ್ನು ಜನಗಳಿಗೆ ಎತ್ತಿ ತೋರಿಸುವಂಥ ಕೆಲಸ ಮಾಡಿದ್ದಾರೆ. ಜನತಂತ್ರದಲ್ಲಿ ಹೇಗೆ ನಡೆಯಬೇಕೆಂದು ಎಲ್ಲರಿಗೂ ಮಾರ್ಗದರ್ಶನ ಮಾಡಿದ್ದಾರೆ. ಅವರು ಒಂದು ಪಕ್ಷದಲ್ಲಿದ್ದರೂ ಪಕ್ಷಾತೀತವಾಗಿ ಎಲ್ಲಾ ಸಮಾಜದ ಒಳಿತಿಗಾಗಿ ಕೆಲಸ ಮಾಡಿದಂಥವರು. ಅವರು ಅನೇಕ ಪತ್ರಿಕಾ ಅಂಕಣಕಾರರಾಗಿ ಮತ್ತು ಜನವಾಣಿ ಪತ್ರಿಕೆಯ ಸಂಪಾದಕರಾಗಿ ಅವರು ಮಾಡಿದಂಥ ಕೆಲಸ ಇಡೀ

ಕರ್ನಾಟಕದ ಜನತೆಗೆ ಮತ್ತು ಜನತಂತ್ರ ವ್ಯವಸ್ಥೆಯಲ್ಲಿ ಇರುವಂಥ ನಮ್ಮಂಥ ಜನಪ್ರತಿನಿಧಿಗಳಿಗೆ ಹಾಗೂ ಸರ್ಕಾರ ನಡೆಸುವಂಥ ಅಧಿಕಾರಿಗಳಿಗೆ ಎಲ್ಲರಿಗೂ ಮಾರ್ಗದರ್ಶನ ಮಾಡುವಂಥ ಅನೇಕ ಉತ್ತಮವಾದ ವಿಚಾರಗಳನ್ನು ಆಡಳಿತದಲ್ಲಿ ತಂದಿದ್ದಾರೆ. ಇವರ ಅಗಲಿಕೆ ಇಡೀ ಕರ್ನಾಟಕಕ್ಕೆ ತುಂಬಲಾರದ ನಷ್ಟವೆಂದು ಹೇಳಬಯಸುತ್ತೇನೆ.

ಅದರಂತೆ ಇನ್ನೊಬ್ಬ ಅದ್ವಿತಿಯ ಕನ್ನಡ ಭಾಷಾಭಿಮಾನಿ ಬಿ.ಎಂ.ಇದಿನಬ್ಬನವರು. ಇವರು ಮತ್ತು ನಾವು ಇದೇ ವಿಧಾನ ಸಭೆಯಲ್ಲಿ ಕಾರ್ಯ ಮಾಡಿದ್ದೇವೆ. ಇವರು ಬಹಳ ದೊಡ್ಡ ಕನ್ನಡದ ಅಭಿಮಾನಿ ಮತ್ತು ಕನ್ನಡ ಭಾಷೆಯ ಬಗ್ಗೆ ಅಸ್ಖಲಿತವಾಗಿ ಮಾತನಾಡುವಂಥದವರು. ಇವರು ಅನೇಕ ಸಾಹಿತ್ಯಗಳನ್ನು ರಚಿಸಿದ್ದಾರೆ. ಮಕ್ಕಳ ಸಾಹಿತ್ಯವೂ ಸೇರಿದಂತೆ ಎಲ್ಲಾ ರಂಗದಲ್ಲೂ ಅವರು ಸಾಹಿತ್ಯವನ್ನು ರಚಿಸಿದ್ದಾರೆ. ಇವರು ಅಪ್ಪಟ ಗಾಂಧಿವಾದಿಗಳು, ತತ್ವಕ್ಕೆ ಬದ್ದರಾಗಿದ್ದವರು, ಯಾವಾಗಲೂ ಖಾದಿ ವೇಷದಲ್ಲಿರುವಂಥವರು. ಅವರು ಮಾತನಾಡುವ ಶೈಲಿಯೂ ಸಹಿತ ಅಪ್ರತಿಮ. ವಿಧಾನ ಸಭೆಯಲ್ಲಿ ಅವರು ಅಪ್ರತಿಮವಾಗಿ ಕನ್ನಡದಲ್ಲಿ ಭಾಷಣ ಮಾಡುತ್ತಿದ್ದರು. ಅವರಿಗೆ ಕುವೆಂಪುರವರ ಬಗ್ಗೆ ಬಹಳ ದೊಡ್ಡ ಅಭಿಮಾನ ಇತ್ತು. ಕುವೆಂಪುರವರ ಎಲ್ಲಾ ವಿಚಾರಗಳನ್ನು ಈ ಸಭೆಯಲ್ಲಿ ಅನೇಕ ಸಲ ವ್ಯಕ್ತಪಡಿಸಿದ್ದುಂಟು. ಅವರು ಕನ್ನಡ ಪ್ರಾದಿಕಾರದ ಅಧ್ಯಕ್ಷರಾಗಿದ್ದರು. ಈಗಾಗಲೇ ಅನೇಕ ಜನ ಹೇಳಿದಂತೆ ಅವರು ಕನ್ನಡ ಪ್ರಾದಿಕಾರದ ಅಧ್ಯಕ್ಷರಾಗಿದ್ದಾಗ ಕನ್ನಡದ ಬೆಳೆವಣಿಗೆಯ ಬಗ್ಗೆ, ಆಡಳಿತದಲ್ಲಿ ಕನ್ನಡ ಜಾರಿಗೆ ತರುವ ಬಗ್ಗೆ, ಅನೇಕ ಉತ್ತಮವಾದ ವಿಚಾರಗಳನ್ನು ಕೊಟ್ಟಂಥ ಒಬ್ಬ ಆದರ್ಶ ವ್ಯಕ್ತಿ. ಇವರನ್ನು ಕಳೆದುಕೊಂಡಿರುವುದು ಕರ್ನಾಟಕಕ್ಕೆ ತುಂಬಲಾರದ ನಷ್ಟ. ಅದರಲ್ಲೂ ಬಹಳ ಮುಖ್ಯವಾಗಿ ಅಲ್ಪಸಂಖ್ಯಾತರ ಪ್ರತಿನಿಧಿಯಾಗಿ, ಜನತಂತ್ರ ವ್ಯವಸ್ಥೆಯಲ್ಲಿ ಒಬ್ಬ ಜನಪ್ರತಿನಿಧಿಯಾಗಿ ಹೇಗಿರಬೇಕೆಂದು ಯಾವುದೇ ಪಕ್ಷಾಪಾತ ಮಾಡದೇ ಈ ಜನತಂತ್ರ ವ್ಯವಸ್ಥೆಯಲ್ಲಿ ಕಾರ್ಯ ಮಾಡಿದಂಥ ವ್ಯಕ್ತಿ. ಇಂಥ ವ್ಯಕ್ತಿಯನ್ನು ಕಳೆದುಕೊಂಡಿರುವುದು ಕರ್ನಾಟಕಕ್ಕೆ ಮತ್ತು ಕನ್ನಡಿಗರಿಗೆ ತುಂಬಲಾರದ ಹಾನಿ ಎಂದು ಹೇಳಬಯಸುತ್ತೇನೆ.

ಶ್ರೀ ವಾಸುದೇವರವರು, ಶ್ರೀ ಶಂಕರೇಗೌಡರವರು, ಶ್ರೀ ಎಂ.ಬಿ.ದಿವಟರ್‌ರವರು, ಶ್ರೀ ಬಿ.ಪಿ.ಗಂಗಾಧರ್‌ರವರು, ಇವರೆಲ್ಲರೂ ಸಹಿತ ವಿಧಾನ ಸಭೆಯ ಮೂಲಕ ಜನತಂತ್ರದಲ್ಲಿ ತಮ್ಮದೇ ಆದಂಥ ಸೇವೆಯನ್ನು ಮಾಡಿ ನಮ್ಮನ್ನು ಅಗಲಿದ್ದಾರೆ. ಇವರೆಲ್ಲರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ನಾವು ಬಯಸುತ್ತಿದ್ದೇವೆ.

ಶ್ರೀ ಬಿ.ಟಿ.ಚನ್ನಬಸಪ್ಪನವರು ಬಹಳ ಸಜ್ಜನ ವ್ಯಕ್ತಿ. ಕೃಷಿಕರಾಗಿ, ಉದ್ದಿಮೆದಾರರಾಗಿ, ಬಹು ದೊಡ್ಡ ಉದಾರ ದಾನಿಗಳಾಗಿ ಈ ಜನತಂತ್ರದಲ್ಲಿ ಅವರು ಮತ್ತು ಅವರ ಕುಟುಂಬದ ತಾಯಿಯಿಂದ ಎಲ್ಲರೂ ಕೂಡ ವಿಧಾನ ಪರಿಷತ್ತಿನಲ್ಲಿ ಕಾರ್ಯ ಮಾಡಿದ್ದಾರೆ. ಇವರು ಬಹಳ ಚಿಕ್ಕವಯಸ್ಸಿನಲ್ಲಿ ಅಗಲಿದ್ದಾರೆ. ಇಂಥ ಸಜ್ಜನ

ವ್ಯಕ್ತಿ ಹಾಗೂ ಎಲ್ಲಾ ದೃಷ್ಟಿಯಿಂದಲೂ ಜನತಂತ್ರ ವ್ಯವಸ್ಥೆಯಲ್ಲಿ ಬಹಳ ಪ್ರಾಮಾಣಿಕವಾಗಿ ಕೆಲಸ ಮಾಡಿದಂತ ವ್ಯಕ್ತಿ ಅಗಲಿರುವುದು ಕರ್ನಾಟಕದ ರಾಜಕೀಯದಲ್ಲಿ ಸಜ್ಜನ ವ್ಯಕ್ತಿಯನ್ನು ನಾವಿಂದು ಕಳೆದುಕೊಂಡಿದ್ದೇವೆ. ಈ ಜನತಂತ್ರಕ್ಕೆ ಬಹಳ ದೊಡ್ಡ ಸಹಕಾರ ಮಾಡಿದಂಥ ಈ ಜನರುಗಳನ್ನು ನಾವು ಕಳೆದುಕೊಂಡಿದ್ದೇವೆ. ಇವರೆಲ್ಲರ ಆತ್ಮಕ್ಕೆ ಶಾಂತಿ ಸಿಗಲಿ. ಮತ್ತು ಇವರೆಲ್ಲರೂ ನೀಡಿದಂಥ ತತ್ವ ಸಿದ್ಧಾಂಥ ಅಥವಾ ನಡೆದು ತೋರಿಸಿದ ಮಾರ್ಗದಲ್ಲಿ ನಾವುಗಳು ನಡೆಯುವುದು ಬಹಳ ಅವಶ್ಯ ಈ ಜನತಂತ್ರ ವ್ಯವಸ್ಥೆಯಲ್ಲಿದೆ ಎಂದು ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ(ಶಿರಾ):– ಮಾನ್ಯ ಸಭಾಧ್ಯಕ್ಷರೆ, ತಾವೇನು ಸಂತಾಪ ಸೂಚನೆಯನ್ನು ಸಭೆಯ ಮುಂದೆ ಮಂಡಿಸಿದ್ದೀರಿ, ಇದಕ್ಕೆ ಈಗಾಗಲೇ ಮಾನ್ಯ ಸಭಾನಾಯಕರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಧ್ವನಿಯನ್ನು ಕೂಡಿಸಿ, ಅವರು ಮಾಡಿದಂಥ ಸಾಧನೆಯ ಬಗ್ಗೆ ಕೆಲವು ಮಾತುಗಳನ್ನು ಆಡಿದ್ದಾರೆ. ಒಂದು ದು:ಖದ ಸಂಗತಿ ಎಂದರೆ, ಸ್ವಾತಂತ್ರದ ಹೋರಾಟದ ದಿನಗಳಲ್ಲಿ ಹೋರಾಟ ಮಾಡಿದಂಥ ಧೀಮಂಥ ನಾಯಕರಗಳನ್ನು, ಮೂರು–ನಾಲ್ಕು ಜನರುಗಳನ್ನು ನಾವಿಂದು ಕಳೆದುಕೊಂಡಿದ್ದೇವೆನ್ನುವುದು ದು:ಖದ ವಿಚಾರ. ಶ್ರೀಮಾನ್ ಹಾರ್ನಳ್ಳಿ ರಾಮಸ್ವಾಮಿಯವರು ಅಪ್ಪಟ ಗಾಂಧಿವಾದಿಗಳು. ಅವರು ತಮ್ಮ ಕೊನೆಯ ಉಸಿರು ಇರುವವರೆವಿಗೂ ಖಾದಿಯನ್ನು ಧರಿಸುತ್ತಿದ್ದರು. ಅವರು ವಿಧಾನ ಸಭೆಗೆ ಬರುವ ಸಂದರ್ಭದಲ್ಲೂ ಗಾಂಧಿ ಟೋಪಿಯನ್ನು ಧರಿಸುತ್ತಿದ್ದರು. ಅವರು ನ್ಯಾಯವಾದಿಗಳಾಗಿ ಕೋರ್ಟಿಗೆ ಹೋಗುವಂಥ ಸಂದರ್ಭದಲ್ಲೂ ಕೂಡ ಗಾಂಧಿ ಟೋಪಿಯನ್ನು ಹಾಕಿಕೊಂಡು ಹೋಗುತ್ತಿದ್ದರು. ನಾನೊಬ್ಬ ಅಪ್ಪಟ ಆದರ್ಶ ಮತ್ತು ಗಾಂಧಿವಾದಿ ಎಂದು ತೋರಿಸುವ ನಿಟ್ಟಿನಲ್ಲಿ ಅವರ ನಡವಳಿಕೆ ಇರುತ್ತಿತ್ತು. ಒಂದು ಸಂತೋಷದ ಸಂಗತಿ ಎಂದರೆ, ನಾನು ಅವರ ಜೊತೆಯಲ್ಲಿ 1978 ರಲ್ಲಿ ಒಂದೇ ಸಾರಿ ವಿಧಾನ ಸಭೆಗೆ ಆಯ್ಕೆಯಾಗಿ ಬಂದಂಥ ಸಂದರ್ಭ. ಅದಕ್ಕೆ ಪೂರ್ವದಲ್ಲಿ ಅವರು ಕಾಂಗ್ರೆಸ್ಸಿನ ಅನೇಕ ಚಟುವಟಿಕೆಗಳಲ್ಲಿ ಭಾಗಿಗಳಾಗಿದ್ದರು. ದಿ:ದೇವರಾಜು ಅರಸ್‌ರವರ ನಿಕಟ ವರ್ತಿಯಾಗಿದ್ದರು. ದೇವರಾಜು ಅರಸ್‌ರವರ ಯಾವುದೇ ತೀರ್ಮಾನಗಳಲ್ಲಿಯೂ ಸಹ ಹಾರ್ನಳ್ಳಿ ರಾಮಸ್ವಾಮಿಯವರ ಸಲಹೆ, ಸೂಚನೆ, ಗಾಂಧಿವಾದ, ಕಾಂಗ್ರೆಸ್ಸಿನ ತತ್ವ, ಸಿದ್ಧಾಂಥಗಳನ್ನು ಪ್ರತಿಪಾದನೆ ಮಾಡುವ ರೀತಿಯಲ್ಲಿ ಅವರ ಕಾರ್ಯಕ್ರಮಗಳಿದ್ದವು. ಹೀಗಾಗಿ ಇವರ ಅಗಲಿಕೆಯಿಂದ ಕಾಂಗ್ರೆಸ್ ಪಕ್ಷಕ್ಕೆ ಅಗಾಧವಾಗಿರತಕ್ಕಂಥ ನೋವು ಆಗಿದೆ. ಅವರ ಕೊನೆಯ ಉಸಿರು ಇರುವವರೆಗೂ ತನ್ನದೇ ಆದಂಥ ಕೊಡುಗೆಯನ್ನು ಕೊಡುತ್ತಿದ್ದರು. ಮಾರ್ಗದರ್ಶನ ಮಾಡುತ್ತಿದ್ದರು. ಬೋದನೆ ಮಾಡುತ್ತಿದ್ದರು. ಕಿವಿ ಹಿಡಿದು ತಿಳಿ ಹೇಳತಕ್ಕಂಥ ಕೆಲಸ ಮಾಡುತ್ತಿದ್ದರು. ಅಂಥವರು ಲೋಕ ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷರಾಗಿ, ಶಿಕ್ಷಣ ಕ್ಷೇತ್ರದಲ್ಲಿ ಮಾಡಿರತಕ್ಕ

ಅದ್ವಿತೀಯ ಸಾದನೆಯನ್ನು ನಾವು ಯಾರೂ ಮರೆಯುವಂತಿಲ್ಲ. ನಾವು ಇದನ್ನು ನೆನೆಸಲೇಬೆಕಾಗುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅದೇ ರೀತಿಯಲ್ಲಿ ಇದಿನಬ್ಬನವರು, ಇವರು ಕೂಡ ಅಪ್ಪಟ ಗಾಂಧಿವಾದಿಗಳು, ಅಲ್ಪಸಂಖ್ಯಾತರಾದರೂ ಅವರು ಕನ್ನಡಕ್ಕೆ, ಕನ್ನಡ ಸಾಹಿತ್ಯಕ್ಕೆ ಮಾಡಿದಂಥ ಸೇವೆ ಅಗಾಧವಾಗಿದೆ. ಅವರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗುವುದರ ಜೊತೆಗೆ ಕವಿಗಳಾಗಿ ಅನೇಕ ರೀತಿಯಾದ ಕೃತಿಗಳನ್ನು, ಸಾಹಿತ್ಯಗಳನ್ನು, ರಚಿಸಿರುತ್ತಾರೆ. ಇವರು ಅಪ್ಪಟ ಗಾಂಧಿವಾದಿಯಾಗುವುದರ ಜೊತೆಗೆ ಯಾವಾಗಲೂ ಕೂಡ ಗಾಂಧಿ ಟೋಪಿಯನ್ನು ಧರಿಸುತ್ತಿದ್ದರು. ಇವರು ಕೂಡ ನಮ್ಮನ್ನು ಅಗಲಿದ್ದಾರೆ.

ಅದೇ ರೀತಿಯಾಗಿ ವಾಸುದೇವರವರು, ಶಂಕರೇಗೌಡರವರು, ದಿವಟರ್‌ರವರು, ಕೂಡ ನಮ್ಮನ್ನು ಅಗಲಿದ್ದಾರೆ. ದಿವಟರ್ ಬಗ್ಗೆ ಹೇಳುವುದಾದರೆ, ನನಗೆ ದು:ಖವಾಗುವ ಸಂಗತಿ ಎಂದರೆ, ಅವರು ವಿಧಾನ ಸಭೆಗೆ ಎರಡು ಬಾರಿ ಆಯ್ಕೆಯಾಗಿದ್ದರು ಜೊತೆಗೆ ಅವರು ಕೂಡ ನಮ್ಮ ವಯಸ್ಸಿನವರು. ಅವರು ಯಾವಾಗಲೂ ಕೂಡ ಸಿಂಗಟಾಲೂರು ನಾಲೆಯ ಬಗೆ ಹೋರಾಟ ಮಾಡುತ್ತಿದ್ದರು. ಪ್ರತಿ ಸಂದರ್ಭದಲ್ಲೂ ನಮ್ಮನ್ನೆಲ್ಲರನ್ನು ಬಳಸಿಕೊಂಡು ಅದಕ್ಕೆ ವಿಶೇಷವಾದ ಕಾಳಜಿಯನ್ನು ತೊರಿಸಿ ನೀರಾವಾರಿಗೆ ತನ್ನದೇ ಆದಂಥ ಒಂದು ಕೊಡುಗೆಯನ್ನು ಕೊಟ್ಟಂಥವರು. ದಿವಟರ್‌ರವರಿಗೆ ಮರಣ ಬರುವಂಥ ವಯಸ್ಸು ಆಗಿರಲಿಲ್ಲ. ಆದರೂ ಇವತ್ತು ಅವರು ಕಣ್ಮರೆಯಾಗಿದ್ದಾರೆ.

ಇದರ ಜೊತೆಯಲ್ಲಿ ಬಿ.ಪಿ.ಗಂಗಾಧರ್‌ರವರು, ಇವರು ನಮ್ಮ ಜಿಲ್ಲೆಯ ಮಧುಗಿರಿ ತಾಲ್ಲೂಕಿನಲ್ಲಿ ಹುಟ್ಟಿ ಖ್ಯಾತ ನ್ಯಾಯಾವಾದಿಗಳಾಗಿದ್ದರು. ನ್ಯಾಯಾವಾದಿಗಳಾಗಿ 1967 ರಲ್ಲಿ ಪ್ರಪ್ರಥಮವಾಗಿ ಎಸ್.ಎಸ್.ಪಿ. ಪಾರ್ಟಿಯಿಂದ ಆಯ್ಕೆಯಾಗಿ ಬಂಧರು. ಅವರು ಹೇಗೆ ಎಂದರೆ, ಅವರಿಗೆ 60 ವರ್ಷವಾಗಿದ್ದರೂ ಕೂಡ ಪ್ರಾಕ್ಟೀಸ್ ಮಾಡುತ್ತಿದ್ದರು. ಅವರು ಪ್ರಾಕ್ಟೀಸ್ ಮಾಡುವ ಸಂದರ್ಭದಲ್ಲಿ ಅವರದೇ ಅದಂಥ ಧಾಟಿ ಇಟ್ಟುಕೊಂಡು ಕೋರ್ಟಿನಲ್ಲಿ ವಾದ ಮಂಡಿಸುತ್ತಿದ್ದರು. ಶ್ರೀಯುತರಿಗೆ ಐವತ್ತು ವರ್ಷ ಆದ ಮೇಲೆ ಅವರಿಗೆ ಯಾವುದೋ ಕಾರಣಕ್ಕೆ ಆರೋಗ್ಯದ ದೃಷ್ಟಿಯಿಂದ ಕಣ್ಣು ಹೋಯಿತು. ಕಣ್ಣು ಹೋದರೂ ಅವರ ಕೊನೆಯ ಉಸಿರು ಇರುವವರೆವಿಗೂ ಮೊನ್ನೆ ಮೊನ್ನೆಯವರಿಗೂ ಬೆಳಗ್ಗೆ ಎದ್ದ ತಕ್ಷಣ ರೇಡಿಯೋ ಮತ್ತು ಟಿ.ವಿ.ಯಲ್ಲಿ ಬರುವ ನ್ಯೂಸ್ ಮತ್ತು ಕೇಸ್ ಲಾ ಗಳನ್ನು ಕೇಳುತ್ತಿದ್ದರು. ಬಹಳಷ್ಟು ಜ್ಯೂನಿಯರ್ ಆಗಿದ್ದಂಥ ವಕೀಲರು ಅವರ ಮುಂದೆ ಹೋಗಿ ವಿಚಾರ ಪ್ರಸ್ತಾಪಿಸಿದಾಗ ಅವರು ಡ್ರಾಫ್ಟಿಂಗ್ ಕೂಡ ಮಾಡಿ ಕೊಡುತ್ತಿದ್ದರು ಎಂದರೆ, ಅವರ presence of mind ಹೇಗಿತ್ತು ಎಂದು ನಾವು ಅರ್ಥ

ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕಿಂಥ ಹೆಚ್ಚಾಗಿ ಅವರು ತತ್ವ ಮತ್ತು ಸಿದ್ಧಾಂಥಗಳಲ್ಲಿ ನಂಬಿಕೆ ಇಟ್ಟಿದ್ದರು. ಕರ್ನಾಟಕ ಏಕೀಕರಣವಾದ ಮೇಲೆ ಕರ್ನಾಟಕ ಎಂದು ಮರು ನಾಮಕಾರಣವಾಗಬೇಕೆಂದು ಅವರು ವಿಧಾನ ಸಭೆಯಲ್ಲಿ ಭಾಷಣ ಮಾಡಿದ್ದರು. ಮೈಸೂರು ಎನ್ನತಕ್ಕಂಥದ್ದು ಕೇವಲ ಒಂದು ಪ್ರದೇಶಕ್ಕೆ ಸೀಮಿತವಾಗಿರುವುದರಿಂದ ಅಖಿಂಡ ಕರ್ನಾಟಕಕ್ಕೆ ಕರ್ನಾಟಕ ಎಂದು ಹೆಸರು ಇಡಬೇಕೆಂದು ತಮ್ಮದೇ ಆದಂಥ ದಾಟಿಯಲ್ಲಿ ವಿಧಾನ ಸಭೆಯಲ್ಲಿ ಮಾಡಿರತಕ್ಕಂಥ ಭಾಷಣ ಇವತ್ತೂ ಕೂಡ ಇದೆ. ಕರ್ನಾಟಕ ಏಕೀಕರಣವಾದ ನಂತರ ಕರ್ನಾಟಕ ಎಂದು ನಾಮಕರಣವಾದ ಮೇಲೆ ಶ್ರೀಮಾನ್ ದೇವರಾಜ ಅರಸುರವರನ್ನು ತುಮಕೂರಿಗೆ ಕರೆಸಿ ಶ್ರೀಯುತರೆ ಮುಂಚೂಣಿಯಲ್ಲಿ ನಿಂತು ಒಂದು ದೊಡ್ಡ ಸನ್ಮಾನವನ್ನು ತುಮಕೂರಿನಲ್ಲಿ ಪ್ರಪ್ರಥಮವಾಗಿ ಮಾಡಿದಂಥ ಒಬ್ಬ ಧೀಮಂತ ವ್ಯಕ್ತಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇವರ ಬಗ್ಗೆ ಹೇಳತಕ್ಕಂಥದ್ದು ಸಾಕಷ್ಟು ಇದೆ, ಆದರೆ, ನಾನು ಎಲ್ಲವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅವರು ಯಾವ ರೀತಿಯಾಗಿ ಮಾರ್ಗದರ್ಶಕರಾಗಿದ್ದರೆಂದು ನಾವುಗಳು ಮರೆಯುವುದಕ್ಕೆ ಸಾಧ್ಯವಿಲ್ಲ. ಮತ್ತೆ ನಾವು ಶ್ರೀಯುತ ಬಿ.ಪಿ.ಗಂಗಾಧರ್‌ರವರ ಹತ್ತಿರ ಹೋದಾಗ ಅವರು ಸಾರ್ವಜನಿಕವಾಗಿರತಕ್ಕಂಥ ವಿಚಾರಗಳ ಬಗ್ಗೆ ಎಷ್ಟು ಕಾಳಜಿಯನ್ನು ವಹಿಸುತ್ತಿದ್ದರು ಎನ್ನತಕ್ಕಂಥದು ತಿಳಿಯುತ್ತಿತ್ತು. ಆ ರೀತಿಯಲ್ಲ, ಈ ರೀತಿಯಾಗಿ ಮಾಡಿ ಎಂದು ಅಲ್ಲಿಗೆ ಹೋದಂಥ ಎಲ್ಲಾ ಶಾಸಕರಿಗೂ ಹೇಳುತ್ತಿದ್ದರು. ವಯಸ್ಸಾಗಿರುವುದರಿಂದ ನಮಗೆ ಎನೂ ಗೊತ್ತಿಲ್ಲವೆಂದು ನಾವು ಅಂದುಕೊಳ್ಳುತ್ತಿದ್ದೆವು. ಆದರೆ, ಅವರು ನಮ್ಮ ಚಲನ ವಲನಗಳನ್ನು ಮತ್ತು ನಮ್ಮ ಮಾತುಗಳೆಲ್ಲವನ್ನು ಅವರು ಗಮನಿಸುತ್ತಿದ್ದಂಥ ಒಬ್ಬ ವ್ಯಕ್ತಿಯಾಗಿದ್ದರು. ಅಂದರೆ, ಇಲ್ಲಿಯ ಬಗ್ಗೆ ಮತ್ತು ರಾಜ್ಯದ ಬಗ್ಗೆ ವಿಶೇಷವಾದಂಥ ಗಮನವನ್ನು ಇಟ್ಟುಕೊಂಡಿದ್ದಂಥ ಒಬ್ಬ ವ್ಯಕ್ತಿಯಾಗಿದ್ದರು. ಶ್ರೀಯುತರು ನಮ್ಮನೆಲ್ಲ ಬಿಟ್ಟು ಅಗಲಿದ್ದಾರೆ. ಮತ್ತು ಶ್ರೀ ಬಿ.ಟಿ.ಚನ್ನಬಸಪ್ಪನವರೂ ಸಹ ನಮ್ಮ ಸಹಪಾಟಿಯಾಗಿದ್ದರು. ನಮ್ಮ ಜೊತೆಯಲ್ಲಿ ಅವರು ಒಳ್ಳೆಯ ಬಾಂದವ್ಯವನ್ನು ಇಟ್ಟುಕೊಂಡಿದ್ದರು. ಮತ್ತೆ ಶ್ರೀಯುತರು ಸರಳ ಮತ್ತು ಸಹೃದಯವನ್ನು ಹೊಂದಿರುವಂಥವರಾಗಿದ್ದ ಚನ್ನಬಸಪ್ಪನವರನ್ನು ನಾವು ಕಳೆದುಕೊಂಡಿದ್ದೇವೆ. ಒಂದು ದು:ಖದ ಸನ್ನಿವೇಶ ಏನೆಂದರೆ, ಅವರಿಗೆ ಕಿಡ್ನಿ ಫೇಲ್ಯೂರ್ ಆಗಿದ್ದಂಥಹ ಸಂದರ್ಭದಲ್ಲಿ ಅವರ ಶ್ರೀಮತಿಯವರೆ ಅವರಿಗೆ ಕಿಡ್ನಿಯನ್ನು ಕೊಟ್ಟರು. ಕಿಡ್ನಿಯನ್ನು ಕೊಟ್ಟರೂ ಕೂಡ ಅವರು ಬಹಳ ದಿವಸ ಉಳಿಯತಕ್ಕಂಥ ಸಂದರ್ಭವಾಗಲಿಲ್ಲ. ಅವರ ಸರಳತೆಯನ್ನು ಸ್ವಲ್ಪ ಸಡಿಲಗೊಳಿಸಿ ಶಿಸ್ತನ್ನು ಕಾಪಾಡಿಕೊಂಡಿದ್ದರೆ ಬಹುಶ: ಅವರು ಇನ್ನು ಬಹಳ ದಿವಸ ಬದುಕುವಂಥ ಅವಕಾಶ ಇತ್ತೆಂದು ನನಗೆ ಅನಿಸುತ್ತದೆ. ಅವರು ಕಾಲವಾದ ದಿವಸ ನಾನೂ ಕೂಡ ಅವರ ಊರಿಗೆ ಹೋಗಿ ಅಂತಿಮವಾದಂಥ ನಮನವನ್ನು ಸಲ್ಲಿಸಿ ಬಂದಿದ್ದೇನೆಂಬ ಮಾತನ್ನು ಹೇಳುತ್ತಾ ಇವತ್ತಿನ ದಿವಸ ಇದೇ ರೀತಿಯಾಗಿ ಕಾಲಗರ್ಭದಲ್ಲಿ

ಸೇರಿಕೊಂಡಿರುವಂಥ, ಅಗಲಿರುವ ನಾಯಕರುಗಳ ಆತ್ಮಕ್ಕೆ ಶಾಂತಿಯನ್ನು ಕೊರುವುದರ ಜೊತೆಗೆ ಅವರನ್ನು ನಂಬಿದಂಥ ಮನೆಯವರು ಮತ್ತು ಇತರರು ಯಾರೇ ಇದ್ದರೂ ಕೂಡ ಶ್ರೀಯುತರುಗಳ ಅಗಲಿಕೆಯಿಂದ ಆಗಿರುವಂಥ ನೋವನ್ನು ಭರಿಸುವಂಥ ಶಕ್ತಿ ಪರಮಾತ್ಮ ದಯಪಾಲಿಸಲೆಂದು ಹಾರೈಸಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ. ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ತಿಪ್ಪೆಸ್ವಾಮಿ(ಚಳ್ಳಕೆರೆ):– ಸನ್ಮಾನ್ಯ ಅಧ್ಯಕ್ಷರೆ, ಈ ಅಧಿವೇಶನದಲ್ಲಿ ಮತ್ತು ವಿಧಾನಪರಿಷತ್‌ನಲ್ಲಿ ಸೇವೆ ಸಲ್ಲಿಸಿ ನಮ್ಮಿಂದ ಅಗಲಿರತಕ್ಕಂಥ ಮಹಾನ್ ನಾಯಕರುಗಳಾದ ಶ್ರೀ ಹಾರನಹಳ್ಳಿ ರಾಮಸ್ವಾಮಿ, ಮತ್ತು ಮಾಜಿ ಸದಸ್ಯರಾಗಿದ್ದ ಶ್ರೀ ಬಿ.ಎಂ. ಇದಿನಬ್ಬ ಹಾಗೂ ಈ ಪಟ್ಟಿಯಲ್ಲಿರುವವರಲ್ಲಿ ನಮ್ಮ ಜಿಲ್ಲೆಯವರಾಗಿರುವ ಶ್ರೀ ಬಿ.ಟಿ.ಚನ್ನಬಸಪ್ಪ ಮತ್ತು ನಾವು ಹಾಗೂ ಶ್ರೀ ಇದಿನಬ್ಬರವರು ಈ ಸದನದಲ್ಲಿದ್ದಂಥ ಸಂದರ್ಭದ ಬಗ್ಗೆ ಹೇಳುವುದಾದರೆ, ಮಾನ್ಯ ಇದಿನಬ್ಬರವರು ಕನ್ನಡದ ಅಭಿಮಾನಿಯಾಗಿದ್ದರು, ಈ ಸದನದಲ್ಲಿ ಮಾತನಾಡುವಾಗ ಸಂದರ್ಭಕ್ಕೆ ತಕ್ಕಂತೆ ಕಾವ್ಯದ ಮೂಲಕ ಜನಗಳಿಗೆ ಮತ್ತು ಸದನಕ್ಕೆ ಅರ್ಥವಾಗುವಂತಹ ರೀತಿಯಲ್ಲಿ ಮಾತನಾಡುತ್ತಿದ್ದರು. ಇದರ ಜೊತೆಗೆ ನಮ್ಮ ಜಿಲ್ಲೆಯವರು ಆಗಿರುವಂಥ ಸಜ್ಜನ ಮತ್ತು ಸರಳ ವಿಶಾಲ ಹೃದಯ ಹೊಂದಿದಂಥ ಶ್ರೀ ಚನ್ನಬಸಪ್ಪನವರ ಜೊತೆಯಲ್ಲಿ ಸೇರಿಕೊಂಡು ಬಹಳ ದಿವಸ ಒಟ್ಟಿಗೆ ರಾಜಕಾರಣ ಮಾಡಿದ್ದೇವೆ. ನಿಜವಾಗಿಯೂ ಸಹ ಇವರ ನಡೆ ನುಡಿ ನಮ್ಮ ಜಿಲ್ಲೆಯ ರಾಜಕಾರಣಿಗಳಿಗೆ ಮಾರ್ಗದರ್ಶನವಾಗಿದೆ. ಹಾಗೂ ಅವರು ನಿಷ್ಕಳಂಕರಾಗಿದ್ದರು. ಎಲ್ಲಾ ಜಾತಿ ವರ್ಗವನ್ನು ವಿಶಾಲ ಮತ್ತು ಸಮಾನ ದೃಷ್ಟಿಯಿಂದ ನೊಡಿರತಕ್ಕಂಥ ಮಹಾನ್ ವ್ಯಕ್ತಿಯಾಗಿದ್ದರು. ಇವತ್ತಿನದಿವಸ ನಮ್ಮನ್ನೆಲ್ಲ ಅಗಲಿರತಕ್ಕಂಥದವರಿಗೆಲ್ಲರ ಆತ್ಮಕ್ಕೆ ಶಾಂತಿ ಕೊಡಲೆಂದು ಮತ್ತು ಈ ಮಹಾನ್ ವ್ಯಕ್ತಿಗಳು ಅಗಲಿ ಹೋಗಿರತಕ್ಕಂಥ ದು:ಖವನ್ನು ಭರಿಸತಕ್ಕಂಥ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕೊಡಲೆಂದು ಹೇಳುತ್ತಾ ಇದರ ಜೊತೆಗೆ ಶ್ರೀಯುತ ಹಾರನಹಳ್ಳಿ ರಾಮಸ್ವಾಮಿಯವರದು ವಿಶೇಷವಾದಂಥ ಗುಣ ಇದೆ. ಈ ಸದನಕ್ಕೆ ಮತ್ತು ರಾಜ್ಯಕ್ಕೆ ಹಾಗೂ ಸಮಾಜಕ್ಕೆ ಕೊಟ್ಟಂಥ ಸಲಹೆ ಮತ್ತು ಮಾರ್ಗದರ್ಶನ ಎಂದೆಂದಿಗೂ ಬಹಳ ಅತ್ಯುತ್ತಮವಾದಂಥವಾಗಿವೆ. ಇಂಥ ಮಹಾನ್ ನಾಯಕರಾದ ಶ್ರೀ ಹಾರನಹಳ್ಳಿ ರಾಮಸ್ವಾಮಿಯವರು ಮತ್ತು ಇತರರು ನಮ್ಮನ್ನು ಅಗಲಿರತಕ್ಕಂಥದ್ದು ಕರ್ನಾಟಕ ರಾಜ್ಯಕ್ಕೆ ಭರಿಸಲಾದಂಥ ಒಂದು ಅನ್ಯಾಯ ಎಂದು ಈ ಸಂದರ್ಭದಲ್ಲಿ ಹೇಳುತ್ತಾ ಇವರ ಆತ್ಮಕ್ಕೆ ಶಾಂತಿ ಕೊಡುವುದರ ಜೊತೆಗೆ ಇವರ ಅಗಲಿಕೆಯಿಂದ ಆಗಿರುವ ದು:ಖವನ್ನು ಭರಿಸತಕ್ಕಂಥ ಶಕ್ತಿಯನ್ನು ಅವರು ಕುಟುಂಬವರ್ಗದವರಿಗೆ ದೇವರು ಕೊಡಲೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ(ಅರಸೀಕೆರೆ):– ಸನ್ಮಾನ್ಯ ಅಧ್ಯಕ್ಷರೆ, ಸಂತಾಪ ಸೂಚನೆಯನ್ನು ಇಲ್ಲಿ ಮಂಡನೆ ಮಾಡಲಾಗಿದೆ. ಶ್ರೀ ಹಾರನಹಳ್ಳಿ ರಾಮಸ್ವಾಮಿಯವರು ನನ್ನ ತಾಲ್ಲೂಕಿನವರು ಮತ್ತು ನನ್ನ ಮತ ಕ್ಷೇತ್ರಕ್ಕೆ ಸೇರಿರತಕ್ಕಂಥವರು ಆಗಿದ್ದಾರೆ. ಹಿಂದೆ ಗಂಡಸಿ ಕ್ಷೇತ್ರ ಇದ್ದಂಥ ಸಂದರ್ಭದಲ್ಲಿ 1978 ರಿಂದ 1983ರವರೆಗೆ ಗಂಡಸಿ ವಿಧಾನಸಭಾ ಕ್ಷೇತ್ರದ ಸದಸ್ಯರಾಗಿದ್ದರು. ಮತ್ತೆ ಅವರು ಪೂಜ್ಯರಾಗಿದ್ದರು. ನಾವೆಲ್ಲರೂ ಅವರನ್ನು ಬಹಳ ನಮ್ರತೆಯಿಂದ, ಪ್ರತಿ ವಿಶ್ವಾಸದಿಂದ ಅವರ ಆದರ್ಶಗಳನ್ನು ಕೇಳುವುದಕ್ಕೆ ಗಂಟೆಗಟ್ಟಲೆ ಅವರ ಹತ್ತಿರ ಕೇಳುತ್ತಿದ್ದೆವು. ಅವರು ನಿಧನವಾಗುವುದಕ್ಕಿಂಥ ಮೂರು ದಿವಸಗಳ ಮುಂಚಿತವಾಗಿ ಅವರು ಅರಸೀಕೆರೆಯಲ್ಲಿರುವ ಅವರ ತೋಟದ ಮನೆಯಲ್ಲಿ ತಂಗಿದ್ದರು. ಈ ಸಂದರ್ಭದಲ್ಲಿ ಅವರು ಆ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಮಾತನಾಡಿದ್ದರು. ಇವರು ಆದರ್ಶವಾದಿಯಾಗಿದ್ದರು. ಪಕ್ಷಭೇದವನ್ನು ಅವರು ಜೀವನದಲ್ಲಿ ನಾವು ಎಂದೂ ಕಂಡಿಲ್ಲ. ಅವರ ಅಗಲಿಕೆಯಿಂದ ಹಾಸನ ಜಿಲ್ಲೆಯ ತುಂಬಲಾರದಂಥ ನಷ್ಟ ಉಂಟಾಗಿದೆ. ಶ್ರಿಯುತರು ಮಲೆನಾಡು ಎಜ್ಯುಕೇಷನ್ ಸೊಸೈಟಿಯನ್ನು ಕಟ್ಟಿ ಈ ಸೊಸೈಟಿಯ ಮುಖಾಂತರ ಇವತ್ತಿನ ದಿವಸ ಇಂಜಿನಿಯರಿಂಗ್ ವಿಭಾಗದಲ್ಲಿ ಲಕ್ಷಾಂತರ ಜನ ಇಂಜಿನಿಯರ್‌ಗಳಾಗಿದ್ದಾರೆ. ಮತ್ತೆ ಕರ್ನಾಟಕ ರಾಜ್ಯದಲ್ಲಿ ಇವರ ಮಹಿಳಾ ಕಾಲೇಜು ಮತ್ತು ಇತರೇ ವಿದ್ಯಾಸಂಸ್ಥೆಗಳ ಮುಖಾಂತರ ಲಕ್ಷಾಂತರ ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ರೂಪಿಸಿಕೊಂಡಿದ್ದಾರೆ. ಇಂಥ ಒಬ್ಬ ಮಹಾನ್ ವ್ಯಕ್ತಿ ಸ್ವತಂತ್ರ್ಯ ಹೋರಾಟಗಾರರಾಗಿದ್ದರು. ಕೊನೇ ದಿನಗಳನ್ನು ಅರಸೀಕೆರೆಯಲ್ಲಿ ಕಳೆಯಬೇಕೆಂಬ ಭಾವನೆಯಿಂದ ಒಂದು ಸುಂದರವಾದಂಥ ತೋಟವನ್ನು ಹೆದ್ದಾರಿಯಲ್ಲಿ ಅವರು ರೂಪಿಸಿಕೊಂಡಿದ್ದರು. ಇಲ್ಲಿಗೆ ಬಂಧಂಥ ಸಂದರ್ಭದಲ್ಲಿ ಅವರು ಮಾತನಾಡಿದ್ದನ್ನು ನೋಡಿದರೆ ಇಷ್ಟು ಬೇಗ ನಾನು ನಿಧನರಾಗುತ್ತೇನೆಂಬ ಭಾವನೆ ಅವರ ಮನಸ್ಸಿನಲ್ಲಿ ಇರಲಿಲ್ಲವೆಂದು ಕಾಣುತ್ತದೆ. ಏಕೆಂದರೆ, ಹತ್ತಾರು ವರ್ಷಗಳ ಯೋಜನೆಯ ಬಗ್ಗೆ ಅವರು ಅವತ್ತಿನ ದಿವಸ ಮಾತನಾಡಿದರು. ಶ್ರೀಯುತರು ನಮ್ಮನ್ನು ಬಿಟ್ಟು ಅಗಲಿದ್ದಾರೆ. ಅವರು ಸಚಿವರಾಗಿದ್ದಾಗ ಅವರು ನಮ್ಮ ಜಿಲ್ಲೆಯಲ್ಲಿ ಯಾವುದೇ ರೀತಿಯ ವೈಷಮ್ಯದ ರಾಜಕಾರಣವನ್ನು ಮಾಡಲಿಲ್ಲ. ಬಹಳ ಪ್ರಾಮಾಣಿಕವಾಗಿ ಆದರ್ಶಕ್ಕೆ ಪ್ರಿಯವಾದಂಥ ಕೆಲವೊಂದು ವಿಚಾರಗಳನ್ನು ಜಿಲ್ಲೆಗೆ ಧಾರೆ ಎರೆದು ಹೋದಂಥ ಮಹಾನ್ ವ್ಯಕ್ತಿ. ಶ್ರೀ ಹಾರನಹಳ್ಳಿ ರಾಮಸ್ವಾಮಿಯವರು ನಿಧನರಾಗಿರತಕ್ಕಂಥದ್ದಕ್ಕೆ ನಮಗೆ ಬಹಳ ದು:ಖವಾಗುತ್ತಿದೆ. ಅವರಿಗೆ ಭಗವಂತ ಚಿರಶಾಂತಿಯನ್ನು ಕೊಡಲೆಂದು ಈ ಸಂದರ್ಭದಲ್ಲಿ ನನ್ನ ತಾಲ್ಲೂಕಿನ ಜನತೆಯ ಪರವಾಗಿ ಕರ್ನಾಟಕ ರಾಜ್ಯದ ಜನತೆಯ ಪರವಾಗಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಈ ಸಂದರ್ಭದಲ್ಲಿ ಅಗಲಿರುವರಲ್ಲಿ ಒಬ್ಬರಾದ ಶ್ರೀ ಬಿ.ಎಂ.ಇದಿನಬ್ಬರವರು ಸದನದಲ್ಲಿ ಸಂದರ್ಭಕ್ಕೆ ತಕ್ಕಂತೆ ಕವನಗಳನ್ನು ರಚನೆ ಮಾಡಿ ಯಾವರೀತಿಯಾಗಿ ಸದನದ ಗಮನವನ್ನು ಸೆಳೆಯುತ್ತಿದ್ದರೆಂದು ಮತ್ತು ಅವರ

ವಿಚಾರಧಾರೆಯನ್ನು ಯಾವರೀತಿಯಾಗಿ ಮಂಡಿಸುತ್ತಿದ್ದರೆಂಬುದನ್ನು ನಾವು ಮೇಲೆ ಕುಳಿತುಕೊಂಡು ನೋಡುತ್ತಿದ್ದೆವು. ಕೆಲವೊಂದು ಸಮಾರಂಭಗಳಲ್ಲಿಯೂ ಕೂಡ ಕವಿತೆಗಳನ್ನು ರಚನೆ ಮಾಡಿ ಅಲ್ಲಿಯೇ ಹಾಡುತ್ತಿದ್ದರು. ಮತ್ತೆ ಶ್ರಿ ವಾಸುದೇವ್‌ರವರ ಬಗ್ಗೆ ಈಗಾಗಲೇ ಎಲ್ಲಾ ನಾಯಕರು ಅವರ ಬಗ್ಗೆ ಗುಣಗಾನ ಮಾಡಿದ್ದಾರೆ. ಮತ್ತೆ ಶ್ರೀ ಜಿ.ಶಂಕರೇಗೌಡರು, ಶ್ರೀ ಎಂ.ಬಿ.ದಿವಟರ್, ಶ್ರೀಬಿ.ಪಿ.ಗಂಗಾಧರ್‌ರವರು ಹಾಗೂ ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಶ್ರೀ ಬಿ.ಟಿ.ಚನ್ನಬಸಪ್ಪನವರ ಬಗ್ಗೆ ನಮ್ಮೆಲ್ಲರಿಗೂ ಪರಿಚಯ ಇತ್ತು. ಇವರು ಬಹಳ ಉತ್ತಮವಾದಂಥ ಸರಳ ಜೀವಿಗಳು ಮತ್ತು ದಾನಿಗಳಾಗಿದ್ದರು. ಇಂಥ ಮಹಾನ್ ವ್ಯಕ್ತಿಗಳನ್ನು ನಾವು ಕಳೆದುಕೊಂಡಿದ್ದೇವೆ. ಇದರಿಂದ ಕರ್ನಾಟಕ ರಾಜ್ಯಕ್ಕೆ ತುಂಬಲಾರದಂಥ ನಷ್ಟ ಉಂಟಾಗಿದೆ. ಇವರೆಲ್ಲರ ಆತ್ಮಕ್ಕೆ ಮತ್ತು ಅವರ ಕುಟುಂಬ ವರ್ಗದವರಿಗೆ ಭಗವಂತ ಶಾಂತಿಯನ್ನು ಕೊಡಲೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಶ್ರೀ ಹಾರನಹಳ್ಳಿ ರಾಮಸ್ವಾಮಿಯವರಂತೆ ಅವರ ವಂಶವೂ ಕೂಡ ಕರ್ನಾಟಕ ರಾಜ್ಯದಲ್ಲಿ ಬೆಳೆಯುತ್ತಿದೆ. ಹಾರನಹಳ್ಳಿ ರಾಮಸ್ವಾಮಿಯವರ ವಂಶವು ಕೂಡ ಇವತ್ತು ಕರ್ನಾಟಕ ರಾಜ್ಯದಲ್ಲಿ ಬೆಳೆಯುತ್ತಿದೆ. ಇವತ್ತು ಅವರ ಪುತ್ರರಾದ ಅಶೋಕ ಹಾರನಹಳ್ಳಿಯವರು ಕರ್ನಾಟಕ ರಾಜ್ಯದ Advocate General ಆಗಿ ನೇಮಕವಾಗಿದ್ದಾರೆ. ಉತ್ತಮವಾದಂಥ ನ್ಯಾಯವಾದಿಗಳು ಆಗಿದ್ದಾರೆ. ಉತ್ತಮವಾದ ಕೆಲಸಗಳನ್ನು ಮಾಡುತ್ತಿದ್ದಾರೆ. ಅವರ ಕುಟುಂಬ ಉತ್ತಮವಾಗಿ ಬೆಳೆಯಲಿ ಎಂದು ಈ ಸಂದರ್ಭದಲ್ಲಿ ನಾನು ಹಾರೈಸಿ, ಈ ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ. ಡಿ.ಕೆ.ಶಿವಕುಮಾರ್(ಕನಕಪುರ): ಮಾನ್ಯ ಅಧ್ಯಕ್ಷರೆ, ತಾವು ಒಂದು ಸಂತಾಪ ಸೂಚನೆಯನ್ನು ಏನು 7 ಜನ ಗಣ್ಯ ವ್ಯಕ್ತಿಗಳ ಬಗ್ಗೆ ತಂದಿರುತ್ತೀರಿ, ನಾನು ಅದನ್ನು ಬೆಂಬಲಿಸುತ್ತೇನೆ. ಮಾನ್ಯ ಹಾರನಹಳ್ಳಿ ರಾಮಸ್ವಾಮಿಯವರು ಆಡಳಿತ ಸುಧಾರಣೆ ಆಯೋಗದ ಒಂದು ವರದಿಯನ್ನು ಏನು ಕೊಟ್ಟಿದ್ದಾರೆ ಬಹುಶ ಅವರ ವರದಿಯ ಆಧಾರದ ಮೇಲೆ ನಾವು ಇವತ್ತು division level post ಗಳನ್ನು ತೆಗೆದು ಹಾಕಿದ್ದೇವೆ. ಹಿಂದೆ ಏನು DVC post ಗಳು ಇದ್ದವು, Revenue Department ನಲ್ಲಿ Joint Commissioner post ಗಳು ಏನಿದ್ದವು. ಇಡೀ ರಾಜ್ಯದಲ್ಲಿ ಅದರಲ್ಲಿಯೂ hierarchy post ಗಳನ್ನು ವಿಶೇಷವಾಗಿ Revenue Department ನಲ್ಲಿತ್ತು, ಮತ್ತು ಬೇರೆ ಬೇರೆ ಎಲ್ಲಾ ಇಲಾಖೆಗಳಲ್ಲೂ ಏನಿತ್ತು ಅವೆಲ್ಲವನ್ನು ಅಬಾಲಿಷ್ ಮಾಡುವುದಕ್ಕೆ ಅವರ ವರದಿ ಮುಖ್ಯವಾದಂಥ ಕಾರಣವಾಗಿದೆ. ಈ ರಾಜ್ಯಕ್ಕೆ ಆಡಳಿತವನ್ನು ಸರಳ ಮಾಡುವುದಕ್ಕೆ ಅವರದೆ ಆದಂಥ ಒಂದು ದೊಡ್ಡ ಕೊಡುಗೆಯನ್ನು ಅವರು ಕೊಟ್ಟುಕೊಂಡು ಬಂದಿದ್ದಾರೆ. ಆಮೇಲೆ

ವಿಶೇಷವಾಗಿ ಮಲೆನಾಡಿನ ವಿದ್ಯಾಸಂಸ್ಥೆಯನ್ನು ಕಟ್ಟಿ ಇಂಜಿನಿಯರಿಂಗ್ ಮತ್ತು ಅನೇಕ ಕಾಲೇಜುಗಳನ್ನು ಕಟ್ಟು ಲಕ್ಷಾಂತರ ಮಂದಿ ವಿದ್ಯಾರ್ಥಿಗಳನ್ನು ಆ ಭಾಗದಿಂದ ತಯಾರು ಮಾಡಿ ಈ ರಾಜ್ಯಕ್ಕೆ ಒಂದು ದೊಡ್ಡ ಕೊಡುಗೆಯಾಗಿ ಕೊಟ್ಟಿದ್ದನ್ನು ನಾವು ಇಲ್ಲಿ ಸ್ಮರಿಸಬಹುದು. ಆ ಭಾಗದಲ್ಲಿ ಬೇಕಾದಷ್ಟು ಜನ ರಾಜಕಾರಣಿಗಳು ಬಂದು ಹೋಗಿದ್ದಾರೆ. ಆದರೆ ಇವರು ವಿದ್ಯಾಕ್ಷೇತ್ರದಲ್ಲಿ ಒಂದು ಪ್ರಮುಖವಾದ ಜವಾಬ್ದಾರಿಯನ್ನು ತೆಗೆದುಕೊಂಡು, ಅದರಲ್ಲೂ ಹಾಸನ ಜಿಲ್ಲೆಯಲ್ಲಿ ವಿಶೇಷವಾಗಿ ಮಾಡಿದ್ದನ್ನು ನಾವು ಸ್ಮರಿಸಿಕೊಳ್ಳಲೇಬೇಕಾಗುತ್ತದೆ. ಅವರು Law Minister ಆಗಿದ್ದಂಥ ಸಂದರ್ಭದಲ್ಲಿ ನಾನು ಹೊಸದಾಗಿ ಶಾಸಕನಾಗಿದ್ದೆ, ಅವರು ಮಾನ್ಯ ವೀರಪ್ಪ ಮೊಯ್ಲಿಯವರು ಮಂತ್ರಿ ಮಂಡಲದಲ್ಲಿ ಕೆಲಸವನ್ನು ಮಾಡಿದ್ದಾರೆ. ಮುಜರಾಯಿ ಮಂತ್ರಿಗಳಾಗಿ ಕೂಡ ಅವರು ಕೆಲಸವನ್ನು ಮಾಡಿ ಅನೇಕ ರಚನಾತ್ಮಕವಾದಂಥ ಕಾರ್ಯಗಳನ್ನು ಮತ್ತು ತಿದ್ದುಪಡಿಗಳನ್ನು ಈ ರಾಜ್ಯದ ಜನತೆಗೆ ತಿಳಿಸಲಿಕ್ಕೆ ಪ್ರಯತ್ನವನ್ನು ಮಾಡಿದ್ದಾರೆ. ದೇವಸ್ಥಾನಗಳ ಬಗ್ಗೆ ಒಂದು ಹೊಸ ಬಿಲ್‌ನ್ನು ಪಾಸ್ ಮಾಡಿದರು. ಅದು ಸ್ವಲ್ಪ controversy ಆಗಿ ಮುಂದಕ್ಕೆ ಹೋಯಿತು. ಹೀಗೆ ಹತ್ತು ಹಲವಾರು ವಿಚಾರಗಳ ಬಗ್ಗೆ ಈ ರಾಜ್ಯಕ್ಕೆ ತನ್ನದೇ ಆದಂಥ ಒಂದು ರೀತಿಯಲ್ಲಿ ಕೊಡುಗೆಯಾಗಿ ಕೊಟ್ಟಿದ್ದಾರೆ. Recent ಆಗಿ ಕೂಡ ನಾವು ಮತ್ತು ಮಾನ್ಯ ಅಶೋಕರವರು ಎಲ್ಲರೂ ಸೇರಿ ದಿ:ಕೆಂಗಲ್ ಹನುಮಂತಯ್ಯನವರ ಒಂದು Foundation ದ ಕಾರ್ಯಕ್ರಮದಲ್ಲಿ ಪಾಲ್ಗೊಂಡಾಗ ಅವರು ಅದರ ಅಧ್ಯಕ್ಷತೆಯನ್ನು ವಹಿಸಿದ್ದರು. ಅವರು ಕೂಡ ಮಾನ್ಯ ಹನುಮಂತಯ್ಯನವರ ವಿಚಾರದಲ್ಲಿ ಆದರ್ಶದ ಜೀವನ ಮತ್ತು ವಿಧಾನಸೌಧವನ್ನು ಕಟ್ಟಿದ ಬಗ್ಗೆ ಮತ್ತು ಸರ್ಕಾರ ಇದರ ಬಗ್ಗೆ ಹೆಚ್ಚಿನ ಒಂದು ಗಮನವನ್ನು ತರಲಿಲ್ಲ ಎನ್ನುವುದರ ಬಗ್ಗೆ ಅವರು ತಮ್ಮ ಮನದಾಳದ ನೋವನ್ನು ವ್ಯಕ್ತಪಡಿಸಿದರು. ಹೀಗೆ ಹತ್ತು ಹಲವಾರು ವಿಚಾರದ ಬಗ್ಗೆ ಅವರು ಯಾವಾಗಲೂ ಕೂಡ ಧ್ವನಿಯನ್ನು ಎತ್ತಿದರು ಮತ್ತು ಮಾಧ್ಯಮಕ್ಕೆ ಅವರದೇ ಆದ ನೇರ ನುಡಿಯ ಬಗ್ಗೆ ನಾವೆಲ್ಲಾ ನೆನಪಿಸಿಕೊಳ್ಳಲೇಬೇಕಾಗುತ್ತದೆ. ಇವತ್ತು ಕೂಡ ಅವರು ಹಾಕಿಕೊಟ್ಟಂಥ foundation ಬಹಳ ಭದ್ರವಾಗಿದೆ. ಅವರ ಸಂಸ್ಥೆ ಅವರ ಪೇಪರ್‌ಗಳು ಅವರ ಮಾಧ್ಯಮ ಇವೆಲ್ಲಾ ಕೂಡ ಇವತ್ತು ಇಡೀ ರಾಜ್ಯದಲ್ಲಿ ಒಂದು ಆದರ್ಶದ ಜೀವನವನ್ನು ನಮ್ಮಂಥದವರಿಗೆಲ್ಲಾ ದಾರಿದೀಪ ಎಂದು ಹೇಳುತ್ತೇನೆ. ಇದರ ಜೊತೆಗೆ ನನಗೆ ಮತ್ತೊಬ್ಬ ಆತ್ಮೀಯರಾದ ಎಂ.ಬಿ.ದಿವಟರ್ ಅವರು ನಾನು ನಮ್ಮ ಪಕ್ಷದಲ್ಲಿ ಕೆಲಸವನ್ನು ಮಾಡಿದ್ದೇವೆ. ನಾವೆಲ್ಲಾ ಯುವ ಕಾಂಗ್ರೆಸ್‌ನಲ್ಲಿ ಕೆಲಸವನ್ನು ಮಾಡುವಾಗ ನಮ್ಮ ಜೊತೆಯಲ್ಲಿ ಅವರು ಉಪಾಧ್ಯಕ್ಷರಾಗಿದ್ದರು. ಎರಡನೆಯ ಭಾರಿ ಶಾಸಕನಾಗಿದ್ದಾಗ ನಾವೆಲ್ಲಾ ಜೊತೆಯಲ್ಲಿ ಕೆಲಸವನ್ನು ಇಲ್ಲಿ ಮಾಡಿದ್ದೇವೆ. ವಿದ್ಯಾರ್ಥಿ ಜೀವನ ಇರುವಾಗ ನಾನು ಅವರ ರೂಂನಲ್ಲಿ ಮಲಗುತ್ತಿದ್ದೆ. ಜನರಲ್ ಹಾಸ್ಪೆಲ್‌ನಲ್ಲಿ

ಅವರ ಒಂದು ರೂಮ. ಇತ್ತು. ನಾವು ರಾಜಕಾರಣ ಮಾಡುವಂಥ ಸಂದರ್ಭದಲ್ಲಿ ತಿಂಗಳಗಟ್ಟಲೆ ಅವರ ರೂಂ ನ್ನು ಉಪಯೋಗಿಸಿಕೊಂಡಿದ್ದು ಕೂಡ ನಾನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾಗುತ್ತದೆ. ಒಂದು ವಾರದ ಹಿಂದೆ ನಾನು ಕೊಪ್ಪಳಕ್ಕೆ ಹೋಗಿ ಅವರ ಮನೆಯ ಕುಟುಂಬದವರನ್ನು ಮಕ್ಕಳನ್ನು ಮಾತನಾಡಿ ಬರುವ ಒಂದು ಅವಕಾಶ ನನಗೆ ಸಿಕ್ಕಿತ್ತು. ಇನ್ನೊಬ್ಬ ಗಣ್ಯರಾದ ಬಿ.ಎಂ. ಇದಿನಬ್ಬರವರದು ಒಂದು ವಿಶೇಷವಾದಂಥ ವ್ಯಕ್ತಿತ್ವ, ದಕ್ಷಿಣ ಕನ್ನಡ ಜಿಲ್ಲೆಗೆ ಅಷ್ಟೆ ಅಲ್ಲ, ಇಡೀ ರಾಜ್ಯಕ್ಕೆ ಒಂದು ವ್ಯಕ್ತಿತ್ವ. ಆ ಭಾಗದಲ್ಲಿ ಮೈನಾರಿಟಿ ಸಮಾಜದಲ್ಲಿರುವ ಇವರು ಕನ್ನಡದ ಏನೊಂದು ಪ್ರತಿಭೆ ಇದೆಯಲ್ಲಾ, ಅವರಲ್ಲಿರುವಂಥ ಕವಿಜ್ಞಾನ, ಬದ್ಧತೆ ಇವೆಲ್ಲಾ ಕೂಡ ಇಡೀ ರಾಜ್ಯದ ಜನತೆಗೆ ಒಂದು ದೊಡ್ಡ ಆದರ್ಶ. ಅವರಿಗೆ ಸಿಕ್ಕ ವಯಸ್ಕರ ಶಿಕ್ಷಣ ವಿಚಾರದಲ್ಲಿ ಒಂದು ಕಡೆ ಕನ್ನಡದ ಅಧ್ಯಕ್ಷರನ್ನಾಗಿ ನಮ್ಮ ಸರ್ಕಾರ ಇರುವಾಗ ಮಾಡಲಾಗಿತ್ತು. ವಯಸ್ಕರ ಶಿಕ್ಷಣ ವಿಚಾರದಲ್ಲಿ ಅವರದೇ ಆದ ಒಂದು ಕೊಡುಗೆಯನ್ನು ಕೊಟ್ಟಿದ್ದಾರೆ. ಇದೆಲ್ಲಾ ಕೂಡ ಈ ರಾಜ್ಯಕ್ಕೆ ಅನೇಕ ಸಲ ಅವರು ಮಾಡಿರುವಂಥ ಸಾಧನೆಯ ಬಗ್ಗೆ ನಾವು ಸ್ಮರಿಸಿಕೊಳ್ಳಬೇಕಾಗುತ್ತದೆ. ಜಿ.ಶಂಕರೇಗೌಡರು. ವಿ.ವಾಸುದೇವರವರು, ಬಿ.ಪಿ.ಗಂಗಾಧರ್‌ರವರು ಬಿ.ಟಿ.ಚನ್ನಬಸಪ್ಪನವರು ಅವರೆಲ್ಲರಲ್ಲಿ ಕೆಲವರನ್ನು ನಾವು ನೋಡುವುದಕ್ಕಾಗಿಲ್ಲ. ಬಿ.ಟಿ.ಚನ್ನಬಸಪ್ಪನವರ ಜೊತೆಯಲ್ಲಿ ಕಮಿಟಿಯಲ್ಲಿ ಕೆಲಸವನ್ನು ನಾವೆಲ್ಲಾ ಮಾಡಿದ ಅನುಭವ ಉಂಟು. ಅವರದು ಸರಳವಾದ ವ್ಯಕ್ತಿತ್ವ, ಅವರ ಕುಟುಂಬದವರು ಏನು ಅವರನ್ನು ಕಳೆದುಕೊಂಡಿದ್ದಾರೆ. ಅವರಿಗೆ ದೇವರ ಶಕ್ತಿಯನ್ನು ಕೊಡಲಿ ಎಂದು ಹೇಳಿ, ಇವತ್ತು ನಾವೆಲ್ಲಾ ಅವರ ಅನೇಕ ವಿಚಾರಗಳನ್ನು ಮತ್ತು ಅನುಭವಗಳನ್ನು ಹಂಚಿಕೊಂಡಿದ್ದೆವೆ. ಭಗವಂತ ಒಳ್ಳೆಯದನ್ನು ಮಾಡಲಿ ಎಂದು ಹೇಳಿ ತಾವು ತಂದಿರುವಂಥ ಸಂತಾಪ ಸೂಚನೆಗೆ ಅನುಮೋದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್.ಯೋಗಿಶ ಭಟ್(ಮಂಗಳೂರು): ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ನಮ್ಮನ್ನು ಅಗಲಿರುವಂಥ ಮಹಾನ್ ಚೇತನಗಳಿಗೆ ತಾವು ತಂದಿರುವಂಥ ಸಂತಾಪ ಸೂಚನೆಯನ್ನು ಬೆಂಬಲಸುತ್ತಾ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತೇನೆ. ನಮ್ಮ ಕ್ಷೇತ್ರದಲ್ಲಿ ಅದೇ ರೀತಿ ನಮ್ಮ ಜಿಲ್ಲೆಯಲ್ಲಿ ಅಷ್ಟೆ ಅಲ್ಲ ನಮ್ಮ ರಾಜ್ಯದಲ್ಲಿ ಹೆಸರಾಂತ ಒಬ್ಬ ವ್ಯಕ್ತಿ, ಒಬ್ಬ ಒಳ್ಳೆಯ ದೇಶಪ್ರೇಮಿ, ಕನ್ನಡಪ್ರೇಮಿ ಅಷ್ಟೆ ಅಲ್ಲ, ಒಬ್ಬ ಒಳ್ಳೆಯ ಮಾನವನಾಗಿ ಜೀವನ ನಡೆಸಿದಂಥ ಒಬ್ಬ ವ್ಯಕ್ತಿ ಬಿ.ಎಂ.ಇದಿನಬ್ಬನವರು. ಅವರ ಒಂದು ಕನ್ನಡ ಪಾಂಡಿತ್ಯ ಮತ್ತು ಆ ಕನ್ನಡ ಪ್ರೇಮ ಯಾವುದೇ ಕಾರ್ಯಕ್ರಮದಲ್ಲಿದ್ದರು ಕೂಡ ಆ ಕಾರ್ಯಕ್ರಮಕ್ಕೆ ಸ್ಪಂದನೆಯಾಗಿ ಪ್ರೇರಣೆ ಕೊಡುವ ನಿಟ್ಟಿನಲ್ಲಿ ಒಂದು ಕವಿತೆಯನ್ನು ರಚಿಸುತ್ತಿದ್ದರು. ಆ ಕವಿತೆಯಲ್ಲಿ ಕೂಡ ಅರ್ಥಪೂರ್ಣತೆ ಮತ್ತು ಭಾವಪೂರ್ಣತೆ ಇತ್ತು. ಅವರ ವೈಯಕ್ತಿಕ ಸಂಪರ್ಕ ಹಾಗೂ ಸ್ನೇಹ ನನಗೆ ಇತ್ತು. ಅವರ ಮನೆಗೆ ಹೋದಾಗ ಡಿ.ವಿ.ಜಿ.ಯವರ ಬಗ್ಗೆ,

ಕುವೆಂಪುರವರ ಬಗ್ಗೆ ಅವರಲ್ಲಿರುವಂಥ ಪ್ರತಿಭೆಗಳನ್ನು ಅಲ್ಲಿರುವಂಥ ವೈಶಿಷ್ಟತೆಯ ಬಗ್ಗೆ ತಿಳಿ ಹೇಳುತ್ತಿದ್ದರು. ಅವರು ಎಂತಹ ಒಂದು ಬಾಳ್ವೆಯನ್ನು ಅವರು ಬಾಳಿದರು ಎಂದರೆ, ಎಲ್ಲರ ಜೊತೆಯಲ್ಲಿ ಒಂದು ಸಾಮರಸ್ಯದ ಪ್ರೀತಿಯ ಒಂದು ಬದುಕು ಅವರದಾಗಿತ್ತು. ಇಂತಹ ಒಬ್ಬ ಸನ್ಮಿತ್ರನನ್ನು ನಾವು ಕಳೆದುಕೊಂಡಿದ್ದೇವೆ. ವಿಶೇಷವಾಗಿ ನಮ್ಮ ಕರ್ನಾಟಕಕ್ಕೆ ಒಬ್ಬ ಒಳ್ಳೆಯ ಕನ್ನಡ ಪ್ರೇಮಿಯನ್ನು ಕಳೆದುಕೊಂಡಿದ್ದೇವೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೊಡುತ್ತಿದ್ದೇನೆ. ಹಾರನಹಳ್ಳಿ ರಾಮಸ್ವಾಮಿಯವರ ಬಗ್ಗೆ, ಅವರ ಆಳವಾದ ವಿದ್ವತ್ ಹಾಗೂ ಪರಿಪಕ್ವವಾದಂಥ ಅನುಭವ. ಅವರ ಆಡಳಿತ ಸುಧಾರಣೆ ಆಯೋಗದಲ್ಲಿ ತಂದಿರುವಂಥ ಒಂದು ವ್ಯಾಲ್ಯೂಮ್‌ಗಳಲ್ಲಿ ತಂದಿರುವಂಥ ಒಂದು ಪ್ರಯತ್ನಗಳು. ಅವರ ಬಗ್ಗೆ ಅನೇಕ ಚಿಂತನ ಮಂಥನಗಳನ್ನು ಮಾಡಬಹುದು. ಆದರೆ ಆಡಳಿತ ವ್ಯವಸ್ಥೆಯಲ್ಲಿ ಸರಳೀಕೃತಗೊಳಿಸುವಂಥದ್ದು ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆಯನ್ನು ತರುವುದು actability ಯನ್ನು ತರುವಂಥದ್ದು. ಭ್ರಷ್ಟಾಚಾರ ಮುಕ್ತ ವ್ಯವಸ್ಥೆಯಲ್ಲಿ ನಮ್ಮ ಭ್ರಷ್ಟಾಚಾರ ಬೇರೂರಿದಾಗ ನಿಜವಾದ ಅರ್ಥದಲ್ಲಿ ನಾವು ಅವರಿಗೆ ಕೊಡುವಂಥ ಶ್ರದ್ಧಾಂಜಲಿ ಎಂದು ನಾನು ತಿಳಿದುಕೊಂಡಿದ್ದೇನೆ. ಇಂತಹ ಒಂದು ಮಹಾನ್ ಚೇತನದ ಪ್ರೇರಣೆ ನಮಗೆಲ್ಲರಿಗೂ ಸರ್ವತಾ ಒಂದು ಮಾರ್ಗದರ್ಶನದ ಸೂತ್ರವೆಂದು ನಾನು ತಿಳಿದುಕೊಂಡಿದ್ದೇನೆ. ಅದರ ಜೊತೆ ಜೊತೆಯಲ್ಲಿ ಇನ್ನಿತರ ಗಣ್ಯ ವ್ಯಕ್ತಿಗಳಾದ ಶ್ರೀ ವಿ.ವಾಸುದೇವ, ಜಿ.ಸಂಕರೇಗೌಡ, ಎಂ.ಬಿ.ದಿವಟರ್, ಬಿ.ಪಿ.ಗಂಗಾಧರ್ ಹಾಗೂ ಬಿ.ಟಿ.ಚನ್ನಬಸಪ್ಪ ಇಂತಹ ಮಹಾನ್ ಚೇತನಗಳನ್ನು ಕೂಡ ನಾವು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಈ ಒಂದು ಅವಕಾಶಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ(ಕೊಪ್ಪಳ): ಮಾನ್ಯ ಅಧ್ಯಕ್ಷರೆ, ಈ ಒಂದು ಸಂತಾಪ ಸೂಚನೆಗೆ ವಂದಿಸಿ ತಾವು ತಂದಿರುವ ಪ್ರಸ್ತಾವಕ್ಕೆ ತಮ್ಮ ಸಹಮತವನ್ನು ಕೋರಿ, ಈ ಸಂದರ್ಭದಲ್ಲಿ ಅತ್ಯಂತ ಹಿರಿಯ ಚೇತನ ಮತ್ತು ದೀರ್ಘ ಮೇಧಾವಿಗಳು ಹಾರನಹಳ್ಳಿ ರಾಮಸ್ವಾಮಿಯವರು. ನಾವು ಇವತ್ತು ಆದರ್ಶವಾದದ ಒಂದು ಕೊಂಡಿಯನ್ನು ಕಳೆದುಕೊಂಡಿದ್ದೇವೆಂದು ನಮಗೆಲ್ಲಾ ಭಾವನೆಯಾಗುತ್ತಿದೆ. ಇದರ ಜೊತೆಗೆ ಇವರು ಒಬ್ಬ ದೇಶಕ್ಕಾಗಿ ಸ್ವಾತಂತ್ರ್ಯ ಹೋರಾಟದಲ್ಲಿಯೂ ಕೂಡ ಮುಂಚೂಣಿಯಲ್ಲಿದ್ದವರು, ಇವರು ಕ್ವಿಟ್ ಇಂಡಿಯಾ ಚಳುವಳಿಯಲ್ಲಿಯೂ ಕೂಡ ಭಾಗವಹಿಸಿ ಈ ದೇಶಕ್ಕಾಗಿ ತ್ಯಾಗವನ್ನು ಮತ್ತು ತಮ್ಮ ಸೇವೆಯನ್ನು ಅರ್ಪಣೆ ಮಾಡಿರುವಂಥಹವರಾಗಿದ್ದಾರೆ. ಅದು ಅಲ್ಲದೆ ಆಡಳಿತ ಸುಧಾರಣೆಯನ್ನು ತರುವಂತಹ ಸಂದರ್ಭದಲ್ಲಿ ಅಧ್ಯಕ್ಷರಾಗಿ ಅನೇಕ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಈ ಸುಧಾರಣೆಯ ವ್ಯವಸ್ಥೆಗೂ ಕೂಡ ಅವರು ಸಹಕಾರಿಯಾಗಿದ್ದರು ಎಂದು ಕೂಡ ಈ ಸಂದರ್ಭದಲ್ಲಿ ಭಾವಿಸಬೇಕಾಗುತ್ತದೆ. ಹಾಗೆಯೇ ಇವತ್ತು ಅವರ ಆತ್ಮಕ್ಕೆ ನಾವೆಲ್ಲರೂ

ಕೂಡ ಚಿರಶಾಂತಿಯನ್ನು ಕೋರಬೇಕೆಂದು ದೇವರಲ್ಲಿ ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ಶ್ರೀ ಬಿ.ಎಂ.ಇದಿನಬ್ಬರವರು, ಶ್ರೀ ವಾಸುದೇವರವರು ಮತ್ತು ಶ್ರೀ ಜಿ.ಶಂಕರೇಗೌಡರವರು ಇವರು ನಮ್ಮ ಭಾಗದವರಾಗಿದ್ದವರು, ಹೊಸಪೇಟೆ ಕ್ಷೇತ್ರದಿಂದ 2 ಸಲ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿ, ಈ ರಾಜ್ಯದ ಸೇವೆಯನ್ನು ಮಾಡಿರುವಂತಹ ವ್ಯಕ್ತಿಯಾಗಿದ್ದಾರೆ. ಇವರು ಅತ್ಯಂತ ಸರಳ ಸಜ್ಜನರಾಗಿದ್ದಾರೆ. ಶ್ರೀಯುತರು ರೈತರ ಪರವಾದಂತಹ ಅನೇಕ ಹೋರಾಟಗಳಲ್ಲಿ ಭಾಗಿಯಾಗಿ ಕೆಲಸವನ್ನು ಮಾಡಿದ್ದಾರೆ. ಹಾಗಾಗಿ ಅವರ ಆತ್ಮಕ್ಕೂ ಕೂಡ ಶಾಂತಿಯನ್ನು ಕೋರುತ್ತೇನೆ. ಶ್ರೀ ಎಂ.ಬಿ.ದಿವಟರ್‌ರವರು ನಮ್ಮ ಕ್ಷೇತ್ರದವರು ಹಾಗೂ ನಮ್ಮ ಜಿಲ್ಲೆಯವರಾಗಿದ್ದಾರೆ. ಅವರು ಕೂಡ ಕಾಂಗ್ರೇಸ್ ಪಕ್ಷದಲ್ಲಿ ಯುವನಾಯಕರಾಗಿ ಕೆಲಸ ಮಾಡಿದವರಾಗಿದ್ದಾರೆ. ಶ್ರೀಯುತರು 7 ಮತ್ತು 9ನೇ ವಿಧಾನಸಭಾ ಸದಸ್ಯರಾಗಿಯೂ ಕೂಡ ಈ ರಾಜ್ಯದ ಸೇವೆಯನ್ನು ಮಾಡಿದ್ದಾರೆ. ಶ್ರೀಯುತರು ವಿಧಾನಸಭಾ ಸದಸ್ಯರಾಗಿರುವಂತಹ ಸಂದರ್ಭದಲ್ಲಿ ಕೊಪ್ಪಳದಲ್ಲಿ ಸಾಹಿತ್ಯ ಸಮ್ಮೇಳನವನ್ನು ಅಲ್ಲಿ ಪ್ರಾರಂಭಿಸುವುದಕ್ಕೆ ಮತ್ತು ಸಮ್ಮೇಳನವನ್ನು ನಡೆಸಿರುವಂತಹ ಕೀರ್ತಿಯೂ ಕೂಡ ಅವರಿಗೆ ಹೋಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇದರ ಜೊತೆಗೆ ಸಾಹಿತ್ಯಭವನವನ್ನು ಕೂಡ ನಿರ್ಮಾಣ ಮಾಡುವುದರಲ್ಲಿ ಕಾರಣೀಕರ್ತರಾಗಿದ್ದಾರೆ. ನೀರಾವರಿ ವಿಚಾರದಲ್ಲಿಯೂ ಕೂಡ ಅವರು ಸಿಂಗಟಾನಲ್ಲೂರು ಇರಬಹುದು, ಹಿರೇಹಳ್ಳ ಯೋಜನೆ ಇರಬಹುದು. ಈ ಯೋಜನೆಗಳಿಗೆ ಚಾಲನೆ ಕೊಡುವುದರಲ್ಲಿ ಮುಂಚೂಣಿಯಲ್ಲಿದ್ದು ಹೋರಾಟವನ್ನು ಮಾಡಿರುವಂತಹ ಒಬ್ಬ ವ್ಯಕ್ತಿ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಶ್ರೀ ಬಿ.ಟಿ.ಚನ್ನಬಸಪ್ಪರವರು ಕೂಡ ಒಬ್ಬ ಸರಳಸಜ್ಜನರಾದಂತಹ ವ್ಯಕ್ತಿಯಾಗಿದ್ದಾರೆ. ಅಂತಹ ವ್ಯಕ್ತಿಗಳ ಜೀವನದ ನಡವಳಿಕೆಗಳನ್ನು ನಾವೆಲ್ಲರೂ ಅನುಸರಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಂಡು ಇವರೆಲ್ಲರ ಆತ್ಮಕ್ಕೆ ಚಿರಶಾಂತಿಯೂ ಸಿಗಲೆಂದು ದೇವರಲ್ಲಿ ಪ್ರಾರ್ಥಿಸಿ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ.ಶ್ರೀನಿವಾಸ ಪ್ರಸಾದ್(ನಂಜನಗೂಡು): ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರುವಂತಹ ಸಂತಾಪ ಸೂಚನೆಯ ಸಂಬಂಧವಾಗಿ ನಾನು ಕೂಡ ಎರಡು ಮಾತನಾಡಬೇಕೆಂದು ಅನಿಸಿದೆ. ನಾನು ಕೂಡ ಕರ್ನಾಟಕ ವಿಧಾನ ಮಂಡಲದ ಸದಸ್ಯರಾಗಿ ಅಗಲಿರುವಂತಹ ನಾಯಕರುಗಳಿಗೆ ನನ್ನ ಶ್ರದಾಂಜಲಿಯನ್ನು ಅರ್ಪಿಸುತ್ತೇನೆ. ಶ್ರೀಯುತ ಹಾರ್ನಳ್ಳಿ ರಾಮಸ್ವಾಮಿಯವರು ವಕೀಲರಾಗಿದ್ದವರು ಮತ್ತು ಸ್ವಾತಂತ್ರ್ಯಯ ಹೋರಾಟಗಾರರಾಗಿದ್ದವರು, ಇವರು ಕರ್ನಾಟಕದ ಏಕೀಕರಣದಲ್ಲಿ ಮುಂಚೂಣಿಯಲ್ಲಿದ್ದವರು ಹಾಗೂ ಕ್ವಿಟ್ ಇಂಡಿಯಾ ಮೂವ್‌ಮೆಂಟ್ ನಲ್ಲಿಯೂ ಕೂಡ ಭಾಗವಹಿಸಿದ್ದರು. ಇವರು ಮಹಾತ್ಮಾ ಗಾಂಧೀಜಿಯವರ ಕರೆಗೆ ಓಗೋಟ್ಟು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡವರಾಗಿದ್ದರು. ಹೋರಾಟವನ್ನು

(ಇ) ಮಂಡ್ಯ ವೈದ್ಯಕೀಯ ಕಾಲೇಜಿಗೆ ಕಟ್ಟಡ ಹಾಗೂ ಮೂಲಬೂತ ಸೌಲಭ್ಯಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಕೊರತೆ ಇರುವುದಿಲ್ಲ

(ಈ) ಹಾಗಿದ್ದಲ್ಲಿ ಈ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಉದ್ಭವಿಸುವುದಿಲ್ಲ

(ಉ) ಮಂಡ್ಯ ವೈದ್ಯಕೀಯ ಕಾಲೇಜನ್ನು ಹೈಟೆಕ್ ಆಸ್ಪತ್ರೆಯನ್ನಾಗೆ ಮಾರ್ಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇಲ್ಲ

(ಊ) ಮಂಡ್ಯ ವೈದ್ಯಕೀಯ ಕಾಲೇಜನ್ನು ಹೈಟೆಕ್ ಆಸ್ಪತ್ರೆಯನ್ನಾಗಿ ಮಾರ್ಪಡಿಸಲು ಗೌರ್ನಿಂಗ್ ಕೌನ್ಸಿಲ್ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದು ನಿಜವೇ;

ಇಲ್ಲ

(ಋ) ಹಾಗಿದ್ದಲ್ಲಿ ಯಾವಾಗ ಹೈಟೆಕ್ ಆಸ್ಪತ್ರೆಯನ್ನಾಗಿ ಪರಿವರ್ತಿಸಲಾಗುವುದು;

ಉದ್ಭವಿಸುವುದಿಲ್ಲ

(ಎ) ಹೈಟೆಕ್ ಆಸ್ಪತ್ರೆಯನ್ನಾಗಿ ಪರಿವರ್ತಿಸಲು ಸರ್ಕಾರ ಬಿಡುಗಡೆ ಮಾಡುವ ಅನುದಾನದ ಮೊತ್ತ ಎಷ್ಟು? ವಿವರಗಳನ್ನು ನೀಡುವುದು;

ಉದ್ಭವಿಸುವುದಿಲ್ಲ

ಶ್ರೀ ಎಂ.ಶ್ರೀನಿವಾಸ್ :– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟಿರುವ ಉತ್ತರ ಅಪೂರ್ಣವಾಗಿದೆ. ಅದು ಪರಿಪೂರ್ಣವಾಗಿಲ್ಲವೆಂದು ಹೇಳಿರುವುದಕ್ಕೆ ಕಾರಣವೇನೆಂದರೆ, 2009–10ನೇ ಸಾಲಿನಲ್ಲಿ ಮೊದಲನೆ ವರ್ಷದ ಎಂ.ಬಿ.ಬಿ.ಎಸ್.ತರಗತಿಗೆ ವಿದ್ಯಾರ್ಥಿಗಳನ್ನು ಅಡ್ಮಿಷನ್ ಮಾಡಿಕೊಳ್ಳುವುದನ್ನು ಐ.ಎಂ.ಸಿ.ಯವರು ನಿರಾಕರಣೆ ಮಾಡಿದ್ದಾರೆ. ಇದಿಷ್ಟೇ ಸಾಕು, ಈ ಮೆಡಿಕಲ್ ಕಾಳೆಜಿನಲ್ಲಿ ಯಾವ ಮೂಲಭೂತ ಸೌಕರ್ಯಗಳು ಇಲ್ಲ ಮತ್ತು ಬೇರೆ ಅಗತ್ಯ ವ್ಯವಸ್ಥೆಗಳು ಕೂಡ insufficient ಇದೆ ಎಂಬುದು ಗೊತ್ತಾಗುತ್ತದೆ. ಇದರ ಜೊತೆಗೆ 441 ಬೆಡ್ಡುಗಳು ಮಾತ್ರ ಜಿಲ್ಲಾ ಆಸ್ಪತ್ರೆಯಲ್ಲಿ ಇದೆ. minimum 750 ಬೆಡ್‌ಗಳು ಇರಬೇಕೆಂದು IMC ಯುವರು ಹೇಳಿದ್ದಾರೆ. ಇದರ ಜೊತೆಗೆ ಅಲ್ಲಿ 450 ಜನರು ಒಳರೋಗಿಗಳು ಇದ್ದರೆ ಪ್ರತಿದಿನ 1000 ಜನರು ಹೊರರೋಗಿಗಳಾಗಿ ಅಲ್ಲಿಗೆ ಬರುತ್ತಿದ್ದಾರೆ. ಅವರಿಗೆ ಮೂಲಭೂತ ಸೌಕರ್ಯಗಳು ಏನೇನೂ ಇಲ್ಲ. ಅಲ್ಲಿಗೆ ವರ್ಷಕ್ಕೆ ಕೇವಲ 30 ಲಕ್ಷ ರೂಪಾಯಿಗಳ ಮೆಡಿಸನ್‌ಗಳನ್ನು ಕೊಟ್ಟಿದ್ದಾರೆ. ಇವೆಲ್ಲದರ ಜೊತೆಗೆ ವೈದ್ಯರ ವಸತಿ ಕೊಠಡಿಗಳ ನಿರ್ಮಾಣ ಕೂಡ ಅಪೂರ್ಣವಾಗಿದೆ. ನರ್ಸಿಂಗ್‌ಗಾಗಿ ವಸತಿ ಗೃಹಗಳನ್ನು ಕಟ್ಟುವುದನ್ನು ಇನ್ನೂ ಪ್ರಾರಂಭವನ್ನೇ ಮಾಡಿಲ್ಲ. ಇದರ ಜೊತೆಗೆ ಐ.ಎಂ.ಸಿ.ಯವರು ಹೇಳಿರುವಂತೆ ಪ್ರಾಯೋಗಿಕ ಮನೆಯನ್ನು ಕಟ್ಟುವ ಕೆಲಸವನ್ನು ಇನ್ನೂ ಪ್ರಾರಂಭವನ್ನೇ ಮಾಡಿಲ್ಲ. ಕ್ಯಾಂಟೀನ್ ವ್ಯವಸ್ಥೆ ಇಲ್ಲ. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಕಟ್ಟುವುದಕ್ಕೆ 40 ಕೋಟಿ ರೂಪಾಯಿಗಳ ಅಂದಾಜನ್ನು ಮಾಡಿದ್ದಾರೆ. ಇನ್ನೂ ಅದನ್ನು ಪ್ರಾರಂಭವನ್ನೇ ಮಾಡಿಸಲಿಲ್ಲ. ಇವೆಲ್ಲವನ್ನು ನೋಡಿಕೊಂಡೇ ಐ.ಎಂ.ಸಿ. ಯವರು ಮೊದಲನೆ ವರ್ಷದ

ಎಂ.ಬಿ.ಬಿ.ಎಸ್.ಪ್ರವೇಶವನ್ನು ಮಾಡಿಕೊಳ್ಳುವುದನ್ನು ನಿರಾಕರಿಸಿದ್ದಾರೆ. ಆದರೆ ಉತ್ತರದಲ್ಲಿ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಇದಕ್ಕೆ ಸರಿಯಾದ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕೆಂದು ಕೇಳಬಯಸುತ್ತೇನೆ.

ಶ್ರೀ ರಾಮಚಂದ್ರ ಗೌಡ (ವೈದ್ಯಕೀಯ ಶಿಕ್ಷಣ ಸಚಿವರು) :– ಮಾನ್ಯ ಅಧ್ಯಕ್ಷರೆ, ಇದು ಹೊಸ ಕಾಲೇಜ್, ಕಳೆದ ವರ್ಷ ಕೂಡ Recognition ಕೊಡಬೇಕಾದರೆ ಐ.ಎಂ.ಸಿ.ಯವರು ತಡ ಮಾಡಿದರು. ಈಗಾಗಲೇ ನಿನ್ನೆ ತೀರ್ಮಾನವಾಗಿದೆ, Recognition ಬಂದಿದೆ, ನಿನ್ನೆ ಮೀಟಿಂಗ್‌ನಲ್ಲಿ ಈ ತೀರ್ಮಾನವಾಗಿದ್ದು ಅದರ ಬಗ್ಗೆ ನಾಳೆ ಬರುತ್ತದೆ. ಇನ್ನು ನಾವು ಆಸ್ಪತ್ರೆಯನ್ನು up gradation ಮಾಡುತ್ತೇವೆಂದು ಹೇಳಿದ್ದೇವೆಯೇ ವಿನಃ Hi-tech or Super Speciality Hospital ಮಾಡುತ್ತೇವೆಂದು ನಾವೇನು ಹೇಳಿಲ್ಲ. ಈಗ 450 ಬೆಡ್‌ಗಳು ಇರುವುದನ್ನು 500 ಬೆಡ್‌ಗಳಿಗೆ ಏರಿಸುವುದಕ್ಕೆ ಎಲ್ಲ ವ್ಯವಸ್ಥೆಗಳನ್ನು ಮಾಡಿದ್ದೇವೆ. ಯಾವುದೇ ಸಂದರ್ಭದಲ್ಲಿಯೂ ಏನೂ ಸಮಸ್ಯೆ ಇಲ್ಲ. ನಮಗೆ ಇಡೀ ರಾಜ್ಯದಲ್ಲಿ ಕಾಲೇಜುಗಳಲ್ಲಿ ಅಧ್ಯಾಪಕರ ಕೊರತೆ ಇತ್ತು. ಅಧ್ಯಾಪಕರ ಕೊರತೆಯನ್ನು ನೀಗಿಸಲು ನಾವು ಅಧ್ಯಾಪಕರ ಹುದ್ದೆಗಳನ್ನು ತುಂಬುತ್ತಿದ್ದೇವೆ. ಹಿಂದೆ 19% ಇದ್ದದ್ದನ್ನು ಈಗ ನಾವು 11% ಗೆ ಇಳಿಸಿದ್ದೇವೆ. ನಿನ್ನೆ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ರಾಜ್ಯದಲ್ಲಿತರಕ್ಕಂಥ 10 ಕಾಲೇಜುಗಳಲ್ಲಿ ಬೀದರ್ ಕಾಲೇಜ್ ಬಗ್ಗೆ ಮಾತ್ರ ಇನ್ನೂ ನಮಗೆ ಪರ್ಮಿಶನ್ ಬರಬೇಕಾಗಿದೆ, ಬಾಕಿ ಉಳಿದ ಎಲ್ಲ ಕಾಲೇಜುಗಳಿಗೂ ಪರ್ಮಿಶನ್ ನಮಗೆ ಬಂದಿದೆ. ಬೀದರ್ ಬಗ್ಗೆ ಕೂಡ ಈಗಾಗಲೇ ನಾವು ಪೋಸ್ಟ್‌ಗಳನ್ನು ಪ್ರಾನ್ಸ್‌ಫರ್ ಮಾಡಿ ಅಗತ್ಯ ಸ್ಟಾಫ್‌ನ್ನು ಕೊಟ್ಟಿದ್ದೇವೆ. ಅದುದರಿಂದ ಆ ಕಾಲೇಜ್ ಬಗ್ಗೆ ಕೂಡ ನಾಳೆ ಅಥವಾ ನಾಡಿದ್ದು ಮೀಟಿಂಗ್‌ನಲ್ಲಿ ತೀರ್ಮಾನವಾಗುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ :– ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರು :– ರೇವಣ್ಣನವರೆ, ಮಂಡ್ಯದ ಬಗ್ಗೆ ಮಾತ್ರ ಈ ಪ್ರಶ್ನೆ ಇರುವುದು. ಅದರ ಬಗ್ಗೆ ಹೇಳಿ. ಅದನ್ನು ಬಿಟ್ಟು ಬೀದರ್, ಬೆಳಗಾಂ ಎಂದು ಹೇಳಬೇಡಿ.

ಶ್ರೀ ಹೆಚ್.ಡಿ.ರೇವಣ್ಣ :– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರೇ ಮಂಡ್ಯದ್ದನ್ನು ಬಿಟ್ಟು ಬೀದರ್ ಬಗ್ಗೆ ಇನ್ನೂ ಪರ್ಮಿಶನ್ ಸಿಕ್ಕಿಲದಲವೆಂದು ಹೇಳಿದ್ದರಿಂದ ನಾನು ಹೇಳಿತ್ತಿದ್ದೇನೆ. ಏಕೆಂದರೆ ಬೀದರ್ ಬಹಳ ಹಿಂದುಳಿದಿರುವ ಪ್ರದೇಶವಾಗಿದೆ. ಮಾನ್ಯ ಸಚಿವರು ಹೇಳಿದ್ದನ್ನು ಕೇಳಿದರೆ ಆ ಭಾಗದ ಜನರಿಗೆ ಸಂದೇಶ ಏನು ಹೋಗುತ್ತದೆಂದರೆ, ಬೇರೆ ಕಾಲೇಜ್‌ಗಳ ಬಗ್ಗೆ ಪರ್ಮಿಶನ್ ಮಾಡಿಸಿಕೊಂಡರು, ಆದರೆ ಬೀದರ್ ಕಾಲೇಜ್ ಬಗ್ಗೆ ಯಾರೂ ಮಾತನಾಡಲೇ ಇಲ್ಲ ಎನ್ನುವ ಭಾವನೆ ಬರುತ್ತದೆ. ಆ ರೀತಿ ಬರುವುದು ಬೇಡ. ದಯಮಾಡಿ ಆ ಕಾಲೇಜ್ ಪ್ರಾರಂಭ ಮಾಡುವುದಕ್ಕೆ ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ ಎನ್ನುವ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಅಧ್ಯಕ್ಷರು :– ಬೀದರ್ ಕಾಲೇಜ್ ಬಗ್ಗೆಯೇ ಅವರು ಪ್ರತ್ಯೇಕ ಪ್ರಶ್ನೆಯನ್ನು ಕೇಳಲಿ.

ಶ್ರೀ ರಾಮಚಂದ್ರಗೌಡ :– ಈಗಾಗಲೇ ಕಾಲೇಜ್ ಪ್ರಾರಂಭವಾಗಿದೆ. ಅಧ್ಯಾಪಕರ Shortage ಏನಿತ್ತು ಅದನ್ನು ಈಗಾಗಲೇ fill up ಮಾಡಿದ್ದೇವೆ. ಅದಕ್ಕೂ ಈಗ ಮನ್ನಣೆ ಬರುತ್ತಿದೆ.

ಶ್ರೀ ಹೆಚ್.ಡಿ.ರೇವಣ್ಣ :– ಮಂಡ್ಯ ಕಾಲೇಜ್‌ನಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಬಾಕಿ ಇರುವ ಕೆಲಸಗಳನ್ನು ಯಾವಾಗ ಮುಗಿಸುತ್ತೀರಿ? ಅದಕ್ಕೇನಾದರೂ ಕಾಲಮಿತಿಯನ್ನು ಹಾಕಿಕೊಂಡಿದ್ದೀರ?

ಶ್ರೀ ಹೆಚ್.ಡಿ.ರೇವಣ್ಣ :– ಅಲ್ಲಿ ಮೂಲಭೂತ ಸೌಕರ್ಯ ಬೇಕಲ್ಲ, ಅಲ್ಲಿ ಬಾಕಿ ಕೆಲಸವನ್ನು ನೀವು ಯಾವಾಗ ಮುಗಿಸುತ್ತೀರಿ? ಅದಕ್ಕೆ ಏನಾದರೂ ಕಾಲಮಿತಿ ಹಾಕಿಕೊಂಡಿದ್ದಾರೆಯೇ? ಏಕೆಂದರೆ ಮುಂದಿನ ವರ್ಷ ಇದೇ ರೀತಿ shortage ಆಯಿತು ಎಂದು ಬರುವುದು ಬೇಡ. ಮಂಡ್ಯ ಕಾಲೇಜು ಬಗ್ಗೆ ಹೇಳಿ.

ಶ್ರೀ ರಾಮಚಂದ್ರಗೌಡ :– ಮಂಡ್ಯ ಕಾಲೇಜಿನಲ್ಲಿ ಎಲ್ಲಾ ಕೆಲಸ ಆಗಿದೆ. ಅಲ್ಲಿ ಹಣ ಬಿಡುಗಡೆಯಾಗಿದೆ. ಯಾವದೇ ಸಮಸ್ಯೆ ಇಲ್ಲ.

ಶ್ರೀ ಬಂಡೆಪ್ಪ ಕಾಶಂಪೂರ್ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳಿಗೆ ಗೊತ್ತಿದೆಯೋ ಇಲ್ಲವೋ, ಆರು ಕಾಲೇಜುಗಳಲ್ಲಿ ಮೊದಲು ಸಿಕ್ಕಿದ್ದು ಬೀದರ್‌ನ ಒಂದೇ ಎಂದು ಕಾಲೇಜಿಗೆ. ಆಗ ನಾನು ಮಂತ್ರಿಯಾಗಿದ್ದೇನೆ. ಈಗ ಎಲ್ಲಾ ಆಗಿ ಬೀದರ್ ಉಳಿದಿದೆಯೆಂದರೆ, ಆ ಭಾಗಕ್ಕೆ ಎಷ್ಟು ಕಾಳಜಿ ವಹಿಸುತ್ತಿದ್ದಾರೆ ಎಂದು ಗೊತ್ತಾಗುತ್ತದೆ. ಮಾನ್ಯ ಮಂತ್ರಿಗಳಿಗೆ ಕೇಳಿಕೊಳ್ಳುವುದೇನೆಂದರೆ ಎಲ್ಲದಕ್ಕಿಂತ ಮೊದಲು ಆ ಭಾಗಕ್ಕೆ ನ್ಯಾಯ ಒದಗಿಸಿ ಎಂದು ಹೇಳುತ್ತಿದ್ದೇನೆ.

ಶ್ರೀ ರಾಮಚಂದ್ರಗೌಡ : ಹೊರಗಡೆ ರಾಜ್ಯದಿಂದ ಪ್ರೊಫೆಸರುಗಳನ್ನು ತಂದಿದ್ದೆವು. ಅವರು ಏಕಾಏಕಿ ಬಿಟ್ಟು ಹೋಗಿದ್ದಾರೆ.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, ನಾನು ಬೆಳಗಾವಿ ಮೆಡಿಕಲ್ ಕಾಲೇಜು ಬಗ್ಗೆ ಕೇಳುತ್ತೇನೆ.

ಅಧ್ಯಕ್ಷರು :– ಬೇಡ, ಆಮೇಲೆ ಇಡೀ ರಾಜ್ಯದ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಅವರು ಕೇಳಿದ್ದು ಮಂಡ್ಯಕ್ಕೆ ಸಂಬಂಧಪಟ್ಟ ಪ್ರಶ್ನೆ, ಎಂ.ಶ್ರೀನಿವಾಸ್‌ರವರೇ ತಾವು ಇನ್ನೊಂದು ಉಪಪ್ರಶ್ನೆ ಏನಾದರೂ ಇದ್ದರೆ ಕೇಳಿ.

ಶ್ರೀ ಎಂ.ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೇ, ಮಂಡ್ಯ ಮೆಡಿಕಲ್ ಕಾಲೇಜ್ ಎಲ್ಲಾ ಅಪೂರ್ಣವಾಗಿದೆ. ಅಲ್ಲಿ ಕಟ್ಟಡ ಮಾರ್ಣವಾಗಿದೆ ಎಂದು ಹೇಳಿದ್ದಾರೆ, ಆದರೆ ಅಲ್ಲಿ ಪೂರ್ಣವಾಗಿಲ್ಲ. ಅಲ್ಲಿ ಕಟ್ಟಡಗಳನ್ನು ಯಾವಾಗ ಪೂರ್ಣ ಮಾಡುತ್ತಾರೆಂದು ಮಾನ್ಯ ಸಚಿವರು ಹೇಳಬೇಕು.

0-1054-15

ಶ್ರೀ ರಾಮಚಂದ್ರಗೌಡ : ಅದಕ್ಕೆ ಬೇಕಾದಂತಹ ಹಣ ಎಲ್ಲಾ ಬಿಡುಗಡೆಯಾಗಿದೆ, ಪೂರ್ತಿಯಾಗಿದೆ, ಇನ್ನು ಸ್ವಲ್ಪ ದಿವಸಗಳಲ್ಲಿ finish ಆಗಿಬಿಡುತ್ತದೆ. ಏನೂ ಸಮಸ್ಯೆ ಇಲ್ಲ.

ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ.

3 (34) ಶ್ರೀ ಪಆಡೀಲ್ ಎ.ಎಸ್.(ನಡಹಳ್ಳಿ) (ದೇವರಹಿಪ್ಪರಗಿ)
ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ. ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಯೋಜನೆ ಇದೆಯೇ;

ಇಲ್ಲ.

ಮಾರ್ಗಸೂಚಿಗಳನ್ವಯ ಬಿಜಾಪುರ ಜೆಲ್ಲೆಯಲ್ಲಿ ಒಟ್ಟು 12 ಸಮುದಾಯ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಬೇಕಿದ್ದು, ಈಗಾಗಲೇ 13 ಸಮುದಾಯ ಆರೋಗ್ಯ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಆದುದರಿಂದ ಹೊಸದಾಗಿ ಸಮುದಾಯ ಆರೋಗ್ಯ ಕೇಂದ್ರಗಳನ್ನು ಈ ಜಿಲ್ಲೆಯಲ್ಲಿ ಪ್ರಾರಂಭಿಸಲು ಅವಕಾಶವಿರುವುದಿಲ್ಲ.

ಆ. ಹಾಗಿದ್ದಲ್ಲಿ, ಬಿಜಾಪುರ ಜಿಲ್ಲೆಯಲ್ಲಿ ಯಾವ ಯಾವ ಸರ್ಕಾರಿ ಆಸ್ಪತೆಗಳು ಮೇಲ್ದರ್ಜೆಗೇರಿಸಲಾಗುತ್ತಿದೆ; ವಿಧಾನಸಭಾ ಕ್ಷೇತ್ರವಾರು ವಿವರ ಒದಗಿಸುವುದು.

ಉದ್ಭವಿಸವುದಿಲ್ಲ.

ಇ. ದೇವರಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯ ದೇವರಹಿಪ್ಪರಗಿ ಕಲಕೇರಿ, ಹೂವಿನಹಿಪ್ಪರಗಿ, ಸ್ಪತ್ರೆಗಳು ಮೇಲ್ದರ್ಜೆಗೇರಿಸಲಾಗುತ್ತಿದೆಯೇ; ಹಾಗಿಲ್ಲದಿದ್ದಲ್ಲಿ, ಕಾರಣಗಳೇನು; ವಿವರ ನೀಡುವುದು.

ಉದ್ಭವಿಸವುದಿಲ್ಲ.

ಈ. ದೇವರಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯ ಕಲಕೇರಿ ಆಸ್ಪತ್ರೆಯಲ್ಲಿ ಕಳೆದ 3 ವರ್ಷಗಳಿಂದ ಎಷ್ಟು ಸಂಥಾನ ಹರಣ ಶಸ್ತ್ರಚಿಕಿತ್ಸೆಗಳಾಗಿವೆ, ಶಸ್ತ್ರಚಿಕಿತ್ಸೆ ಪಡೆದವರ ಗ್ರಾಮ, ಹೆಸರು (ಪುರುಷ ಮತ್ತು ಸ್ತ್ರೀ) ಪ್ರತ್ಯೇಕ ಹೆಸರು ಮತ್ತು ವಿವರ ನೀಡುವುದು;

ವಿವರಗಳನ್ನು ಅನುಬಂಧ–1 ರಲ್ಲಿ ಲಗುತ್ತಿಸಲಾಗಿದೆ.

ಉ. ಸದರಿ ಕಲಕೇರಿ ಆಸ್ಪತ್ರೆಯಲ್ಲಿ ಮಹಿಳಾ ವೈದ್ಯರಿಲ್ಲದೇ ಸ್ಥಳೀಯ ಮಹಿಳೆಯರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಮಹಿಳಾ ವೈದ್ಯರ ನೇಮಕ್ಕೆ ಸರ್ಕಾರ ಕೈಗೊಂಡ ಕ್ರಮವೇನು; ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಮಹಿಳಾ ವೈದ್ಯರ ನೇಮಕಕ್ಕೆ ಸರ್ಕಾರ ಕೈಗೊಂಡ ಕ್ರಮವೇನು;

ಬಂದಿದೆ.

ವೈದ್ಯರ ನೇಮಕಾತಿ ವಿಚಾರದಲ್ಲಿ ಪುರುಷ ಅಥವಾ ಸ್ತ್ರೀ ಎಂಬುದಾಗಿ ವಿಂಗಡಿಸಿ ನೇಮಕಾತಿ ಮಾಡಿಕೊಳ್ಳಲು ಇಲಾಖೆಯ ವ್ಯಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಆದಾಗ್ಯೂ ವೈದ್ಯರ ನೇಮಕಾತಿ ಮಾಡಿದ ಸಮಯದಲ್ಲಿ ಮಹಿಳಾ ವೈದ್ಯಾಧಿಕಾರಿ ಸೇವೆ ಲಭ್ಯವಾದಾಗ ಸ್ರಿ ಆಸ್ಪತ್ರೆಗೆ ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಪ್ರಸ್ತುತ ನೆರೆ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಮಹಿಳಾ ವೈದ್ಯಾಧಿಕಾರಿಯ ಸೇವೆಯನ್ನು ತಾತ್ಕಾಲಿಕವಾಗಿ ಒದಗಿಸಲು ಕ್ರಮ ವಹಿಸಲಾಗಿದೆ.

ವಿಧಾನ ಸಭೆಯ ಚುಕ್ಕೆ ಗುರ್ತಿನ ಪ್ರಶ್ನೆಗೆ ಉತ್ತರಿಸಿದ ವಿವರ

ವಿಧಾನ ಸಭೆಯ ಸದಸ್ಯರ ಹೆಸರು: ಮಾನ್ಯಶ್ರೀ ವೈ.ಎಸ್.ಪಾಟೀಲ (ನಡಹಳ್ಳಿ) ದೇವರ ಹಿಪ್ಪರಗಿ ಮತಕ್ಷೇತ್ರ ಜಿ: ವಿಜಾಪೂರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:34

ಮೇ–06ನೇ ತಿಂಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಲಕೇರಿಯಲ್ಲಿ ಶ್ರಚಿಕಿತ್ಸೆಗೆ ಒಳಪಟ್ಟ ಫಲಾನುಭವಿಗಳ ವಿವರ

ವಾರ್ಷಿಕ ಸಂ	ಅ ನಂ	ಗ್ರಾಮಗಳು	ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡ ಫಲಾನುಭವಿಗಳ ಹೆಸರು	ವಯಸ್ಸು		ಜಾತಿ	ಆದಾಯ	ಶಸ್ತ್ರ ಚಿಕಿತ್ಸೆ ಮಾಡಿದ ವೈದ್ಯರ ಹೆಸರು	ಶಸ್ತ್ರ ಚಿಕಿತ್ಸೆ ಮಾಡಿದ ವೈದ್ಯರ ಹೆಸರು	ಶಸ್ತ್ರ ಚಿಕಿತ್ಸೆ ಮಾಡಿದ ವಿಧಾನ
				ಗಂಡು	ಹೆಣ್ಣು					
1	1	ಕಲಕೇರಿ	ಈರಮ್ಮ ಪರಸಯ್ಯ ನಗೇಶವಂಶಿ	28	26	ಹಿಂದು	6000.00	15/05/06 ಕಲಕೇರಿ	ಡಾ: ಎಸ್ ಎಸ್ ಆಕಾಶ	ಉದರ ದರ್ಶಕ
2	2	ಹಂಚಲಿ	ಶರಣಯ್ಯ ಪ್ರಭು ಹಿರೇಮಠ	30	26	ಹಿಂದು	5000.00			
3	3	ಹಂಚಲಿ	ಸುಮಂಗಲಾ ಮಲ್ಲನಗೌಡ ಹುಣಶ್ಯಾಳ	30	28	ಹಿಂದು	5000.00			
4	4	ಸೊಳೆಭಾವಿ	ಬಸಮ್ಮ ನೀಲಪ್ಪ ಬಡಿಗೇರ	28	26	ಹಿಂದು	5000.00			
5	5	ಕಲಕೇರಿ	ಇಮಾಮಿ ಮುತೇಜ ಗುಂಡಕನಾಳ	30	28	ಮುಸ್ಲಿಂ	8000.00			
6	6	ಹಂಚಲಿ	ನೀಲಮ್ಮ ರುದ್ರಯ್ಯ ಹಿರೇಮಠ	28	24	ಮುಸ್ಲಿಂ	8000.00			

7	7	ಕಗೆಮುಸ್ತಿರ	ಪಾರ್ವತಿ ಹನುಮಂತ ಕರೋಟಿ	34	29	ಹಿಂದು	5000.00			
8	8	ಬಸ್ತಿಹಾಳ	ನೀಲಮ್ಮ ಮಲೇಶ ಹೊಸಮನಿ	30	28	ಎಸ್.ಸಿ.	8000.00			
9	9	ಚಿಕ್ಕ ಕಲಕೇರಿ	ಮಲ್ಲಮ್ಮ ನಿಂಗನಗೌಡ ಟಂಟೆದಾರ	34	29	ಹಿಂದು	6000.00			
10	10	ಕಲಕೇರಿ ಬಿ	ಪಾರ್ವತೆವ್ವ ಜಯಣ್ಣ ದುರ್ಗಮುರಗಿ	30	28	ಎಸ್.ಸಿ.	8000.00			
11	11	ಹುಣಶ್ಯಾಳ	ಹುಸೇನಬಿ ಮಮ್ಮದಸಾಹಿ ಉಸ್ತಾದ	35	30	ಮುಸ್ಲಿಂ	6000.00			
12	12	ಕಲಕೇರಿ ಬಿ	ಜಯಕ್ಕ ದುರಗಪ್ಪ ದುರ್ಗಮುರಗಿ	34	28	ಎಸ್.ಸಿ.	5000.00			
13	13	ಕಲಕೇರಿ ಬಿ	ಜಂಟಕ್ಕ ಆಸಣ್ಣ ದುರ್ಗಮುರಗಿ	32	26	ಎಸ್.ಸಿ.	6000.00			
14	14	ಅರಳಿನಾಗಿ	ಶಾಂತಮ್ಮ ಯಲ್ಲಪ್ಪ ಕಾಚವಾಡ	32	26	ಹಿಂದು	8000.00			
15	15	ಕಲಕೇರಿ ಬಿ	ಪರವೀನಬಿ ಅಬ್ದಯಲಸಾಬ ಮಡಗೇರಿ	32	28	ಮುಸ್ಲಿಂ	8000.00			
16	16	ಹುಣಶ್ಯಾಳ	ಶಾರದಾ ಮಲ್ಲಪ್ಪ ಚಿಗರಿ	30	28	ಹಿಂದು	6000.00			

ಜೂನ್–06ನೇ ತಿಂಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಲಕೇರಿಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಪಟ್ಟಿ ಫಲಾನುಭವಿಗಳ ವಿವರ

17	1	ಕಲಕೇರಿ ಅ	ಅನಪೂರ್ಣ ಸಂತೋಷ ಮೋಪಗಾರ	28	26	ಹಿಂದು	8000.00	19/6/2006 ಕಲಕೇರಿ	ಡಾ: ಎಸ್ ಎಸ್ ಆಕಾಶ	ಉದರ ದರ್ಶಕ
18	2	ಕಲಕೇರಿ	ಹುಸೇನಬಿ ಹುಸೇನಸಾಬ ವಲ್ಕಲ	34	30	ಮುಸ್ಲಿಂ	6000.00			
19	3	ಕಲಕೇರಿ	ಪಾತಿಮಾ ಪರೀವಿನಸಾಬ ಹಂದಿನೂರ	34	28	ಮುಸ್ಲಿಂ	5000.00			
20	4	ಹುಣಶ್ಯಾಳ	ಪಾತೀಮಾ ಹೈದರಸಾಬ ಭಾಗವಾನ	32	29	ಮುಸ್ಲಿಂ	6000.00			
21	5	ಕಲಕೇರಿ	ದಾವಲಬಿ ಅಬ್ದುಲರಜಾಕ ನಾಯ್ಕೋಡಿ	35	30	ಮುಸ್ಲಿಂ	5000.00			
22	6	ಬಿಂಜಲಭಾವಿ	ಲಕ್ಷ್ಮೀ ಅಪ್ಪಾಸಾಬ ಪಾಟೀಲ	34	26	ಹಿಂದು	8000.00			
23	7	ಬಿ.ಬಿ.ಇಂಗಳಗಿ	ಕಾಶಿಬಾಯಿ ದತ್ತಾತ್ರೇಯ ಬಿರಾದಾರ	34	26	ಹಿಂದು	6000.00			
24	8	ತಿಳಿಗೂಳ	ನಿರ್ಮಲಾ ಈರಪ್ಪ ಸಾತಿಹಾಳ	32	28	ಹಿಂದು	8000.00			
25	9	ಹಂಚಲಿ	ಜಯಶ್ರೀ ರಾಯಣ್ಣ ಬಂತನಾಳ	30	35	ಹಿಂದು	6000.00			
26	10	ಹಂಚಲಿ	ರೇಯಮ್ಮ ರಾಯಣ್ಣ	30	25	ಹಿಂದು	6000.00			

			ಬಂರನಾಳ							
27	11	ಕೆರೂಟಿ ಎಲ್‌ಟಿ	ಸುಜಾತಾ ರಮೇಶ ಕಾಶಿಕೊಂಡ	28	26	ಎಸ್.ಸಿ.	5000.00			
28	12	ಕೆರೂಟಿ ಎಲ್‌ಟಿ	ಕಸ್ತೂರಬಾಯಿ ತಿಪ್ಪಣ ಚವ್ಹಾಣ	32	28	ಎಸ್.ಸಿ.	5000.00			
29	13	ಕೆರೂಡಿ ಎಲ್‌ಟಿ	ಸರೀತಾ ಸೋಮು ರಾಠೋಡ	33	39	ಹಿಂದು	6000.00			
30	14	ಕಲಕೇರಿ	ಶರಣಮ್ಮ ಮಡಿವಾಳಪ್ಪ ಕನ್ನೂರ	35	30	ಹಿಂದು	5000.00			
31	15	ಕಲಕೇರಿ	ಶಿವಮ್ಮ ಯಮನಪ್ಪಾ ಹರಿಜನ	50	40	ಹಿಂದು	5000.00			
32	16	ಕಲಕೇರಿ	ನೀಲಮ್ಮ ಮುತ್ತಪ್ಪ ಬಿರಾದಾರ	30	35	ಹಿಂದು	6000.00			
33	17	ಕಲಕೇರಿ	ರೇಣುಕಾ ದಾನಪ್ಪಗೌಡ ಚನ್ನಗೊಂಡ	30	25	ಹಿಂದು	6000.00	17/1/2006 ಕಲಕೇರಿ	ಡಾ: ಎಸ್ ಎಸ್ ಆಕಾಶ	ಉದರ ದರ್ಶಕ
36	1	ಕಲಕೇರಿ	ಶೈನಾಜ ಮಹ್ಮದ ಪಾಟೀಲ	33	26	ಮುಸ್ಲಿಂ	4000.00			
37	2	ಕೆರೂಟಿ ಎಲ್‌ಟಿ	ಶಭನಾ ಲಾಲಸಾಬ ಸಿಂದಾಗಿ	35	28	ಮುಸ್ಲಿಂ	5000.00			
38	3	ಹಡಗಿನಾಳ	ಹಮೀಧಾ ಅಲಾಭಕ್ಷ ಗಂಡಿಮನಿ	30	21	ಮುಸ್ಲಿಂ	6000.00			
39	4	ಕೆರೂಟಿ	ಸಿದ್ದಮ್ಮ ಬಸವರಾಜ ಬೊಮ್ಮನಳ್ಳಿ	30	25	ಹಿಂದು	6000.00			

40	5	ಹಡಗಿನಾಳ	ಸೈನಾಜಬೀ ಹೆಸೇನಸಾಭ ಮುಪ್ಟಿ	35	28	ಮುಸ್ಲಿಂ	6000.00			
41	6	ಹಡಗಿನಾಳ	ಮಾಸಿನಾ ಸಾಹೇಬಲಾಲ ಮುರಡಿ	31	28	ಮುಸ್ಲಿಂ	5000.00			
42	7	ಕಲಕೇರಿ	ರೇಣುಕಾ ಯಮನಪ್ಪ ಬಜಂತ್ರಿ	32	26	ಹಿಂದು	5000.00			
43	8	ಬಿ.ವಿ.ಇಂಗಳಗಿ	ಶೈನಾಜಬಿ ರಾಜೇಸಾಬ ಬಾಗಲಕೊಟ	35	28	ಹಿಂದು	6000.00			
44	9	ಕಲಕೇರಿ ಬಿ	ಮಲ್ಲಮ್ಮ ಶಿವರಾಯಪ್ಪ ಬಡಿಗೇರ	32	26	ಹಿಂದು	5000.00			
45	10	ಕಲಕೇರಿ ಅ	ಆಶಾಬೀ ಹಸನಾಬ ನಾಯ್ಕೋಡಿ	34	29	ಮುಸ್ಲಿಂ	6000.00			
46	11	ಕಲಕೇರಿ ಅ	ಮಕ್ತುಂಬಿ ದಸ್ತಗೀರ ಚುಡಕಿ	32	28	ಮುಸ್ಲಿಂ	8000.00			
47	12	ತಿಳಗೂಳ	ಸರಸ್ವತಿ ಜಟ್ಟಪ್ಪಾ ದಾಪ್ಪ	31	28	ಹಿಂದು	6000.00			
48	13	ತಿಳಗೂಳ	ಮಲ್ಲಮ್ಮ ಧರ್ಮಣ್ಣ ಮಾಧರ	31	26	ಹಿಂದು	5000.00			
49	14	ತಿಳಗೂಳ	ಸಂಗವ್ವ ಅಡಿವೆಪ್ಪ ಅಂಗಡಿ	30	26	ಹಿಂದು	6000.00			
50	15	ತಿಳಗೂಳ	ಗಂಗಮ್ಮ ಶಾಂತಪ್ಪ ಮಾದರ	30	25	ಹಿಂದು	5000.00			
51	16	ಹಂಚಲಿ	ಚನ್ನಮ್ಮ ನಿರಪಾದ ಮುರಗಲ್	30	26	ಹಿಂದು	6000.00			

ಜುಲೈ–06ನೇ ತಿಂಗಳಲ್ಲಿ ಪ್ರಾಥಮಿಕ ಆರೋಗ್ಯ ಕಲಕೇರಿಯಲ್ಲಿ ಶಸ್ತ್ರ ಚಿಕಿತ್ಸೆಗೆ ಒಳಪಟ್ಟ ಫಲಾನಿಭವಿಗಳ ವಿವರ										
52	17	ಕಲಕೇರಿ ಅ	ಮೈರುನಸಾ ನಭಿಸಾಬ ಬರಿಗೇರ	31	27	ಮುಸ್ಲಿಂ	5000.00	17/7/2006 ಕಲಕೇರಿ	ಡಾ: ಎಸ್ ಎಸ್ ಆಕಾಶ	ಉದರ ದರ್ಶಕ
53	18	ಕೆರೂಟಗಿಎಲ್‌ಟಿ	ಕವಿತಾ ರಾಜು ರಾಠೋಡ	30	26	ಮುಸ್ಲಿಂ	6000.00			
54	19	ಹಂಚಲಿ	ಶಾರವ್ವ ಮಾನಪ್ಪಾ ಮಾದನವರ	30	26	ಹಿಂದು	5000.00			
55	20	ಕಲಕೇರಿ	ಸುನಂದಾ ರಮೇಶ ಮೊಪಗಾರ	32	27	ಹಿಂದು	6000.00			
56	21	ಬಿ.ಬಿ.ಇಂಗಳಗಿ	ಸುವರ್ಣಾ ಶಂಕರಗೌಡ ಬಿರಾದಾರ	30	25	ಹಿಂದು	5000.00			
57	22	ಬಿಜಲಭಾವಿ	ಬಸಮ್ಮ ಬಸಪ್ಪ ಮಾದರ	31	26	ಹಿಂದು	5000.00			
58	23	ಹುಣಶ್ಯಾಳ	ಆಶಾಬೀ ಹುಸೇನಸಾಬ ಸವ್ವಾಲು	32	28	ಮುಸ್ಲಿಂ	5000.00			
59	24	ಹುಣಶ್ಯಾಳ	ನಾಕಮ್ಮ ಹುಯಯ್ಯಾ ದುರಮುರಗಿ	32	27	ಹಿಂದು	5000.00			
ಅಗಸ್ಟ್–06ನೇ ತಿಂಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಲಕೇರಿಯಲ್ಲಿ ಶಸ್ತ್ರಚಿಕಿತ್ಸೆ ಒಳಪಟ್ಟ ಫಲಾನುಭವಿಗಳ ವಿವರ										
63	1	ಹಂಚಲಿ	ರೇಣುಕಾ ಮಾರತಗೌಡ ಪಾಟೀಲ	29	25	ಹಿಂದು	8000.00	16/8/2006 ಕಲಕೇರಿ	ಡಾ:	ಉದರ ದರ್ಶಕ
64	2	ಕೆರೂಟಗಿ	ಭಾರತೀ ಸುರೇಶ ಭಜಂತ್ರಿ	26	24	ಹಿಂದು	5000.00			
	3	ಕಲಕೇರಿ	ಗೀತಾ ಸಿದ್ದು ಅಸ್ಕಿ	36	26	ಹಿಂದು	8000.00			

66	4	ಕಲಕೇರಿ	ಫಾತೀಮಾ ಲಾಹೆಮಸ್ಕಾನ ಕಚಣಗಿ	32	28	ಮುಸ್ಲಿಂ	6000.00		ಎಸ್ ಎಸ್ ಆಕಾಶ	
67	5	ಕೆರೂಟಗಿ	ಗಾರೀಮಾ ಮೈಬೂಬ ಭಾಗವಾನ	34	28	ಮುಸ್ಲಿಂ	6000.00			
68	6	ಹಂಚಲಿ	ಬಸಮ್ಮ ಸಿದ್ದು ನಾಲತವಾಡ	34	28	ಹಿಂದು	5000.00			
69	7	ಕೆರೂಟಗಿ	ಚಂದಮ್ಮ ಮಡಿವಾಳಪ್ಪ ಪೂಜಾರಿ	34	26	ಹಿಂದು	6000.00			
70	8	ಕೆರೂಟಗಿ	ಶಾಂತಾ ಮಲ್ಲೇಶ ಪೂಜಾರಿ	28	24	ಹಿಂದು	6000.00			
71	9	ಕಲಕೇರಿ	ಸೀತಾಬಾಯಿ ಬೀರು ರಾಠೋಡ	36	29	ಹಿಂದು	5000.00			
72	10	ರಾಂಪೂರ	ಶ್ಯಾಚೇಲಾ ಹಜರತಸಾಬ ಬಿರಾದಾರ	28	25	ಮುಸ್ಲಿಂ	4000.00			
73	11	ಕೆಸರಟ್ಟಿ	ಬಿಸ್ಮಿಲ್ಲಾ ಬುಡ್ಡೆಸಾಬ ನಾಯ್ಕೋಡಿ	30	26	ಮುಸ್ಲಿಂ	6000.00			
74	12	ಹಂದಿಗನೂರ	ಶಶಿಕಲಾ ಬಾಬು ದೇಸಾಯಿ	35	30	ಹಿಂದು	5000.00			
75	13	ದರ್ಶನಳ್ಳಿ	ವಾರಿಜಾನ ಅಬ್ದುಲ್‌ಸಾಬ ಕಜೀನ	40	35	ಮುಸ್ಲಿಂ	5000.00			
76	14	ಹಂದಿಗನೂರ	ಸೈನಾಜ ಉಸ್ಮಾನ ಹತ್ಯಾಳ	30	25	ಮುಸ್ಲಿಂ	6000.00			
77	15	ಹಂದಿಗನೂರ	ರೂಪಾ ಷಟಾಕಯ್ಯ ಹಿರೇಮಠ	31	26	ಹಿಂದು	8000.00			

78	16	ಹಂದಿಗನೂರ	ಶಾಹೀನಾ ಹಾಜಿಸಾಬ ಕೆರೂಟಗಿ	32	28	ಮುಸ್ಲಿಂ	5000.00			
ಸೆಪ್ಟೆಂಬರ್–06ನೇ ತಿಂಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಲಕೇರಿಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಪಟ್ಟ ಫಲಾನುಭವಿಗಳ ವಿವರ										
-81	1	ಹುಣಶ್ಯಾಳ	ಬಾಲಬೀ ರಬಿಲಾಲ ವಸ್ತಾದ	30	25	ಮುಸ್ಲಿಂ	8000.00	16/9/2006 ಕಲಕೇರಿ	ಡಾ: ಎಸ್ ಎಸ್ ಆಕಾಶ	ಉದರ ದರ್ಶಕ
82	2	ಹುಣಶ್ಯಾಳ	ಮಂಜುಳಾ ಮಡಿವಾಳಪ್ಪ ಕಾರವಾರ	29	27	ಹಿಂದು	5000.00			
83	3	ಹುಣಶ್ಯಾಳ	ಕಾಸೀಬಿ ರುಕಪಟೇಲ ಕಾಚವಾರ	30	26	ಮುಸ್ಲಿಂ	6000.00			
84	4	ಕಲಕೇರಿ	ಪಾರ್ವತಿ ಧನಸಿಂಗ್ ಚವ್ಹಾಣ	31	26	ಹಿಂದು	8000.00			
85	5	ಕಲಕೇರಿ ಅ	ರಿಯಾನಾ ದಬೂಬ ಶೇಖ	32	28	ಮುಸ್ಲಿಂ	6000.00			
86	6	ಕಲಕೇರಿ ಅ	ಶಕೀಲಾ ಅಲ್ಲಾಬಕ್ಷ ಸಿಕ್ಕರಗಾರ	30	28	ಮುಸ್ಲಿಂ	8000.00			
87	7	ಕಲಕೇರಿ ಬಿ	ರೇಣುಕಾ ಶಿವಲಿಂಗಪ್ಪ ಸಿಂದಗೇರಿ	35	26	ಹಿಂದು	6000.00			
88	8	ಬಿಂಜಲಭಾರಿ	ನಾಗಮ್ಮ ಬಸವನಗೌಡ ಕರಿಹಾರ	32	25	ಹಿಂದು	8000.00			
89	9	ಕಲಕೇರಿ ಬಿ	ಜಯಶ್ರೀ ಕಾಶಿನಾಥ ಗುರುಶೆಟ್ಟಿ	32	26	ಹಿಂದು	8000.00			

90	10	ಕಲಕೇರಿ ಬಿ	ಈರಮ್ಮ ಯಂಕಪ್ಪ ವಡ್ಡರ	32	22	ಹಿಂದು	5000.00			
91	11	ರಾಂಪೂರ	ದಾವಲ್ಲಮ್ಮ ಮಸ್ತಮಗೌಡ ಪಾಟೀಲ	32	26	ಹಿಂದು	6000.00			
92	12	ಕಲಕೇರಿ ಬಿ	ರಮೀಜಾನಬೀ ರಾಜಾಸಾಬ ಭಾಗವಾನ	32	26	ಮುಸ್ಲಿಂ	5000.00			
93	13	ತಿಳಗೂಳಿ	ಶಾಂತಾಬಾಯಿ ರಮೇಶ ಯರಗೋಡ	32	28	ಹಿಂದು	6000.00			
94	14	ತಿಳಗೂಳಿ	ಶರಣಮ್ಮ ಧರ್ಮಣ್ಣ ತಳವಾರ	32	28	ಹಿಂದು	8000.00			
95	15	ಕೆರೂಟಗಿ	ದ್ರಾಕ್ಷಾಯಣೀ ರಾಜು ನಾದಿ	28	29	ಹಿಂದು	6000.00			
96	16	ಕೆರೂಟಗಿ	ಅಲ್ಲಾಭೀ ಹುಸೇನಸಾಬ ಚಪ್ರಿ	30	26	ಮುಸ್ಲಿಂ	5000.00			
97	17	ಕೆರೂಟಗಿ	ಸೈಮಿಯಾ ಬುಡೇಸಾಬ ಬಿಂಜಲಭಾವಿ	30	26	ಮುಸ್ಲಿಂ	6000.00	16/9/2006 ಕಲಕೇರಿ	ಡಾ: ಎಸ್ ಎಸ್ ಆಕಾಶ	ಉದರ ದರ್ಶಕ
98	18	ಬಿ.ಬಿ.ಇಂಗಳಗಿ	ಫಾತೀಮಾ ಮಲಿಕಸಾಬ ಸುಡೇರ	30	26	ಮುಸ್ಲಿಂ.	5000.00			
99	19	ಬಿ.ಬಿ.ಇಂಗಳಗಿ	ನೀಲಮ್ಮ ಶಿವಪ್ಪ ಸಜ್ಜನ	31	26	ಹಿಂದು	5000.00			
100	20	ಬಿ.ಬಿ.ಇಂಗಳಗಿ	ಸಾರವ್ವ ಮಾಂತಪ್ಪ ಮಾದರ	32	26	ಹಿಂದು	6000.00			

ನವಂಬರ್–06ನೇ ತಿಂಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಲಕೇರಿಯಲ್ಲಿ ಶಸ್ತ್ರಚಿಕಿತ್ಸೆ ಒಳಪಟ್ಟ ಫಲಾನುಭವಿಗಳ ವಿವರ

106	1	ಕಲಕೇರಿ	ರೇಣುಕಾ ಮಾಸಿಂಗಸಾಬ ಜಗಲಿ	28	24	ಹಿಂದು	6000.00	18/11/2006 ಕಲಕೇರಿ	ಡಾ: ಎಸ್ ಎಸ್ ಆಕಾಶ	ಉದರ ದರ್ಶಕ
107	2	ಕಲಕೇರಿ ಬಿ	ಗಂಗವ್ವ ಮರೆಪ್ಪ ಇಂಗಳಗಿ	32	28	ಹಿಂದು				
108	3	ಮಿಣಜಗಿ	ಸುಮಿತ್ರ ಮಲ್ಲಣ್ಣ ರೂಡಗಿ	28	24	ಹಿಂದು				
109	4	ಹುಣಶ್ಯಾಳ	ಬಿಸ್ಮಿಲ್ಲಾ ಇಸ್ಮಾಯಿಲ್ ಸುತಾರ	30	28	ಮುಸ್ಲಿಂ				
110	5	ಹುಣಶ್ಯಾಳ	ಹಸೀನಾ ದಾವಲ ಹಾದಿಮನಿ	31	28	ಮುಸ್ಲಿಂ				
111	6	ರಾಂಪೂರ	ದಾವಲಬೀ ಬಿಡ್ಡೆಸಾಬ ಧರ್ಮಟಿ	30	26	ಮುಸ್ಲಿಂ				
112	7	ಕಲಕೇರಿ	ಲಕ್ಷ್ಮೀ ಸಂತೋಷ ಬಿಲ್ಲಾ	32	25	ಹಿಂದು				
113	8	ಕಲಕೇರಿ	ಸುರಜಾಬೇಗಂ ರಜಾಕ ಸೇದ	31	25	ಮುಸ್ಲಿಂ				
114	9	ಕಲಕೇರಿ	ಮಾಳಿನಬೀ ರಫೀಕ ಭಾಗವಾನ	30	26	ಮುಸ್ಲಿಂ				
115	10	ಹುಣಶ್ಯಾಳ	ಮೈಬುನಬೀ ಬಂದೇನವಾಬ ಸಿಪಾಯಿ	31	29	ಮುಸ್ಲಿಂ				
ಡಿಸೆಂಬರ್–06ನೇ ತಿಂಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಲಕೇರಿಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಪಟ್ಟ ಫಲಾನುಭವಿಗಳ ವಿವರ										
135	1	ಅಂಬಲನೂರ	ಬಂಡೆಮ್ಮ ಭಾಗಮ್ಮ ಬಿಸನಾಳ	34	29	ಹಿಂದು	5000.00	13/12/06		ಉದರ

136	2	ಅಂಬಲನೂರ	ಭಾನಣ್ಣ ಅಮೀನಸಾಬ ಸಿಂದಗೇರಿ	32	28	ಮುಸ್ಲಿಂ	8000.00	ಕಲಕೇರಿ	ಡಾ: ಎಸ್ ಎಸ್ ಆಕಾಶ	ದರ್ಶಕ
137	3	ಕಲಕೇರಿ	ಸುಮಂಗಲಾ ಚನ್ನಬಸಯ್ಯ ಪೂಜಾರಿ	25	26	ಹಿಂದು	8000.00			
138	4	ಕಲಕೇರಿ ಬಿ	ಹುಸೇನಬಿ ನಟಿಸಾಬ ಮುಜಿದಾರ	31	29	ಮುಸ್ಲಿಂ	6000.00			
139	5	ಬಿ.ಬಿ.ಇಂಗಳಗಿ	ಮುನಿರಬೇಗಂ ಪಟೇಲ ಬಾಗಲಕೂಟ	58	30	ಮುಸ್ಲಿಂ	6000.00			
140	6	ಕಡನಾಳ	ಗಂಗಮ್ಮ ಸಂಗಯ್ಯ ಸ್ಥಾವರಮಠ	30	28	ಹಿಂದು	6000.00			
141	7	ಕಲಕೇರಿ	ರೇಣುಕಾ ವೆಂಕಪ್ಪ ಮುಪೇಗಾರ	31	27	ಹಿಂದು	6000.00			
142	8	ಹುಣಶ್ಯಾಳ	ಮಹಾದೇವಿ ಮಡಿವಾಳ ಭಾವಗಾರ	30	26	ಹಿಂದು	6000.00			
143	9	ಕೆರೂಟಗಿ	ಮಹೇಶ್ವರಿ ಮಲಕಪ್ಪ ಬಾಬರನೂರ	27	24	ಹಿಂದು	3000.00			
144	10	ತಿಳಗೂಳ	ಶಶಿಕಲಾ ಬಸವರಾಜ ನಾಟೀಕಾರ	27	24	ಹಿಂದು	5000.00			
145	11	ತಿಳಗೂಳ	ಲಕ್ಷ್ಮೀಬಾಯಿ ಬಸಪ್ಪ ಗುಡ್ಡಕಿ	30	26	ಹಿಂದು	5000.00			
146	12	ಹಂದಿಗನೂರ	ನೀಲಮ್ಮ ಹಿಂಗಪ್ಪ ಹರಿಜನ	31	28	ಹಿಂದು	3000.00			

ಜನವರಿ–07ನೇ ತಿಂಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಲಕೇರಿಯಲ್ಲಿ ಶಸ್ತ್ರಚಿಕಿತ್ಸೆ ಒಳಪಟ್ಟ ಫಲಾನುಭವಿಗಳ ವಿವರ										
145	1	ಇಂಗಳಗಿ	ಸಾವಿತ್ರಿ ರಮೇಶ ಹಲ್ಯಾಳ	29	25	ಹಿಂದು	5000.00	1/1/07 ಕಲಕೇರಿ	ಡಾ: ಎಸ್ ಎಸ್ ಆಕಾಶ	ಉದರ ದರ್ಶಕ
146	2	ಕೆರುಟಗಿ	ಸವಿತಾ ಸೀನು ರಾತೋಡ	29	26	ಹಿಂದು	6000.00			
147	3	ಯಂಕಂಚಿ	ಬೀಮಮ್ಮ ಹಣಮಂತ ಭಜಂತ್ರಿ	32	26	ಹಿಂದು	5000.00			
148	4	ಕಲಕೇರಿ	ಗುರುಬಾಯಿ ಈರಯ್ಯ ಹಿರೇಮಠ	30	26	ಹಿಂದು	6000.00			
149	5	ರಾಂಪೂರ	ಇಮಾನಬಿ ಕಿಲೇಮಾರ ದಿಡ್ಡಿಮನಿ	30	24	ಹಿಂದು	5000.00			
150	6	ಹುಣಶ್ಯಾಳ	ಲಕ್ಷ್ಮೀ ಸಿದ್ದು ಬೊರಗಿ	34	28	ಹಿಂದು	6000.00			
151	7	ಕಲಕೇರಿ	ಸುವರ್ಣ ರುದ್ರಪ್ಪ ಬಡಿಗೇರ	32	25	ಹಿಂದು	6000.00			
152	8	ತಿಳಗೂಳ	ಸರಸ್ವತಿ ಶೇಕಪ್ಪಾ ತುಂಬಗಿ	32	28	ಹಿಂದು	5000.00			
153	9	ರಾಂಪೂರ	ಶಮಶ್ಯಾದ ಮೆಹಬೂಬಪಟೇಲ ಬಿರಾದಾರ	32	29	ಮುಸ್ಲಿಂ	6000.00			
154	10	ಬನ್ನಟಿ	ಕವಿತಾ ರಾಮಪ್ಪ ಬಜಂತ್ರಿ	30	22	ಹಿಂದು	8000.00			
155	11	ಕಲಕೇರಿ	ಪಾರ್ವತಿ ಧನಸಿಂಗ್ ಪವಾರ	32	26	ಹಿಂದು	7000.00			
156	12	ಹುಣಶ್ಯಾಳ	ರೇಣುಕಾ ಮಲ್ಲೇಶ ತಳವಾರ	32	28	ಹಿಂದು	6000.00			

157	13	ಕೆರುಟಗಿ	ಮಹಾದೇವಿ ರಂಗಣ್ಣ ಪಟ್ಟಣಶೆಟ್ಟಿ	29	24	ಹಿಂದು	8000.00			
158	14	ಮಸಿ	ರೇಣುಕಾ ಇಂದ್ರಮ್ಮ ಮಾರಿಹಾಳ	37	27	ಹಿಂದು	7000.00			
159	15	ಹುಣಶ್ಯಾಳ	ಬಿಂದಿಯಾ ವಾರನವಾದಿ	30	29	ಹಿಂದು	6000.00			
ಮಾರ್ಚ–07ನೇ ತಿಂಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಲಕೇರಿಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಪಟ್ಟ ಫಲಾನುಭವಿಗಳ ವಿವರ										
160	1	ಬಿಂಬಲಭಾವಿ	ರುದ್ರಮ್ಮ ಯಮನಪ್ಪ ಬಿರಾದಾರ	32	26	ಹಿಂದು	8000.00	12/03/07 ಕಲಕೇರಿ	ಡಾ:ಎಸ್ ಎಸ್ ಆಕಾಶ	ಉದರ ದರ್ಶಕ
161	2	ರಾಂಪೂರ	ಹಮೀದಾ ಜಾವರಾಣ ಬನ್ನಟ್ಟಿ	30	26	ಮುಸ್ಲಿಂ	6000.00			
162	3	ಕೇಸರಟ್ಟಿ	ಲಕ್ಷ್ಮೀಬಾಯ ಮಲ್ಲಿಕಾರ್ಜುನ ನಾಯ್ಕೊಡಿ	30	28	ಹಿಂದು	8000.00			
163	4	ಹುಣಶ್ಯಾಳ	ರಮೀಜಾನ ಬಸಿರಸಾಬ ಕೂಂಡಿ	30	28	ಮುಸ್ಲಿಂ	7000.00			
164	5	ಕಲಕೇರಿ	ಸರೋಜನಿ ರಾಮು ದೇಸಾಯಿ	29	28	ಹಿಂದು	7000.00			
165	6	ಕಲಕೇರಿ	ಮಮತಾಜ ಮಮ್ಮದ ಪಾಮೋಲಳ	35	26	ಮುಸ್ಲಿಂ	8000.00			
166	7	ಕಲಕೇರಿ	ಮಕೇಬ ಲಾಲಸಾಬ ಯವಗೊಂಡ	30	24	ಮುಸ್ಲಿಂ	5000.00			

167	8	ಕೊಂಡಗುಳಿ	ಸುರಜಬೇಗಂ ಸಲೀಮ ಯಾವನೂರ	30	24	ಮುಸ್ಲಿಂ	8000.00			
168	9	ಬಿಮಬಲಭಾವಿ	ಲಾಲಬಿ ವಲಿಸಾಬ ಮುಜಾವರ	31	25	ಮುಸ್ಲಿಂ	8000.00			
169	10	ಹೊಸಟ್ಟಿ	ರಾಜಬೀ ಅಮಿನ ಹೊನ್ನಕ್ಕಿ	31	27	ಮುಸ್ಲಿಂ	6000.00			
170	11	ಬಾವೂರ	ಯಾದಮ್ಮ ಯಲ್ಲಪ್ಪ ಮಾದರ	32	26	ಹಿಂದು	6000.00			

ಏಪ್ರೀಲ್–08ನೇ ತಿಂಗಳಲ್ಲಿ ಪ್ರಾಥಮಿಕ ಆರೋಗ್ಯ ಕ್ರೇಂದ್ರ ಕಲಕೇರಿಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಪಟ್ಟ ಫಲಾನುಭವಿಗಳ ವಿವರ

ಮೇ–06ನೇ ತಿಂಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಲಕೇರಿಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಪಟ್ಟ ಫಲಾನುಭವಿಗಳ ವಿದರ

ವಾರ್ಷಿಕ ಸಂ	ಅ ನಂ	ಗ್ರಾಮಗಳು	ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡ ಫಲಾನುಭವಿಗಳ ಹೆಸರು	ವಯಸ್ಸು		ಜಾತಿ	ಆದಾಯ	ಶಸ್ತ್ರ ಚಿಕಿತ್ಸೆ ಮಾಡಿದ ವೈದ್ಯರ ಹೆಸರು	ಶಸ್ತ್ರ ಚಿಕಿತ್ಸೆ ಮಾಡಿದ ವೈದ್ಯರ ಹೆಸರು	ಶಸ್ತ್ರ ಚಿಕಿತ್ಸೆ ಮಾಡಿದ ವಿಧಾನ
				ಗಂಡು	ಹೆಣ್ಣು					
1	1	ಲಿಂಗಸೂರ	ಸರೋಜಾ ಚಂದ್ರಶೇಖರ ಬಡೆಗೇರ	37	27	ಹಿಂದು	5000.00			
2	2	ಕಲಕೇರಿ	ಜಯಶ್ರೀ ಶಿವಲಿಂಗಯ್ಯ ಗಣಾಚಾರಿ	37	21	ಹಿಂದು	8000.00			

3	3	ಕಲಕೇರಿ	ನಸಿಮಾ ಖಾದಿರಸಾಬ ಲಾರಾಮಟ್ಟಿ	28	24	ಮುಸ್ಲಿಂ	6000.00			
4	4	ಯಲಗೂಡ	ಹಳೇವ್ವ ಪರಸುರಾಮ ಪುಟಿ	31	29	ಹಿಂದು	5000.00			
5	5	ಯಲಗೂಡ	ಲಲಿತಾ ಶಿವರಾಯಪ್ಪ ಬಡಿಗೇರ	30	28	ಹಿಂದು	6000.00			
6	6	ಬಿಂಜಲಭಾವಿ	ನಾಗಮ್ಮ ರಾಯಣ್ಣ ತೆಗ್ಗೆಳಿ	30	28	ಹಿಂದು	5000.00			
7	7	ಬಿಂಜಲಭಾವಿ	ಶಬನಾ ಲಾಳಸಾ ಶಿವನಗಿ	28	25	ಮುಸ್ಲಿಂ	6000.00			
8	8	ಕಲಕೇರಿ	ಮಾಲಿನಬಿ ದಾವಲಸಾಬ ಭಾಗವಾನ	32	30	ಮುಸ್ಲಿಂ	5000.00			
9	9	ಕೆರುಟಗಿ	ಸಾವಿತ್ರಿ ಭಿಮನಗೌಡ ಬಿರಾದಾರ	27	24	ಹಿಂದು	8000.00			
10	10	ಕುಂದರಗೂಡ	ಮಲ್ಲಮ್ಮ ಸೂರ್ಯಕಾಂತ ಸುಗ್ಗಿ	35	30	ಹಿಂದು	6000.00			
11	11	ಕುಂದರಗೂಡ	ಬಸಮ್ಮ ಸುಭಾಸ ಕಕಾಶಮೆಟಿ	30	25	ಹಿಂದು	6000.00			
12	12	ಕೆರುಟಗಿ	ಶಿವಲಿಂಗಮ್ಮ ದಾಮೋದ ಯಕುಂಬಿ	35	30	ಹಿಂದು	5000.00			

13	13	ಬಿ.ಬಿ.ಇಂಗಳಗಿ	ಗಂಗಾಬಾಯಿ ಮಡಿವಾಳಪ್ಪ ಅಗಸರ	35	30	ಹಿಂದು	5000.00			
14	14	ಬಿ.ಬಿ.ಇಂಗಳಗಿ	ಹಸಿನಾ ದಸ್ತಗಿರಸಾಬ ಮುಲ್ಲಾ	30	26	ಮುಸ್ಲಿಂ	6000.00			
15	15	ಕೊಂಡಗುಳಿ	ಮೂಬುಬಿ ದಾನಪ್ಪ ಕಾಮನಕೇರಿ	35	30	ಮುಸ್ಲಿಂ	5000.00			
16	16	ಕೊಂಡಗುಳಿ	ರೇಣುಕಾ ಶಿವಗೌಡ ಕಾಮನಕೇರಿ	35	30	ಹಿಂದು	5000.00			
17	17	ಬಿ.ಬಿ.ಇಂಗಳಗಿ	ಗಂಗಾಬಾಯಿ ಬಲವಂತ ಬಜಂತ್ರಿ	30	30	ಹಿಂದು	6000.00			
18	18	ಸುರಗುಪ್ಪಿ	ಅನಪೂರ್ಣ ಯಮನಪ್ಪ ಅನಪಿ	32	28	ಹಿಂದು	5000.00			
19	19	ಮಾನಸಭಾಗ	ಭಿಮಾಬಾಯಿ ರಮೇಶ ಚಾವಟಗಿ	30	27	ಹಿಂದು	6000.00			
20	20	ಹುಣಶ್ಯಾಳ	ಶಾಹಿದಾ ಮಮ್ಮದಸಾಬ ಉಸ್ತಾದ	28	27	ಮುಸ್ಲಿಂ	6000.00			
21	21	ಕೆರುಟಗಿ	ನಾಗರತ್ನ ನಾಗರಾಜ ಪ್ರಧಾನಿ	30	25	ಹಿಂದು	5000.00			
22	22	ಆಲಗೂರ	ಮಲ್ಲಮ್ಮ ಉತ್ತಪ್ಪ ಅಮ್ಮನಗೇರಿ	38	32	ಹಿಂದು	5000.00			

23	23	ಆಲಗೂರ	ಪುತಳಾಬಾಯಿ ಮ ಮಾಗೋಡ	38	32	ಹಿಂದು	6000.00			
24	24	ಹುಣಶ್ಯಾಳ	ಸರಸ್ವತಿ ಅಶೋಕ ಪಾಟೀಲ	33	25	ಹಿಂದು	5000.00			
25	25	ಹುಣಶ್ಯಾಳ	ಭಾರತಿ ಮಹಾಂತೇಶ ಯಕುಂಬಿ	32	27	ಹಿಂದು	6000.00			
ಮೇ–08ನೇ ತಿಂಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಲಕೇರಿಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಪಟ್ಟ ಫಲಾನುಭವಿಗಳ ವಿವರ										
26	1	ಆಲಮೇಲ	ಖಾದರವಿ ಹಾಕಿಸಾಬ ನದಾಫ್	31	28	ಹಿಂದು	6000.00	14/5/08 ಕಲಕೇರಿ	ಡಾ: ಎಸ್ ಎಸ್ ಆಕಾಶ	ಉದರ ದರ್ಶಕ
27	2	ಕೆರುಟಗಿ	ಮಲ್ಲಮ್ಮ ವಿಜಯಕುಮಾರ ಬಜಂತ್ರಿ	25	22	ಹಿಂದು	6000.00			
28	3	ದಿಂಡವಾರ	ಜ್ಯೋತಿ ಉಮೇಶ ಬಿಜ್ಜರಗಿ	31	27	ಹಿಂದು	8000.00			
29	4	ಉಲ್ಲಾಳ	ನಿಂಗಮ್ಮ ಸಿದ್ರಾಮಪ್ಪ ಮಾದರ	38	30	ಹಿಂದು	5000.00			
30	5	ಕಲಕೇರಿ	ಪಾರ್ವತಿ ಯಲ್ಲಪ್ಪ ಪಾಜೇರಿ	32	27	ಹಿಂದು	6000.00			

31	6	ಕಲಕೇರಿ	ಸುಜಾತಾ ಮಲ್ಲಿಕಾರ್ಜುನ ಗೊನಾಳ	30	28	ಹಿಂಧು	6000.00			
32	7	ಕೊಂಡಗೂಳಿ	ಜೈರಾಬಿ ಮೌಲಾಬಿ ತಾಳಿಕೋಟಿ	35	32	ಮುಸ್ಲಿಂ	5000.00			
33	8	ಆಲಗೂರ	ಅಲ್ಲಾಭೀ ಮಮ್ಮದಸಾಬ ಬುಗಟಗಾರ	30	28	ಮುಸ್ಲಿಂ	6000.00			
34	9	ಬಂಡನೂರ	ಮಂಜುಳಾ ಶಂಖರಗೌಡ ಪಡೆಕನೂರ	30	28	ಹಿಂದು	6000.00			
35	10	ಕೆರುಟಗಿ	ಲಾಲಬಿ ಗಾಲಿಬಸಾಬ ಕೊಂಡಿ	35	30	ಮುಸ್ಲಿಂ	6000.00			
36	11	ಕಲಕೇರಿ	ಇಮಾಬಿ ಮಶಾಕಸಾಬ ಆಳೂರ	30	28	ಮುಸ್ಲಿಂ	5000.00			

ಶ್ರೀ ಎ.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಯೋಜನೆ ಇದೆಯೇ ಎಂದು ಕೇಳಿರುವಂತಹ ಪ್ರಶ್ನೆಗೆ ಇಲ್ಲವೆಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಅದೇ ರೀತಿಯಾಗಿ ಬಿಜಾಪುರ ಜಿಲ್ಲೆ ಹಾಗೂ ದೇವರ ಹಿಪ್ಪರಗಿ ಮತಕ್ಷೇತ್ರದಲ್ಲಿ ಬರುವಂತಹ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಏನಿವೆ ಅವುಗಳನ್ನು ಮೇಲ್ದರ್ಜೆಗೇರಿಸುವುದಕ್ಕೆ ಯಾವುದೇ ಒಂದು ಪ್ರಸ್ತಾವನೆ ಇದೆಯೇ ಎಂದು ಕೇಳಿರುವಂತಹ ಪ್ರಶ್ನೆಗೆ ಕೂಡ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಅದೇರೀತಿ ನನ್ನ ಮತಕ್ಷೇತ್ರವಾದ ದೇವರ ಹಿಪ್ಪರಗಿ ಕಲಕೇರಿ ಮತ್ತು ಹೂವಿನ ಹಿಪ್ಪರಗಿಯಲ್ಲಿ ಏನು ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ, ಅವು ಡಾ: ನಂಜುಂಡಪ್ಪ ವರದಿ ಪ್ರಕಾರ ಅತ್ಯಂತ ಹಿಂದುಳಿದ ಪ್ರದೇಶವಾಗಿದೆ, ಅಲ್ಲಿ ಯಾವುದೇ ಸಮುದಾಯ ಆರೋಗ್ಯ ಕೇಂದ್ರ ಇಲ್ಲ. ಅಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ಎಂದು ಕೇಳಿದಾಗ ಉದ್ಭವಿಸುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಆದುದರಿಂದ ನಾನು ಮೊದಲೇ ಆ ಪ್ರಶ್ನೆಗೆ ಬಹಳ ಸ್ಪಷ್ಟವಾಗಿ ಕೇಳಿದ್ದೆನು. ಒಂದು ವೇಳೆ ಮೇಲ್ದರ್ಜೆಗೇರಿಸುವುದಕ್ಕೆ ಆಗುವುದಿಲ್ಲವೆಂದರೆ ಕಾರಣ ತಿಳಿಸಿ ಎಂದು ಕೇಳಿದಾಗ ಅದಕ್ಕೆ ಕಾರಣವನ್ನು ಹೇಳಿಲ್ಲ. ಆದರೆ ಉದ್ಭವಿಸುವುದಿಲ್ಲವೆನ್ನುವ ಶಬ್ದದ ಉತ್ತರವನ್ನು ಮಾತ್ರ ಕೊಟ್ಟಿದ್ದಾರೆ. ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ದೇವರ ಹಿಪ್ಪರಗಿ ಮತಕ್ಷೇತ್ರ ಸಂಪೂರ್ಣವಾಗಿ ಹಳ್ಳಿಗಳಿಂದ ಕೂಡಿರತಕ್ಕಂಥಾದ್ದು ಹಾಗೂ ಮೂರು ಹೋಬಳಿಗಳಿಂದ ಕೂಡಿರುವಂತಹ ಮತಕ್ಷೇತ್ರವಾಗಿದ್ದು, ಅಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಬಿಟ್ಟರೆ ಒಂದೇ ಒಂದು ಸಮುದಾಯ ಆರೋಗ್ಯ ಕೇಂದ್ರ ಇಲ್ಲ. ದೇವರ ಹಿಪ್ಪರಗಿ ತಾಲ್ಲೂಕು ಕೇಂದ್ರ ಆಗುವಂತಹ ಜನಸಂಖ್ಯೆ ಹೊಂದಿರುವಂತಹ ಸ್ಥಳ. ಈಗಾಗಲೇ ತಾಲ್ಲೂಕು ಕೇಂದ್ರ ಆಗುತ್ತದೆಂದು ಸರ್ಕಾರದ ಪ್ರಸ್ತಾವನೆಯನ್ನು ಕೂಡ ಪತ್ರಿಕೆಯಲ್ಲಿ ನಾವು ನೋಡಿದ್ದೇವೆ. ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಕೂಡ ಬಂದಿದೆ. ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ವಿಚಾರದಲ್ಲಿ ಮಾನ್ಯ ಸ್ಪಷ್ಟವಾದ ಉತ್ತರವನ್ನು ಕೊಟ್ಟಿಲ್ಲ. ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ದೇವರ ಹಿಪ್ಪರಗಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಿ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮಾರ್ಪಾಡು ಮಾಡುವುದಕ್ಕೆ ಪ್ರಸ್ತಾವನೆ ಸರ್ಕಾರದ ಮುಂದೆ ಏನಿದೆ ಅದನ್ನು ತಕ್ಷಣ ಮಾಡಿಕೊಡಬೇಕು. ಅದರ ಜೊತೆಯಲ್ಲಿ ಕಲಕೇರಿ ಆರೋಗ್ಯ ಕೇಂದ್ರ ಏನಿದೆ, ಅಲ್ಲಿ ಕಟ್ಟಡ ನಾಲ್ಕು ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಅದಕ್ಕೆ ಬೇಕಾದಂತಹ ಹಣವನ್ನು ಸರ್ಕಾರ ಒದಗಿಸಿಲ್ಲ. ನಾನು ನಿನ್ನೆ ಅಧಿಕಾರಿಗಳ ಜೊತೆ ಮಾತನಾಡಿ ಪ್ರಸ್ತಾವನೆಯನ್ನು ಕಳುಹಿಸಿದ್ದೇನೆ. ಅದನ್ನೂ ಕೂಡ ಮಾನ್ಯ ಆರೋಗ್ಯ ಸಚಿವರು

ಗಮನಿಸಬೇಕು. ಅಲ್ಲಿ ಎಷ್ಟು ಜನ ಸಂತಾನಹರಣ ಶಸ್ತ್ರಚಿಕೆತ್ಸೆಯನ್ನು ಮಾಡಿಕೊಂಡಿದ್ದಾರೆಂದು ..

ಅಧ್ಯಕ್ಷರು : ಪಾಟೀಲರೇ, ತಮಗೆ ಅವಕಾಶ ಕೊಟ್ಟರೆ ಭಾಷಣವನ್ನು ಪ್ರಾರಂಭ ಮಾಡಿಬಿಡುತ್ತೀರಿ, ನೀವು ಆ ಪ್ರಶ್ನೆಗೆ ಸೀಮಿತವಾಗಿ ಹೇಳಿ.

ಶ್ರೀ ಎ.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೇ, ನಾನು ಪ್ರಶ್ನೆಗೆ ಸೀಮಿತವಾಗಿಯೇ ಕೇಳಿದ್ದು, ಆದರೆ ಅವರು ಕಾರಣ ಕೊಟ್ಟಿದ್ದರೆ ನಾನು ವಿವರಣೆ ಕೊಡುವಂತಃ ಪ್ರಶ್ನೆ ಬರುತ್ತಿರಲಿಲ್ಲ. ಅವರು ಈ ಮತಕ್ಷೇತ್ರದಲ್ಲಿ ಡಾ: ನಂಜುಂಡಪ್ಪ ವರದಿ ಪ್ರಕಾರ ಏನು ಮಾಡಬೇಕಾಗಿದೆ ಎಂದು ತಾವು ದಯವಿಟ್ಟು ನೋಡಬೇಕು. ಅವರು ಅಲ್ಲಿಗೆ ಒಂದು ಬಾರಿ ಕೂಡ ಬಂದಿಲ್ಲ. ಅವರು ಅಲ್ಲಿಗೆ ಬಂದಿದ್ದರೆ ನಾನು ಈ ಪ್ರಶ್ನೆಯನ್ನು ಕೇಳುತ್ತಿರಲಿಲ್ಲ. ಅವರು ಅಲ್ಲಿಗೆ ಬಂದು ಆ ಸ್ಥಳವನ್ನು ನೋಡಿದ್ದರೆ ಬಹುಶಃ ಅವರು ಆ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುತ್ತಿದ್ದರು. ದಯಮಾಡಿ ಮಾನ್ಯ ಸಚಿವರು ದೇವರ ಹಿಪ್ಪರಗಿ ಮತಕ್ಷೇತ್ರದಲ್ಲಿ ಬರುವಂತಹ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಲು ಮಾನ್ಯ ಸಚಿವರು ತಕ್ಷಣ ಅನುಮೋದನೆ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇಲ್ಲದೆ ಹೋದಲ್ಲಿ ಕಾರಣವೇನು ಎಂದು ಹೇಳಬೇಕಾಗುತ್ತದೆ.

ಶ್ರೀ ಬಿ.ಶ್ರೀರಾಮುಲು : ಮಾನ್ಯ ಅಧ್ಯಕ್ಷರೇ, ನಾವು ಒಂದು ಸಮುದಾಯ ಆರೋಗ್ಯ ಕೇಂದ್ರವನ್ನು ಮಂಜೂರಾತಿ ಮಾಡಬೇಕಾದರೆ 1,20,000 ಜನಸಂಖ್ಯೆ ಆಧಾರದ ಮೇಲೆ ಕೊಡಬೇಕಾಗುತ್ತದೆ. ಬಿಜಾಪುರ ಜಿಲ್ಲೆಯಲ್ಲಿ ಸುಮಾರಾಗಿ 14,00,000 ಜನಸಂಖ್ಯೆಯಿರುವ ಕಾರಣ 13 ಸಮುದಾಯ ಆರೋಗ್ಯ ಕೇಂದ್ರಗಳು ಕೆಲಸ ಮಾಡುತ್ತಿವೆ. ಅದರಲ್ಲಿ ತಾವು ದೇವರ ಹಿಪ್ಪರಗಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಬೇಕೆಂದು ಮಾನ್ಯ ಸದಸ್ಯರು ಕೇಳಿದರು, ಅಲ್ಲಿ ಇರುವಂಥಹ ಜನಸಂಖ್ಯೆ ಆಧಾರದ ಮೇಲೆ ಸಮುದಾಯ ಆರೋಗ್ಯ ಕೇಂದ್ರವನ್ನು ಕೊಡಬೇಕಾಗುತ್ತದೆ. ಬಿಜಾಪುರ ಜಿಲ್ಲೆಯಲ್ಲಿ 12 ಸಮುದಾಯ ಆರೋಗ್ಯ ಕೇಂದ್ರಗಳಿರಬೇಕಿತ್ತು, ಆದರೆ ಈಗಾಗಲೇ ಅಲ್ಲಿ 13 ಸಮುದಾಯ ಆರೋಗ್ಯ ಕೇಂದ್ರಗಳು ಕೆಲಸ ಮಾಡುತ್ತಿದೆ. ಕಲಕೇರಿಯಲ್ಲಿ ಕೂಡ ಕಟ್ಟಡ ನಾಶವಾಗಿದೆ ಎಂದು ಹೇಳುತ್ತಿದ್ದರು, ಅದಕ್ಕೆ ಎಷ್ಟು ಹಣ ಬೇಕಾಗುತ್ತದೆ ಅಷ್ಟು ಹಣವನ್ನು ಮಂಜೂರಾತಿ ಮಾಡಿಕೊಡುತ್ತೇವೆ. ಇನ್ನು ಮುಂದೆ ತಾವು ಕೇಳಿರುವಂಥಹ ಸಮುದಾಯ ಆರೋಗ್ಯ ಕೇಂದ್ರವನ್ನು ಜನಸಂಖ್ಯೆ ಆಧಾರದ ಮೇಲೆ ಕೊಡಬೇಕಾಗಿರುವುದರಿಂದ, ಅದರ ಬಗ್ಗೆ ನಿಯಮಾವಳಿ, ಬೈಲಾ ಏನಿವೆ ಎಂದು ಪರಿಶೀಲನೆ ಮಾಡಿ ಆದಷ್ಟು ಬೇಗ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಇದು ಆಯಿತಲ್ಲ, ನೀವು ಕಾರಣ ಕೇಳಿದಿರಿ, ಅವರು ಕಾರಣ ಹೇಳಿದರು.

ಶ್ರೀ ಎ.ಸ್.ಪಾಟೀಲ್ : ಮಾನ್ಯ ಅಧ್ಯಕ್ಷರೇ, ನಾನು ಒಂದು ವಿಚಾರವನ್ನು ಗಮನಕ್ಕೆ ತರುತ್ತೇನೆ. ಬಿಜಾಪುರ ಜಿಲ್ಲೆಯಲ್ಲಿ 13 ಸಮುದಾಯ ಆರೋಗ್ಯ ಕೇಂದ್ರಗಳನ್ನು ಮಾಡಿದ್ದಾರೆ, ಅಲ್ಲಿ ವಾಸ್ತವಿಕವಾಗಿ ಏನಾಗಿದೆ ಎಂದರೆ, ತಾವು 1,10,000 ಜನಸಂಖ್ಯೆ ಆಧಾರದ ಮೇಲೆ ಕೊಡುತ್ತೇವೆಂದು ಹೇಳಿದಿರಿ. ದೇವರ ಹಿಪ್ಪರಗಿಯಲ್ಲಿ ಹೋಬಳಿಯಲ್ಲಿ ಬರುವಂತಹ ಜನಸಂಖ್ಯೆ 2001ರ ಜನಗಣತಿ ಪ್ರಕಾರ ಸುಮಾರು 1,35,000 ಇದೆ, ತಾವು ಅದನ್ನು ತರಿಸಿ ನೋಡಬೇಕು. ಇದರ ಬಗ್ಗೆ ಒಂದು ವರ್ಷದಲ್ಲಿ ಎರಡು-ಮೂರು ಬಾರಿ ಪ್ರಸ್ತಾವನೆ ಬಂದಿದೆ. ಆ ಹೋಬಳಿಯಲ್ಲಿ ಸುಮಾರು 86,00,000 ಜನ ಮತದಾರರಿದ್ದಾರೆ, 1,35,000 ಜನಸಂಖ್ಯೆ ಇದೆ. ಏಕೆಂದರೆ ಬೇರೆ ಯಾವುದೋ ಒಂದು ಕ್ಷೇತ್ರದಲ್ಲಿ ನಾಲ್ಕು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವುದಕ್ಕೆ ಆಗುವುದಿಲ್ಲವೆನ್ನುವ ಕಾರಣವನ್ನು ಕೊಡುವುದಕ್ಕಾಗುವುದಿಲ್ಲ. ದಯಮಾಡಿ ಮಾನ್ಯ ಸಚಿವರು ಇದಕ್ಕೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಶ್ರೀರಾಮುಲು : ಮಾನ್ಯ ಅಧ್ಯಕ್ಷರೇ, ನಾವು ಏನೇ ಮಾಡಬೇಕಾದರೂ ಕೂಡ ಜಿಲ್ಲಾ ಜನಸಂಖ್ಯೆ ಆಧಾರದ ಮೇಲೆ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಏನು ಪ್ರಸ್ತಾವನೆಯನ್ನು ಸಭೆಯ ಮುಂದೆ ಇಟ್ಟಿದ್ದಾರೆ, ಅದರ ಬಗ್ಗೆ ನಾನು ಪುನಃ ಪರಿಶೀಲನೆಯನ್ನು ಮಾಡಬೇಕಾಗುತ್ತದೆ. ಅದರ ಬಗ್ಗೆ ನೋಡಿ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ & ಇತರೆ ಸಿಬ್ಬಂದಿಗಳ ಕೊರತೆಯ ಬಗ್ಗೆ

4 (126) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ)
ಶ್ರೀ ಶ್ರೀರಾಮರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಮತ್ತು ವೈದ್ಯರೇತರ ಸಿಬ್ಬಂದಿಗಳ ಕೊರತೆಯ ಸಂಖ್ಯೆ ಎಷ್ಟು;

ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ 1288 ವೈದ್ಯರ ಮತ್ತು 16,253 ವೈದ್ಯೇತರ ಸಿಬ್ಬಂದಿಗಳ ಕೊರತೆ ಇರುತ್ತದೆ.

ಆ) ಹಾಗಿದ್ದಲ್ಲಿ, ವೈದ್ಯರ ಮತ್ತು ಸಿಬ್ಬಂದಿಗಳ ಕೊರತೆ ಇದ್ದರೆ ಅವರನ್ನು ಭರ್ತಿ ಮಾಡಲು ಕೈಗೊಂಡ ತುರ್ತು ಕ್ರಮಗಳೇನು;

ಕರ್ನಾಟಕ ಲೋಕಸೇವಾ ಆಯೋಗದ ಮೂಲಕ 2008-09ನೇ ಸಾಲಿನಲ್ಲಿ 815 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ನೇಮಕಗೊಂಡಿದ್ದು ಇವರಲ್ಲಿ 685 ಮಂದಿ ವೈದ್ಯರು ಕಾರ್ಯವರದಿ ಮಾಡಿಕೊಂಡಿದ್ದಾರೆ. ಹಾಗೂ 130 ಮಂದಿ ವರದಿ ಮಾಡಿಕೊಂಡಿಲ್ಲ. ಇದಲ್ಲದೆ 182 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳು

ಖಾಲಿ ಇವೆ. ಮುಂದುವರೆದು, ಇಲಾಖೆಯಲ್ಲಿ 3101 ಹಿರಿಯ ತಜ್ಞರು/ತಜ್ಞರ ಹುದ್ದೆಗಳು ಮಂಜೂರಾಗಿದ್ದು 2124 ತಜ್ಞರು ಕಾರ್ಯ ನಿರ್ವಹಿಸುತ್ತಿದ್ದಾರೆ. ಹಾಗೂ 977 ತಜ್ಞ ಹುದ್ದೆಗಳು ಖಾಲಿ ಇವೆ. ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ನೇಮಕ ಮಾಡಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ತಜ್ಞರ ಸೇವೆಯನ್ನು ಸಮಾಲೋಚನೆ ಆದಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಇದಕ್ಕಾಗಿ ಎನ್.ಆರ್.ಹೆಚ್.ಎಂ. ಯೋಜನೆಯಡಿಯಲ್ಲಿ ರೂ.25,000 ದಿಂದ ರೂ.50,000 ದ ವರೆಗೆ ಗರಿಷ್ಟ ಮಾಸಿಕ ಗೌರವಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಮುಂದುವರೆದು, ಇಲಾಖೆಯಲ್ಲಿ ಒಟ್ಟು 5245 ವೈದ್ಯೇತರ ಹುದ್ದೆಗಳನ್ನು ವಿಶೇಷ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ.

ಇ) ತೀರ್ಥಹಳ್ಳಿ ವಿಧಾನ ಸಭಾಕ್ಷೇತ್ರದಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಮತ್ತು ವೈದ್ಯರೇತರ ಸಿಬ್ಬಂದಿಗಳ ಕೊರತೆ ಎಷ್ಟಿದೆ; ವಿವರ ನೀಡುವುದು;

ಸದರಿ ವಿಧಾನ ಸಭಾ ಕ್ಷೇತ್ರದಲ್ಲಿ ಈ ಕೆಳಕಂಡ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇದೆ.

1. ಪ್ರಾ.ಆ.ಕೇಂದ್ರ ಆಗುಂಬೆ: 01
2. ಪ್ರಾ.ಆ.ಕೇಂದ್ರ ಮೇಗರವಳ್ಳಿ : 01
3. ಸಂಯುಕ್ತ ಆಸ್ಪತ್ರೆ ಕನ್ನಂಗಿ : 01

85 ಆರೆ ವೈದ್ಯಕೀಯ ಸಿಬ್ಬಂದಿಗಳು ಕೊರತೆ ಇರುತ್ತದೆ.

ಈ) ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದ ಸರ್ಕಾರಿ ಆಸ್ಪತ್ರೆಗಳಲ್ಲಿನ ಕಟ್ಟಡಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಉ) ಹಾಗಿದ್ದಲ್ಲಿ ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;

2009–10ನೇ ಸಾಲಿನಲ್ಲಿ 3 ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡಗಳನ್ನು ಅಂದರೆ, (1) ಗುತ್ತಿಎಡೆಹಳ್ಳಿ, (2) ಅಗರ ಮತ್ತು (3) ಕಟಗೂರು ಗಳಲ್ಲಿ ಕೈಗತ್ತಿಕೊಳ್ಳಲಾಗಿದೆ ಹಾಗೂ ಕಾಮಗಾರಿ ಕೆಲಸಗಳು ಪ್ರಗತಿಯಲ್ಲಿರುತ್ತದೆ.

ಊ) ತೀರ್ಥಹಳ್ಳಿ ವಿಧಾನ ಸಭಾಕ್ಷೇತ್ರದಲ್ಲಿರುವ ಅನೇಕ ಸರ್ಕಾರಿ ಆಸ್ಪತ್ರೆಯ ಕಟ್ಟಡಗಳು ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ

ಋ) ಹಾಗಿದ್ದಲ್ಲಿ ಈ ಕಟ್ಟಡಗಳ ದುರಸ್ಥಿಗಾಗಿ ತೆಗೆದುಕೊಂಡ ಕ್ರಮಗಳೇನು?

2008–09ನೇ ಸಾಲಿನಲ್ಲಿ ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ 4 ಪ್ರಾಥಮಿಕ ಆರೋಗ್ಯ ಕೇಂದ್ರಗಳಾದ ದೇವಂಗಿ, ಕೋಣಂದೂರು, ಯಡೂರು ಮತ್ತು ಮುತ್ತೂರು ಕಟ್ಟಡಗಳ ದುರಸ್ತಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ

O-1454-09

2009–10ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಕ್ರಿಯಾ ಯೋಜನೆ ಅಡಿಯಲ್ಲಿ ಉಪಕೇಂದ್ರಗಳಾದ ಹಾದಿಗಲ್ಲು, ಕೋಣಂದೂರು, ಕಟಗಾರು, ದೇವಂಗಿ, ಕನ್ನಂಗಿ, ರಂಜದ ಕಟ್ಟೆ, ಬಸವಾನಿ, ಬೆಸುಗೆ, ಚಿಕ್ಕಜೇನಿ ಮತ್ತು ಕೋಡೂರು ಕಟ್ಟಡಗಳ ದುರಸ್ತಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಅರಗ ಇಲ್ಲಿನ ವೈದ್ಯರ ವಸತಿ ಗೃಹದ ದುರಸ್ತಿ ಕಾರ್ಯವನ್ನು ಕೈಗೇತ್ತಿಕೊಳ್ಳಲಾಗಿದೆ.

ಶ್ರೀ ರಾಮಚಂದ್ರ ಗೌಡ : ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಆರೋಗ್ಯ ಇಲಾಖೆಗೆ ಬರುತ್ತದೆ.

ಅಧ್ಯಕ್ಷರು : ಆರೋಗ್ಯ ಸಚಿವರೇ, ಈ ಪ್ರಶ್ನೆ ತಮಗೆ ಬರುತ್ತದೆಯೆಂದು ನೋಡಿ ಕಿಮ್ಮನೆ ರತ್ನಾಕರ್‌ರವರೇ ತಮಗೆ ಉತ್ತರ ಕೊಟ್ಟಿಲ್ಲ.

ಶ್ರೀ ಕಿಮ್ಮನೆ ರತ್ನಾಕರ್ : ಉತ್ತರ ಬಂದಿದೆ.

ಅಧ್ಯಕ್ಷರು : ಸದಸ್ಯರಿಗೆ ಉತ್ತರ ಬಂದಿದೆ. ಆರೋಗ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಬಿ.ಶ್ರೀರಾಮುಲು : ವೈದ್ಯಕೀಯ ಶಿಕ್ಷಣ ಸಚಿವರಿಂದ ಉತ್ತರ ಬಂದಿದೆ. ನನಗೆ ಬಂದಿಲ್ಲ

ಅಧ್ಯಕ್ಷರು : ಈ ಪ್ರಶ್ನೆ ನಿಮಗೆ ಬಂದಿದೆ, ಇಲ್ಲಿ ಉತ್ತರ ಇದೆ.

ಶ್ರೀ ಬಿ.ಶ್ರೀರಾಮುಲು : ತಾವು ಪ್ರಶ್ನೆ ಕೇಳಿ.

ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಅಧ್ಯಕ್ಷರೇ, ಉತ್ತರ ಅಪೂರ್ಣವಾಗಿದೆ. ಇದರಲ್ಲಿ ನಾನು ಏಳು ಪ್ರಶ್ನೆಗಳನ್ನು ಕೇಳಿದ್ದೆನು. ನಾನು ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ವಾಸ್ತವದಲ್ಲಿ ಕಟ್ಟಡಗಳು ಪ್ರಗತಿಯಲ್ಲಿದೆ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ತೀರ್ಥಹಳ್ಳಿಯ ವಿಧಾನಸಭಾ ಕ್ಷೇತ್ರದ ಎಲ್ಲಾ ಕಟ್ಟಡಗಳ ಬಗ್ಗೆ ಪ್ರಶ್ನೆ ಮಾಡಿದ್ದೆನು. ಮಾನ್ಯ ಸಚಿವರಿಗೆ ಗೊತ್ತಿಲ್ಲ. ಯಡೂರು ನಕ್ಸಲ್ ಏರಿಯಾ. ಇತ್ತೀಚೆಗೆ ಅಲ್ಲಿ ಒಂದು ಘಟನೆ ನಡೆದಿದೆ. ಅಲ್ಲಿ ಒಂದು ಆಸ್ಪತ್ರೆ ಇದ್ದು, ಅದು ಉದ್ಘಾಟನೆಯಾಗಿ 15 ವರ್ಷವಾಗಿದೆ. ಅಲ್ಲಿ ಆರ್‌ಸಿಸಿ ಹಾಕಿದ್ದಾರೆ. ಅಲ್ಲಿ ಒಂದು ಆಸ್ಪತ್ರೆ ಇದೆ. ಇದು ಉದ್ಘಾಟನೆಯಾಗಿ 15 ವರ್ಷಗಳಾಗಿದೆ. ಈ ಆಸ್ಪತ್ರೆಗೆ ಆರ್‌ಸಿಸಿ ಹಾಕಿದ್ದಾರೆ. ಅದರಲ್ಲಿ ಜನರು ಇಸ್ಪೀಟ್ ಆಟವನ್ನು ಆಡುತ್ತಿದ್ದಾರೆ. ಇದಕ್ಕೆ ಇನ್ನೂ ಹಣ ಬಂದಿಲ್ಲ, ಈ ಕಟ್ಟಡಕ್ಕೆ ಇನ್ನೂ ಪ್ಲಾಸ್ಟರ್ ಆಗಿಲ್ಲ. ಇಲ್ಲಿ ಗಿಡಗಳು ಬೆಳೆದಿದೆ. ಈ ವಿಚಾರಗಳು ತಮ್ಮ ಗಮನಕ್ಕೆ ಬಂದಿದೆಯೋ, ಇಲ್ಲವೊ? ಇದನ್ನು ತಾವು ಸಿಪಡಿಸಲು ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ನಮ್ಮ ಕ್ಷೇತ್ರದಲ್ಲಿ ಐದು ಕಡೆಗಳಲ್ಲಿ ಆರೋಗ್ಯ ಘಟಕಗಳು ಇದ್ದವು. ಅವುಗಳು ಕೇಂದ್ರಗಳಾಗಿ ಪರಿವರ್ತನೆಯಾಗಿವೆ. ಇವುಗಳಿಗೆ ಯಾವುದಕ್ಕೂ ಕ್ವಾರ್ಟರ್ಸ್‌ಗಳಿಲ್ಲ. ಅವುಗಳು ಗುತ್ತಿಎಡೆಹಳ್ಳಿ, ಬಸವಾನಿ, ಯೋಗಿಮನಳ್ಳಿ, ಆರೋದಕೊಗೆ ಮತ್ತು ಕುಂಚದ ಕಟ್ಟೆ ಇವು ಯಾವುದಕ್ಕೂ ಕ್ವಾರ್ಟರ್ಸ್‌ಗಳಿಲ್ಲ.

ಶ್ರೀ ಬಿ.ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಈ ವಿಷಯವಾಗಿ ಸರಿಯಾದ ಮಾಹಿತಿ ನನ್ನ ಬಳಿ ಇಲ್ಲ. ಇದನ್ನು ನಾಳೆ ಬೆಳಿಗ್ಗೆ ತೆಗೆದುಕೊಂಡರೆ ವಿಷಯ ತಿಳಿದುಕೊಂಡು ಹೇಳುತ್ತೇನೆ.

ಅಧ್ಯಕ್ಷರು : ಆಯಿತು, ಮಾನ್ಯ ಕಿಮ್ಮನೆ ರತ್ನಾಕರ್‌ರವರೆ, ಈ ವಿಷಯವನ್ನು ಮುಂದಿನ ವಾರದಲ್ಲಿ ತೆಗೆದುಕೊಳ್ಳೋಣ.

ಶ್ರೀ ಬಿ.ಶ್ರೀರಾಮುಲು : ನಾಳೆ ಬೇಕಾದರೆ ಮುಂದುವರೆಸಿ, ನಾನು ವಿಷಯವನ್ನು ತಿಳಿದುಕೊಂಡು ಹೇಳುತ್ತೇನೆ. ಮುಂದಿನ ಸೋಮವಾರ ಬೇಕಾದರೆ ವಿಷಯವನ್ನು ಮುಂದುವರೆಸಿ, ನಾನು ಆಗ ಉತ್ತರ ಹೇಳುತ್ತೇನೆ.

ಶ್ರೀ ಆರ್.ರೋಷನ್‌ಬೇಗ್ : ಮಾನ್ಯ ಅಧ್ಯಕ್ಷರೆ, ಇದು ಒಂದು important ಪ್ರಶ್ನೆಯಾಗಿದೆ. ಈಗ ಪ್ರಶ್ನೆ ಏನೆಂದರೆ ಎಷ್ಟು shortage of doctors ಇದೆ ಎಂದು

ಅಧ್ಯಕ್ಷರು : ಇರಲಿ..

ಶ್ರೀ ಬಿ.ಶ್ರೀರಾಮುಲು : ಅದನ್ನು ಹೇಳುತ್ತೇನೆ.

ಶ್ರೀ ಆರ್.ರೋಷನ್‌ಬೇಗ್ : ಅದೇ reply ಆಗುವುದು.

ಶ್ರೀ ವಿ.ಎಸ್.ಆಚಾರ್ಯ : ಮಾನ್ಯ ಅಧ್ಯಕ್ಷರೆ, ನಮ್ಮ printed listನಲ್ಲಿ Medical Education ಎಂದು ಇತ್ತು.

ಶ್ರೀ ಬಿ.ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ನಾನು ಮುಂದಿನ ಗುರುವಾರದಂದು ಉತ್ತರ ಕೊಡುತ್ತೇನೆ. ಏನೂ ತೊಂದರೆ ಇಲ್ಲ, ಇದು ಎಲ್ಲೂ ಹೋಗುವುದಿಲ್ಲ.

ಅಧ್ಯಕ್ಷರು : ಮಾನ್ಯ ಕಿಮ್ಮನೆ ರತ್ನಾಕರ್‌ರವರೆ, ಮಾನ್ಯ ಮಂತ್ರಿಯವರು ವಿನಂತಿ ಮಾಡಿಕೊಳ್ಳುತ್ತಿದ್ದಾರೆ, ಮುಂದಿನ ವಾರ ಇದಕ್ಕೆ ಉತ್ತರ ಕೊಡುತ್ತಾರೆ.

ಶ್ರೀ ವಿ.ಎಸ್.ಆಚಾರ್ಯ : ಮಾನ್ಯ ಅಧ್ಯಕ್ಷರೆ, actually ಇದು Health and Family Welfareಗೆ ಇದೆ. ಅವರಿಗೆ ನೋಟೀಸ್ ಬರಲಿಲ್ಲ, ಹಾಗಾಗಿ ಮಂತ್ರಿಯವರು ಈ ಪ್ರಶ್ನೆಗೆ ಮುಂದಿನ ಗುರುವಾರ ಉತ್ತರವನ್ನು ಕೊಡುತ್ತಾರೆ.

ಅಧ್ಯಕ್ಷರು : ಮುಂದಿನ ವಾರ ಉತ್ತರ ಕೊಡಿಸುತ್ತೇನೆ. ಈ ಪ್ರಶ್ನೆಯನ್ನು held up ಮಾಡಿಸುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಅಧ್ಯಕ್ಷರೆ, ತಾವು next time ಹೇಳುತ್ತೀರಿ. ಅದು ಮತ್ತೆ ಬರುವುದೇ ಇಲ್ಲ.

ಅಧ್ಯಕ್ಷರು : ಮಾನ್ಯ ಮಂತ್ರಿಯವರು, ಮಾಹಿತಿಯನ್ನು ತೆಗೆದುಕೊಳ್ಳಲಿ, ಇವತ್ತು ಅವರು ಮಾಹಿತಿ ತೆಗೆದುಕೊಂಡಿಲ್ಲವೆಂದು ಹೇಳುತ್ತಿದ್ದಾರೆ. ಅವರು request ಮಾಡಿಕೊಂಡಿದ್ದಾರೆ. ಈ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳೋಣ.

ಆರೋಗ್ಯ ಕವಚ ಯೋಜನೆಯಡಿಯಲ್ಲಿ ಆಂಬುಲೆನ್ಸ್ ವಾಹನ ಪೂರೈಸುವ ಬಗ್ಗೆ.

6 (130) ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ)
ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಆರೋಗ್ಯ ಕವಚ ಯೋಜನೆಯನ್ನು ಯಾವಾಗ ಜಾರಿಗೆ ತರಲಾಯಿತು. ಇದರ ರೂಪುರೇಷೆಗಳೇನು;

ಆರೋಗ್ಯ ಕವಚ ಯೋಜನೆಯನ್ನು 1-11-2008 ರಿಂದ ಜಾರಿಗೆ ತರಲಾಗಿದೆ.

ಯಾವುದೇ ತುರ್ತು ಕರೆಯನ್ನು ಮೊಬೈಲ್ ಅಥವಾ ನೇರ ದೂರವಾಣಿ ಮೂಲಕ ಸಂಖ್ಯೆ 108ಕ್ಕೆ ಮಾಡಿದಲ್ಲಿ ಅದು ಅಪಘಾತ, ಹಾವು ಕಡಿತ, ಗರ್ಭಿಣಿ ಪ್ರಕರಣಗಳು ಇತ್ಯಾದಿ ವೈದ್ಯಕೀಯಕ್ಕೆ ಸಂಬಂಧಿಸಿದವೂ ಅಲ್ಲದೆ ಪೊಲೀಸ್ ಮತ್ತು ಅಗ್ನಿ ಶಾಮಕಕ್ಕೆ ಸಂಬಂಧಿಸಿದ ಯಾವುದೇ ಕರೆ ಇದ್ದರೂ ಸ್ವೀಕರಿಸಿದ ಕೇಂದ್ರದಲ್ಲಿನ ತುರ್ತುಸ್ಥಿತಿ ನಿರ್ವಹಿಸುವ ತಂಡವು ಆ ಕರೆಯ ಬಗ್ಗೆ ತಕ್ಷಣ ಕಾರ್ಯಪ್ರಮುಖವಾಗುತ್ತದೆ. ಸದರಿ ಕೇಂದ್ರವು ಅರೆ ವೈದ್ಯಕೀಯ ಸಿಬ್ಬಂದಿ ಹಾಗೂ ಇತರೆ ಆಧುನಿಕ ಉಪಕರಣಗಳನ್ನೊಳಗೊಂಡ ಆಂಬುಲೆನ್ಸ್‌ನ್ನು ಘಟನೆಯ ಸ್ಥಳಕ್ಕೆ ವಿಳಂಬವಿಲ್ಲದೆ ಕಳುಹಿಸಲು ಏರ್ಪಾಡು ಮಾಡುತ್ತದೆ. ಆ ಘಟನೆಯ ಸ್ಥಳದಲ್ಲಿ ತುರ್ತು ಚಿಕಿತ್ಸೆಯನ್ನು ನೀಡುವ ಮೂಲಕ ರೋಗಿಯ ಆರೋಗ್ಯವನ್ನು ಸುಧಾರಿಸಿ, ತಕ್ಷಣ ಆಸ್ಪತ್ರೆಗೆ ಸೇರಿಸುವ ವ್ಯವಸ್ಥೆ ಮಾಡಲಾಗುತ್ತದೆ.

ಆ) ನಂಜುಂಡಪ್ಪ ವರದಿಯ ಪ್ರಕಾರ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕು ಅತೀ ಹಿಂದುಳಿದ ಪ್ರದೇಶವಾಗಿದ್ದರೂ ಸಹಾ, ಮಾಗಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಆರೋಗ್ಯ ಕವಚ ಯೋಜನೆಯಡಿ "108" ಮಾದರಿ ಆಂಬುಲೆನ್ಸ್‌ನ್ನು ಪೂರೈಸದೆ ಇರಲು ಕಾರಣವೇನು;

2001ರ ಜನಗಣತಿ ಪ್ರಕಾರ ಕರ್ನಾಟಕದ ಜನಸಂಖ್ಯೆಯು 5.29 ಕೋಟಿಗಳಾಗಿದೆ. ಸರಾಸರಿ 1.10 ಲಕ್ಷ ಜನಸಂಖ್ಯೆಗೆ ಒಂದು ಆಂಬುಲೇನ್ಸ್ ಪ್ರಕಾರ ಒಟ್ಟು 517 ಆಂಬುಲೆನ್ಸ್‌ಗಳನ್ನು ರಾಜ್ಯಾದ್ಯಂತ ಮಾರ್ಚ್-2010 ರ ವೇಳೆಗೆ ಒದಗಿಸಲು ಯೋಜನೆ ಹಮ್ಮಿಕೊಳ್ಳಲಾಗಿದೆ. ಅದರಂತೆ, ಇದುವರೆವಿಗೂ ರಾಜ್ಯಾದ್ಯಂತ ಒಟ್ಟು 208 ಆಂಬುಲೆನ್ಸ್ ಸೇವೆಗಳನ್ನು ಒದಗಿಸಲಾಗಿದೆ. ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿಗೆ ಒಂದು ಆಂಬುಲೆನ್ಸ್‌ನ್ನು ಒದಗಿಸಲಾಗಿದೆ.

ಇ) ಹಾಗಿದ್ದಲ್ಲಿ, ಇನ್ನು ಎಷ್ಟು ದಿನಗಳಲ್ಲಿ ಮಾಗಡಿ ವಿಧಾನ ಸಭಾ ಕ್ಷೇತ್ರಕ್ಕೆ ಹೋಬಳಿಗೆ ಒಂದರಂತೆ ಆಂಬುಲೆನ್ಸ್ ಸೌಲಭ್ಯ ಒದಗಿಸಿ ಕೊಡಲಾಗುವುದು.

ಸರಾಸರಿ 1.10 ಲಕ್ಷ ಜನಸಂಖ್ಯೆಗೆ 1 ಆಂಬುಲೆನ್ಸ್‌ನ್ನು ಒದಗಿಸಲು ಈ ಯೋಜನೆಯಡಿ ಕಲ್ಪಿಸಲಾಗಿರುವ ಕಾರಣ ಪ್ರತಿ ಹೋಬಳಿಗೆ 1 ಆಂಬುಲೆನ್ಸ್‌ರಂತೆ ಒದಗಿಸುವುದು ಸಾಧ್ಯವಾಗುವುದಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಸರ್ಕಾರ ಆರೋಗ್ಯ ಕವಚ ಯೋಜನೆಯಡಿಯಲ್ಲಿ ಆಂಬುಲೆನ್ಸ್‌ಗಳನ್ನು ಕೊಡುವಂಥ ಕಾರ್ಯಕ್ರಮವನ್ನು ಏನು ಹಮ್ಮಿಕೊಂಡಿದೆ, ಅದನ್ನು 1.10 ಲಕ್ಷ ಜನಸಂಖ್ಯೆಗೆ ಅನುಗುಣವಾಗಿ ಕೊಡುತ್ತೇವೆಂಬ ಮಾತನ್ನು ಹೇಳಿದ್ದಾರೆ. ರಾಜ್ಯಾದ್ಯಂತ 517 ಆಂಬುಲೆನ್ಸ್‌ಗಳನ್ನು ಕೊಡಬೇಕಾಗುತ್ತದೆ. ಅದರಲ್ಲಿ 208 ಆಂಬುಲೆನ್ಸ್‌ಗಳನ್ನು ಮಾತ್ರ ಒದಗಿಸಿಕೊಟ್ಟಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಈಗ ಒದಗಿಸಿರುವ ಈ 208 ಆಂಬುಲೆನ್ಸ್‌ಗಳನ್ನು ಯಾವ ಮಾನದಂಡದ ಮೇಲೆ ಕೊಟ್ಟಿದ್ದೀರಿ? ಇದನ್ನು ಕೊಡುವುದಕ್ಕೆ ಮಾನದಂಡ ಏನು? ಅದರ ಆಧಾರ ಏನು? ಎಂಬುದನ್ನು ಹೇಳಬೇಕಾಗುತ್ತದೆ. ಇನ್ನು ಬಾಕಿ ಇರುವಂಥ ಆಂಬುಲೆನ್ಸ್‌ಗಳನ್ನು ಮಾರ್ಚ್ 2010ರ ವೇಳೆಗೆ ಕೊಡುತ್ತೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಇದನ್ನು ಅದಷ್ಟು ಬೇಗನೆ ಪೂರೈಸಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಇನ್ನು ಇದರ ವ್ಯಾಪ್ತಿ ಬರೀ 30 ಕಿ.ಮೀ. ಅಷ್ಟೆ ಇದೆ. ಇದು ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ಗಳ ಹತ್ತಿರ ಮಾತ್ರ ಹೋಗುವುದಕ್ಕೆ ಸೀಮಿತವಾಗುತ್ತದೆ. ಜಿಲ್ಲಾ ಕ್ವಾರ್ಟರ್ಸ್‌ಗಳಿಗೆ ತ್ವರಿತವಾಗಿ ಹೋಗಬೇಕೆಂದರೆ ಅದರ ವ್ಯವಸ್ಥೆಗೆ ಸರ್ಕಾರ ಏನು ಮಾಡುತ್ತದೆ? ಇದರ ಬಗ್ಗೆ ದಯಮಾಡಿ ತಿಳಿಸಬೇಕು. ಇದರ ಜೊತೆಯಲ್ಲಿ ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ಗಳಲ್ಲಿ ಹಳೆಯ ಆಂಬುಲೆನ್ಸ್‌ಗಳು ಇವೆ. ಅವುಗಳನ್ನು ಬದಲಾವಣೆ ಮಾಡಿ ಹೊಸ ಆಂಬುಲೆನ್ಸ್‌ಗಳನ್ನು ಏನಾದರೂ ಕೊಡುತ್ತೀರಾ? ಇವು ಎಲ್ಲಾ ಕೆಟ್ಟು ಹೋಗಿವೆ, ಇದರ ಜೊತೆಗೆ ಡ್ರೈವರ್‌ಗಳು ಇಲ್ಲ, ಇದನ್ನು ಸರಿಪಡಿಸುವಂಥ ಕೆಲಸವನ್ನು ಮಾಡುತ್ತಿರಾ? ಈ ವಿಚಾರವಾಗಿ ದಯಮಾಡಿ ಸರ್ಕಾರ ತಿಳಿಸಬೇಕೆಂದು ತಮ್ಮ ಮೂಲಕ ಹೇಳಲಿಚ್ಛಿಸುತ್ತೇನೆ.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಆರೋಗ್ಯ ಕವಚ ಯೋಜನೆಯನ್ನು ದಿನಾಂಕ:01.11.2008ರಂದು ಪ್ರಾರಂಭ ಮಾಡಿದ್ದೇವೆ. ಇದನ್ನು ಒಟ್ಟಾರೆ 1.10 ಲಕ್ಷ ಜನಸಂಖ್ಯೆ ಆಧಾರದ ಮೇಲೆ ಒಂದು ಆಂಬುಲೆನ್ಸ್ ಅನ್ನು ಕೊಡಬೇಕೆಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಈಗ ರಾಜ್ಯದಲ್ಲಿ 208 ಆಂಬುಲೆನ್ಸ್‌ಗಳು ಕೆಲಸ ಮಾಡುತ್ತಿವೆ. ಬಹಳಷ್ಟು ಜನರಿಗೆ ಹಾವು, ಚೇಲು, ಕಡಿದಂಥ ಸಂದರ್ಭದಲ್ಲಿ, ಗರ್ಭಿಣಿಯರ ಹೆರಿಗೆ ಸಂದರ್ಭದಲ್ಲಿ ಈ ಆಂಬುಲೆನ್ಸ್‌ಗಳು ಉಪಯೋಗವಾಗುತ್ತಿವೆ. ತಮ್ಮ ಮಾಗಡಿ ಕ್ಷೇತ್ರಕ್ಕೂ ಮೊನ್ನೆ ಒಂದು ಅಂಬುಲೆನ್ಸ್ ಅನ್ನು ಕೊಟ್ಟಿದ್ದೇವೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ನಾನು ಇದರ ಮಾನದಂಡ ಏನು? ಎಂದು ಕೇಳುತ್ತಿದ್ದೇನೆ. ನೀವು 208 ಆಂಬುಲೆನ್ಸ್‌ಗಳನ್ನು ಏನು ಕೊಟ್ಟಿದ್ದೀರಿ. ಇದರ ಮಾನದಂಡ ಏನು?

ಶ್ರೀ ಬಿ. ಶ್ರೀರಾಮುಲು : 1.10 ಲಕ್ಷ ಜನಸಂಖ್ಯೆ ಇರುವಂಥಾದ್ದಕ್ಕೆ ಒಂದು ಆಂಬುಲೆನ್ಸ್ ಒದಗಿಸಿದ್ದೇವೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಅಯಿತು, ಅದು ಸರಿ. ಈ 208 ಆಂಬುಲೆನ್ಸ್‌ಗಳನ್ನು ಪ್ರಥಮ ಆದ್ಯತೆಯಲ್ಲಿ ಯಾವ ಆಧಾರದ ಮೇಲೆ ಮೊದಲು ಕೊಟ್ಟಿದ್ದೀರೆಂಬುದನ್ನು ತಿಳಿಸಬೇಕಾಗುತ್ತದೆ. ಈಗ ತಾವು ನಮ್ಮ ತಾಲ್ಲೂಕಿಗೆ ಒಂದು ಆಂಬುಲೆನ್ಸ್ ಅನ್ನು ಕೊಟ್ಟಿದ್ದೀರಿ, ಅದು ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ನಲ್ಲಿ ಇರಬೇಕಾಗುತ್ತದೆ. ಇದು ಅಲ್ಲಿ ಇಲ್ಲ, ಅದು ಹೋಬಳಿ ಹೆಡ್ ಕ್ವಾರ್ಟರ್ಸ್‌ನಲ್ಲಿದೆ. ಅದು ಅಕ್ಸಿಡೆಂಡ್ ಜೋನ್ ಎಂದು ತಾವು ಕೊಟ್ಟಿದ್ದೀರಿ, ಅದರ ಬಗ್ಗೆ ನಮ್ಮ ಚರ್ಚೆ ಇಲ್ಲ. ಅದರೆ ಇದು ತಾಲ್ಲೂಕು ಹೆಡ್ ಕ್ವಾರ್ಟರ್‌ಗಳಲ್ಲಿ ಇರಬೇಕಲ್ಲಾ. ಅದಕ್ಕೆ ಇದರ ಬಗ್ಗೆ ನಿಮ್ಮ ಮಾನದಂಡ ಏನು? ಯಾವ ರೀತಿ ಕೊಡುತ್ತೀರಿ? ಯಾವಾಗ ಪೂರೈಸುತ್ತೀರಿ? ದಯಮಾಡಿ ತೀಳಿಸಬೇಕು.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ರಾಮನಗರ ಜಿಲ್ಲೆಗೆ ಸುಮಾರು ಸುಮಾರು 4 ಆರೋಗ್ಯ ಕವಚ 108 ಮಾದರಿ ಕೊಟ್ಟಿದ್ದೇವೆ. ಈಗ ಮಾನ್ಯ ಸದಸ್ಯರು ತಾಲ್ಲೂಕು ಹೆಡ್ ಕಾರ್ಟಸ್‌ಗಳಲ್ಲಿ ಕಡ್ಡಾಯವಾಗಿ ಇರಬೇಕೆಂದು ಏನು ಕೇಳಿದ್ದಾರೆ. ಇದರ ಬಗ್ಗೆ ನಾನು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಿ, ಅಲ್ಲಿ ಆಂಬುಲೆನ್ಸ್ ಅನ್ನು ನಿಲ್ಲಿಸುವುದಕ್ಕೆ ಏನು ವ್ಯವಸ್ಥೆ ಮಾಡಬೇಕಾಗುತ್ತದೆಂಬುದನ್ನು ನೋಡಿಕೊಂಡು, ಅಲ್ಲಿ ಉಳಿಯುವುದಕ್ಕೆ ವ್ಯವಸ್ಥೆ ಇರುವುದನ್ನು ನೋಡಿಕೊಂಡು ಅಲ್ಲೆ ಆಂಬುಲೆನ್ಸ್ ಇರುವಂತೆ ವ್ಯವಸ್ಥೆಯನ್ನು ನಾನು ಮಾಡಿಕೊಡುತ್ತೇನೆ. ನಾವು ಅದಕ್ಕೆ ಮೊದಲೇ 30 ಕಿ.ಮೀ., 35 ಕಿ.ಮೀ. ಗೆ ಎಂದು ಪಿಕ್ಸ್ ಮಾಡಿರುತ್ತೇವೆ. ಈ ವಾಹನಗಳು ಇಷ್ಟು ಕಿ.ಮೀ.ಗಳಷ್ಟೆ ತಿರುಗಾಡಬೇಕು, ಹೆಚ್ಚು ದೂರ ಹೋಗುವ ಹಾಗೆ ಇಲ್ಲ. ಇದಕ್ಕೆ ಕಾರಣ ಏನೆಂದರೆ ಬಹಳಷ್ಟು ಜನರು ಗ್ರಾಮೀಣಾ ಪ್ರದೇಶದಲ್ಲಿ ಒಂದೊಂದು ಸಮಯದಲ್ಲಿ 100ಕಿ.ಮೀ, 200 ಕಿ.ಮೀ, 300 ಕಿ.ಮೀ. ದೂರ ಬೆಂಗಳೂರಿಗೆ ಬರಬೇಕೆಂದು ಕೇಳುತ್ತಾರೆ. ನಾವು MOU ಮಾಡಿಕೊಳ್ಳುವ ಸಂದರ್ಭದಲ್ಲಿ 30 ಕಿ.ಮೀ., 35 ಕಿ.ಮೀ. ದೂರ ಚಲಿಸಬೇಕೆಂದು ಮಾಡಿಕೊಂಡಿದ್ದೇವೆ. ಇದು ಇದಕ್ಕಿಂತ ಹೆಚ್ಚು ದೂರ ಹೋಗಲು ಆಗದ ಕಾರಣ ಉತ್ತರವನ್ನು ನೀಡಿದ್ದೇವೆ. ಅದರ ಬಗ್ಗೆ ಸೂಕ್ತವಾಗಿ ಯಾವ ರೀತಿ ಮಾಡಬೇಕೆಂಬುದನ್ನು ನೋಡಿ ನಾನು ಮಾಡಿಕೊಡುತ್ತೇನೆಂದು ಹೇಳುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಈಗ ಹಳೆಯ ಆಂಬುಲೆನ್ಸ್‌ಗಳು ತಾಲ್ಲೂಕು ಹೆಡ್ ಕ್ವಾರ್ಟರ್‌ಗಳಲ್ಲಿ ಇವೆ. ಅದನ್ನು replace ಮಾಡಿ ಹೊಸ ಆಂಬುಲೆನ್ಸ್‌ಗಳನ್ನು ಕೊಡುತ್ತಿರಾ? ಹಳೆಯ ಆಂಬುಲೆನ್ಸ್‌ಗಳು ತಾಲ್ಲೂಕು ಹೆಡ್ ಕ್ವಾರ್ಟರ್‌ಗಳಲ್ಲಿ ಇವೆ. ಇವು ಜಿಲ್ಲಾ ಹೆಡ್ ಕ್ವಾರ್ಟರ್‌ಗಳಿಗೆ ಬರಬೇಕಾದರೆ ಈ ಆಂಬುಲೆನ್ಸ್‌ಗಳು ಬರುವುದಿಲ್ಲ. ನೀವು ಅದನ್ನು ಏನಾದರೂ ಸರಿ ಮಾಡಿ ಕೊಡುತ್ತಿರಾ? ಅಥವಾ

ಹೊಸ ಆಂಬುಲೆನ್ಸಗಳನ್ನು ಕೊಡುತ್ತಿರಾ? ಅದಕ್ಕೆ ಡ್ರೈವರ್‌ಗಳ ವ್ಯವಸ್ಥೆಯನ್ನು ಮಾಡಿ ಕೊಡುತ್ತಿರಾ? ದಯಮಾಡಿ ತಿಳಿಸಬೇಕು.

ಶ್ರೀ ಬಿ. ಶ್ರೀರಾಮುಲು : ಹಳೆಯ ಆಂಬುಲೆನ್ಸ್‌ಗಳು ರಿಪೇರಿ ಮಾಡುವ ವಿಚಾರವಾಗಿ ಅದನ್ನು ಯಾವ ರೀತಿಯಲ್ಲಿ ಪರಿಶೀಲನೆ ಮಾಡಬೇಕೋ ನೋಡಿ ಅದನ್ನು ಪರಿಶೀಲನೆ ಮಾಡಿ ಕೊಡುತ್ತೇನೆ.

ಶ್ರೀ ಆರ್.ರೋಷನ್‌ಬೇಗ್ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ತರಬಯಸುವುದೆನೆಂದರೆ ಇದು ಒಂದು ಒಳ್ಳೆಯ ಸ್ಕೀಮ್ ಆಗಿದೆ. ಇವರು ಆರೋಗ್ಯ ಕವಚ ಯೋಜನೆಯಡಿ 108 ಮಾದರಿ ಆಂಬುಲೆನ್ಸ್ ಅನ್ನು emergency response service ಎಂದು ಪ್ರಾರಂಭ ಮಾಡಿದ್ದಾರೆ. ಇದನ್ನು ಆಂಧ್ರಪ್ರದೇಶದಲ್ಲಿ ಪ್ರಾರಂಭ ಮಾಡಿದರು, ಕರ್ನಾಟಕ ರಾಜ್ಯದಲ್ಲೂ ಸಹ ಪ್ರಾರಂಭ ಮಾರಿದರು ಮತ್ತು ರಾಜಸ್ಥಾನದಲ್ಲೂ ಸಹ ಪ್ರಾರಂಭ ಮಾಡಿದರು. ಅದರೆ ಇದನ್ನು ಪ್ರಾರಂಭ ಮಾಡಿದ್ದು ಯಾರು ಎಂದರೆ, Out look ಎಂದು ದೇಶದಲ್ಲಿ.

ಅಧ್ಯಕ್ಷರು : ಮಾನ್ಯ ರೋಷನ್‌ಬೇಗ್‌ರವರೆ, ತಾವು ನೇರವಾಗಿ ಪ್ರಶ್ನೆಯನ್ನು ಕೇಳಿ. ನೀವು ಈಗ ಉಪ ಪ್ರಶ್ನೆಯನ್ನು ಕೇಳಿ. ನೀವು ಬೇಕಾದರೆ debateನಲ್ಲಿ participate ಮಾಡುವಿರಂತೆ

ಶ್ರೀ ಆರ್.ರೋಷನ್‌ಬೇಗ್ : ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆ ಕೇಳುವಂಥಾದ್ದು ಏನೆಂದರೆ ಇವರು Board meetingನಲ್ಲಿ ಒಂದು resolution ಮಾಡುತ್ತಾರೆ. ಅದು ಏನೆಂದರೆ be in touch with the leader of the opposition and keep him in good humour ಎನ್ನುತ್ತಾರೆ. ರಾಜಸ್ಥಾನ ಸರ್ಕಾರದಿಂದ ಸುಮಾರು ಎರಡು ಕೋಟಿ ರೂಪಾಯಿಗಳು ಏನು sanction ಆಗಿತ್ತು. ಆ 2 ಕೋಟಿ ರೂಪಾಯಿಗಳನ್ನು divert ಮಾಡಿ ಹೈದರಬಾದ್ fundಗೆ ಕಳುಹಿಸಿದ್ದಾರೆ. ನಾನು ಪ್ರಶ್ನೆ ಕೇಳುವಂಥಾದ್ದು ಏನೆಂದರೆ ಇದರ ಬಗ್ಗೆ ಒಂದು ತನಿಖೆ ಮಾಡಿಸಬೇಕು. ಇವರು ಲಾಸ್ಟ್‌ನಲ್ಲಿ ಏನು ಹೇಳುತ್ತಾರೆಂದರೆ no political....

ಅಧ್ಯಕ್ಷರು : ಮಾನ್ಯ ರೋಷನ್‌ಬೇಗ್‌ರವರೆ, ತಾವು ಈ subject ಸಂಬಂಧಪಟ್ಟಹಾಗೆ ಪ್ರತ್ಯೇಕವಾಗಿ ಪ್ರಶ್ನೆ ಕೇಳಿ. ನೀವು ಅದರ ಬಗ್ಗೆ ಏನಾದರೂ ಅಪಾದನೆ ಮಾಡುವುದಿದ್ದರೆ ಪ್ರತ್ಯೇಕವಾಗಿ ಪ್ರಶ್ನೆಯನ್ನು ಕೇಳಿ.

ಶ್ರೀ ಆರ್.ರೋಷನ್‌ಬೇಗ್ : ಮಾನ್ಯ ಅಧ್ಯಕ್ಷರೆ, ನಾನು ಅಪಾದನೆ ಮಾಡುತ್ತಿದ್ದೇನೆ.

ಅಧ್ಯಕ್ಷರು : ಈ subject ಸಂಬಂಧವಿಲ್ಲ, ನೀವು ಪ್ರಶ್ನೆ ಕೇಳಿ. ನೀವು ಈ ವಿಷಯವಾಗಿ ಪ್ರತ್ಯೇಕವಾಗಿ ಚರ್ಚೆ ಮಾಡಿ.

ಶ್ರೀ ಆರ್.ರೋಷನ್‌ಬೇಗ್ : ನಾನು ಈ ಬಗ್ಗೆ ತನಿಖೆ ಮಾಡಿ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಈಗ ಪ್ರಶ್ನೆ ಏನು ಇದೆ. ನೀವು ಇಲ್ಲಿ ಯಾವುದೋ ವಿಷಯವನ್ನು ತಂದು ಪ್ರಸ್ತಾಪ ಮಾಡುತ್ತಿದ್ದೀರಿ. ನೀವು ಮೊದಲು ನೋಟೀಸ್ ಕೊಡಿ. No, I will not allow you.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇದರಲ್ಲಿ ಅವ್ಯವಹಾರವಾಗಿದೆಯೆಂದು ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಯವರು ಇದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿ, ಆಗಿರುವ ಅವ್ಯವಹಾರ ಆಗಿರುವಂಥಾದ್ದನ್ನು ಸರಿಪಡಿಸುತ್ತೇವೆಂಬ ಮಾತನ್ನು ಹೇಳಿದರೆ ಅಯಿತಲ್ಲಾ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆಯಲ್ಲಿ ಬಂದು ಅವ್ಯವಹಾರವಾಗಿದೆ, enquiry ಮಾಡಿಯೆಂದರೆ ನೀವು ಮೊದಲೇ ಮಾಹಿತಿಯನ್ನು ಕೊಡಬೇಕಲ್ಲಾ, ನೋಟೀಸ್ ಕೊಡಬೇಕಲ್ಲಾ, ಈಗ ಪ್ರಶ್ನೋತ್ತರ ಅವಧಿಯಲ್ಲಿ ಈ ರೀತಿ ಮಾಡಿದರೆ ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಅವರು ಏನು ಈಗಲೇ ಉತ್ತರ ಕೊಡಿಯೆಂದು ಡಿಮಾಂಡ್ ಮಾಡುತ್ತಿಲ್ಲ. ಈ ರೀತಿ ಬಂದಿದೆ, ಇದು ನಿಮ್ಮ ಇಲಾಖೆಗೆ ಸಂಬಂಧಪಟ್ಟಿದ್ದು, ಇದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇವೆ .ಅದರ ಬಗ್ಗೆ enquiry ಮಾಡಿಯೆಂದು ಹೇಳುತ್ತಿದ್ದೇವೆ. ಅದನ್ನು enquiry ಮಾಡುವುದಕ್ಕೆ ಮಂತ್ರಿಗಳಿಗೆ ಕಷ್ಟ ಏನು ಇದೆ? ಮಾಡಲಿ ಬಿಡಿ.

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರೆ, ಅವರು ಅದರ details ಎಲ್ಲವನ್ನು ಕೊಡದೇ.. ..

ಶ್ರೀ ಸಿದ್ದರಾಮಯ್ಯ : details ಇಲ್ಲ.

ಅಧ್ಯಕ್ಷರು : ಹಾಗಾದರೆ ಯಾವುದು ಅವ್ಯವಹಾರವಾಗಿದೆ? ಯಾರು ಅವ್ಯವಹಾರ ಮಾಡಿದ್ದಾರೆ? ಯಾರು ವ್ಯವಹಾರ ಮಾಡಿದ್ದಾರೆ? ಏನು agreement ಆಗಿದೆ? ಅವೆಲ್ಲಾ details ಅನ್ನು ಕೊಡಿ. ಸುಮ್ಮನೆ ಹಾಗೆ enquiry ಮಾಡಿ ಎಂದು ಬಿಟ್ಟರೆ ಹೇಗೆ?

ಶ್ರೀ ಸಿದ್ದರಾಮಯ್ಯ : ಆ ಡಿಟೈಲ್ಸ್ ಕೊಡಿ, ಎನ್‌ಕ್ವಾಯರಿ ಮಾಡಲಿ.

ಅಧ್ಯಕ್ಷರು : ನೀವು ಡಿಟೈಲ್ಸ್ ಕೊಡಿ, ಈಗ ಸಡನ್ ಆಗಿ ಪ್ರಶ್ನೋತ್ತರ ಕಾಲದಲ್ಲಿ ಈ ರೀತಿ ಮಾಡುವುದು.

ಶ್ರೀ ಆರ್.ರೋಷನ್‌ಬೇಗ್ : ಮಾನ್ಯ ಅಧ್ಯಕ್ಷರೆ, ನೀವು ಈ ರೀತಿ irritate ಆಗಬಾರದು.

ಅಧ್ಯಕ್ಷರು : irritate ಪ್ರಶ್ನೆಯಲ್ಲ.

ಶ್ರೀ ಆರ್.ರೋಷನ್‌ಬೇಗ್ : ಇದು ಬಹಳ important subject.

ಅಧ್ಯಕ್ಷರು : ಇದರ ಬಗ್ಗೆ ಪ್ರತ್ಯೇಕವಾಗಿ ನೋಟೀಸ್ ಕೊಡಿ, ಅದರ ಬಗ್ಗೆ discussion ಮಾಡಿ

ಶ್ರೀ ಆರ್.ರೋಷನ್‌ಬೇಗ್ : ನಾವು ಇದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇವೆ. ರಾಜಸ್ಥಾನದಲ್ಲಿ ಈ ರೀತಿಯಾಗಿದೆ. ಇಲ್ಲಿ ನೀವು ಹುಷಾರಾಗಿ ಇರಿಯೆಂದು ಹೇಳುತ್ತಿದ್ದೇವೆ.

ಅಧ್ಯಕ್ಷರು : ರಾಜಸ್ಥಾನದಲ್ಲಿ ಆಗಿದೆ, ಇಲ್ಲಿ ಆಗಿದೆಯೆಂಬುದಕ್ಕೆ decision ತೆಗೆದುಕೊಳ್ಳಬೇಕಲ್ಲಾ.

ಶ್ರೀ ಆರ್.ರೋಷನ್‌ಬೇಗ್ : ಆಗಿದೆ, ನಾನು ಅದನ್ನು ಓದಿ ಹೇಳುತ್ತೇನೆ, ಈಗ ಗೊತ್ತಾಗುತ್ತದೆ.

ಅಧ್ಯಕ್ಷರು : ಮಾನ್ಯ ಕೃಷ್ಣಪ್ಪನವರೆ, ಪ್ರಶ್ನೆ ಕೇಳಿ.

ಶ್ರೀ ಬಿ.ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಮಾನ್ಯ ಬಾಲಕೃಷ್ಣರವರು ಕೇಳಿದ ಪ್ರಶ್ನೆಗೆ ಸಂಬಂಧಪಟ್ಟಂತೆ ನಾವು 517 ಆಂಬುಲೆನ್ಸ್ ಅನ್ನು 2010ನೇ ಮಾರ್ಚ್ ತಿಂಗಳಿಗೆ ಕೊಡುತ್ತೇವೆಂದು ಹೇಳಿದ್ದೇವೆ. ಈ ರಾಜ್ಯದಲ್ಲಿ ಎಲ್ಲಾ ಕಡೆಗಳಿಗೂ 517 ಆಂಬುಲೆನ್ಸ್ ಅನ್ನು 2009ನೇ ನವೆಂಬರ್ ತಿಂಗಳಿಗೆ ಸಂಪೂರ್ಣವಾಗಿ ತಲುಪುವಂತೆ ಒಬ್ಬ ಆರೋಗ್ಯ ಮಂತ್ರಿಯಾಗಿ ಮಾಡಿಕೊಡುತ್ತೇನೆ. ಇನ್ನು ಮಾನ್ಯ ರೋಷನ್‌ಬೇಗ್‌ರವರು ಕೇಳಿದಂಥ ಪ್ರಶ್ನೆಗೆ ಸಂಬಂಧಪಟ್ಟಂತೆ ಅವರು ನನ್ನ ಗಮನಕ್ಕೆ ಏನು ವಿಷಯವನ್ನು ತಂದಿದ್ದಾರೆ. ಅದರ ಬಗ್ಗೆ ನನಗೆ ಸೂಕ್ತವಾದಂಥ ಮಾಹಿತಿ ಇಲ್ಲ. ಅದರ ಬಗ್ಗೆ ನಾನು ಮಾತನಾಡಿ ಯಾವ ರೀತಿಯಲ್ಲಿ ತಮಗೆ ಸೂಕ್ತವಾದ ಉತ್ತರವನ್ನು ಕೊಡಬೇಕೊ ಅದನ್ನು ಕೊಡುತ್ತೇನೆ.

ಶ್ರೀ ಯು.ಟಿ.ಖಾದರ್ : ಮಾನ್ಯ ಸಚಿವರು ಆರೋಗ್ಯ ಕವಚ ಯೋಜನೆಯಡಿ ನಮ್ಮ ಕ್ಷೇತ್ರಕ್ಕೆ ಒಂದು ಆಂಬುಲೆನ್ಸ್ ಎನ್ನು ಕೊಟ್ಟಿದ್ದಾರೆ. ಅದರೆ ಸಮಸ್ಯೆ ಏನೆಂದರೆ, ಆ ವಾಹನದ ಚಾಲಕರು ಸ್ಥಳೀಯರಲ್ಲ, ಹೊರಗಿನವರು. ಯಾವ ಗ್ರಾಮ ಎಲ್ಲಿದೆ ಎಂದು ಅವರಿಗೆ ಗೊತ್ತಿರುವುದಿಲ್ಲ. ರೋಗಿಗಳನ್ನು 10–15 ನಿಮಿಷಗಳಲ್ಲಿ ಆಸ್ಪತ್ರೆಗೆ ಮುಟ್ಟಿಸಬೇಕಾಗಿರುವ ಕಾರಣ, ನನ್ನ ಕಳಕಳಿ ಏನೆಂಧರೆ, ಇಂಥ ಆಂಬುಲೆನ್ಸ್‌ಗಳಲ್ಲಿ ಸ್ಥಳೀಯರನ್ನು ವಾಹನ ಚಾಲಕರನ್ನಾಗಿ ಮಾಡಿದರೆ ಬಹಳಷ್ಟು ಪ್ರಯೋಜನವಾಗುತ್ತದೆ. ಏಕೆಂದರೆ ಅವರಿಗೆ ಹಳ್ಳಿಗಳು ಗೊತ್ತಿರುತ್ತವೆ. ಈ ಒಂದು ಕ್ರಮವನ್ನು ಮಾನ್ಯ ಸಚಿವರು ಮಾಡಬೇಕು ಎಂದು ನಾನು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ.ನಾರಾಯಣಸ್ವಾಮಿ : ತಾಲ್ಲೂಕು ಲೆವೆಲ್‌ನಲ್ಲಿರತಕ್ಕಂಥ ಆಂಬುಲೆನ್ಸ್‌ಗೆ ನಾವು alternate ಕೊಡುತ್ತೇವೆ ಎನ್ನುವ ಮಾತನ್ನು ಮಾನ್ಯ ಆರೋಗ್ಯ ಸಚಿವರು ಹೇಳಿದರು. ಇಡೀ ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಆಂಬುಲೆನ್ಸ್‌ಗಳು ಕೆಟ್ಟು ಬಿದ್ದಿವೆ, ಡ್ರೈವರ್ಸ್ ಕೊರತೆ ಇದೆ ಎಂದು ಅವರು ಒಂದು ತನಿಖೆ ಮಾಡಲಿ. ಕೆಲವೊಮ್ಮೆ ಆಂಬುಲೆನ್ಸ್ ಇದ್ದರೂ, ಡೀಸೆಲ್ ಇಲ್ಲ ಎಂದು

C-1054-17

ಹೇಳುತ್ತಾರೆ. ಯಾವ patient ಹೋಗುತ್ತಾರೋ, ಅವರು ದುಡ್ಡು ಕೊಟ್ಟರೆ ಮಾತ್ರ ಆಂಬುಲೆನ್ಸ್ ಕೆಲಸ ಮಾಡುತ್ತದೆ. ಅದರ ಬಗ್ಗೆಯೂ ತನಿಖೆ ಮಾಡಿ ಸೂಕ್ತ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಅಶೋಕ್ ಕಾಟ್ಟೆ : 108 ಆಂಬುಲೆನ್ಸ್‌ಗಳು, ತಾಲ್ಲೂಕು ಲೆವೆಲ್‌ನಲ್ಲಿ ಬರೀ 30 ಕಿ.ಮೀ. ಎಂದು ಆರೋಗ್ಯ ಸಚಿವರು ಹೇಳಿದರು. ತುಂಬ emergency ಇದ್ದಾಗ, at least district headquarters ವರೆಗೆ ಹೋಗಲು ಅನುಕೂಲ ಮಾಡಿಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ.

ಶ್ರೀ ಬಿ.ಶ್ರೀರಾಮುಲು : 517 ಆಂಬುಲೆನ್ಸ್‌ಗಳು ಈ ರಾಜ್ಯಕ್ಕೆ ಬಂದ ನಂತರ ಎಲ್ಲರಿಗೂ ಅನುಕೂಲವಾಗುತ್ತದೆ. ಈಗ ಸದ್ಯಕ್ಕೆ 1,10,000 ಜನಸಂಖ್ಯೆಗೆ ಒಂದು ಆಂಬುಲೆನ್ಸ್ ಎಂದು ಮಾಡಿದ್ದೇವೆ. ಮುಂಬರುವಂಥ ದಿನಗಳಲ್ಲಿ 50,000 ಜನಸಂಖ್ಯೆಗೆ ಒಂದು ಎಂದು ಮಾಡಿದ ನಂತರ ಎಲ್ಲರಿಗೂ ಅನುಕೂಲವಾಗುತ್ತದೆ. ಸಾಕಷ್ಟು ಆಂಬುಲೆನ್ಸ್‌ಗಳು ಇನ್ನೂ ಬರಬೇಕಾಗಿದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ನೀವು ಹೇಳುತ್ತಿರುವಂತೆ ಜನಸಂಖ್ಯೆ ಸರಿ ಇದೆ. ಆದರೆ ಈಗ ನಿಮ್ಮ ಆಂಬುಲೆನ್ಸ್‌ಗಳು ತಾಲ್ಲೂಕು headquaterಗಳಲ್ಲಿ ಹೋಗುತ್ತವೆ. ಅಕಸ್ಮಾತ್ ಸೀರಿಯಸ್ ಆದಾಗ, ಅಲ್ಲಿಂದ ಆಚೆಗೆ ಹೋಗಬೇಕು ಎಂದಾಗ, ತಾಲ್ಲೂಕು headquarterಗಳಲ್ಲಿ operate ಮಾಡುವವರು ಯಾರೂ ಇಲ್ಲ ಎನ್ನುವಂಥ ಪರಿಸ್ಥಿತಿ ಬಂದಾಗ, ಆಂಬುಲೆನ್ಸ್‌ನಲ್ಲಿ ಜಿಲ್ಲಾ headquarterಗೆ ಹೋಗಲು ಅವಕಾಶ ಮಾಡಿಕೊಡಿ ಎಂದು ಅವರು ಪ್ರಶ್ನೆ ಕೇಳುತ್ತಿದ್ದಾರೆ.

ಶ್ರೀ ಅಶೋಕ್ ಕಾಟ್ಟೆ : Emergencyಗೆ ಮಾತ್ರ ಎಂದು ಕೇಳುತ್ತಿದ್ದೇವೆ.

ಶ್ರೀ ಬಿ.ಶ್ರೀರಾಮುಲು : ಈಗ ಸದ್ಯಕ್ಕೆ 208 ಆಂಬುಲೆನ್ಸ್‌ಗಳು ನಡೆಯುತ್ತಿವೆ. 517 ಆಂಬುಲೆನ್ಸ್‌ಗಳು ಬಂದರೆ ಎಲ್ಲ ತಾಲ್ಲೂಕು headquarter ಆಸ್ಪತ್ರೆಗಳಿಗೆ ಹೋಗಲು ಅನುಕೂಲವಾಗುತ್ತದೆ. ನವೆಂಬರ್ ಒಳಗೆ ಈ 517 ಆಂಬುಲೆನ್ಸ್‌ಗಳನ್ನು ಎಲ್ಲರಿಗೂ ಕೊಡುತ್ತೇವೆ.

ಶ್ರೀ ಅಶೋಕ್ ಕಾಟ್ಟೆ : ನಾವು ಮಾನ್ಯ ಆರೋಗ್ಯ ಸಚಿವರಿಗೆ ಕೇಳುವುದೇನೆಂದರೆ, ಬಹಳ emergency ಇದ್ದಾಗ district headquarterಗಳಿಗೆ ಕಳುಹಿಸಿಕೊಡಲು ಅಧಿಕಾರಿಗಳಿಗೆ permissions ಕೊಡುವಿರಾ ಎಂದು ಕೇಳುತ್ತಿದ್ದೇವೆ.

ಡಾ: ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೇ, ಆರೋಗ್ಯ ಕವಚ ಎನ್ನುವುದು ಒಳ್ಳೆಯ ಕಾರ್ಯಕ್ರಮ. ಬೇರೆಬೇರೆ ರಾಜ್ಯಗಳಲ್ಲೂ ಇಂಥ ಯೋಜನೆಗಳಿವೆ. Well equipped ambulance, highly technically sophisticated ambulance ಅನ್ನು ತುರ್ತು ಚಿಕಿತ್ಸೆಗೆ ಅಂದರೆ for a distress

management ಗಾಗಿ ಇಡಲಾಗುತ್ತದೆ. ಹಾವು ಕಡಿಯಿತು, ಚೇಳು ಕಡಿಯಿತು ಇಂಥ purposeಗಳಿಗೆ ಆಂಬುಲೆನ್ಸ್ ಅನ್ನು ಇಡುವಂಥಾದ್ದಲ್ಲ. Trauma, head injury, road accidents, heart attack, any haemorrhage ಈ ರೀತಿಯ ಅತ್ಯಂತ ಕಠಿಣ ಆರೋಗ್ಯ ಸಮಸ್ಯೆಗಳನ್ನು ನಿವಾರಣೆ ಮಾಡಲಿಕ್ಕೆ ಇರತಕ್ಕಂಥ ಒಂದು ಯೋಜನೆ ಇದು. ಆರೋಗ್ಯ ಇಲಾಖೆ ಒಂದು ಪ್ರಮುಖವಾದಂಥ ಖಾತೆಯಾಗಿದೆ. ಶ್ರೀರಾಮುಲುರವರು ಒಂದು ವರ್ಷಕ್ಕಿಂತ ಹೆಚ್ಚು ಕಾಲದಿಂದ ಆರೋಗ್ಯ ಸಚಿವರಾಗಿದ್ದಾರೆ.

ಅಧ್ಯಕ್ಷರು : ಮಹದೇವಪ್ಪನವರೇ, ಇದು ಪ್ರಶ್ನೋತ್ತರ ಕಾಲ. ನೇರವಾಗಿ ಪ್ರಶ್ನೆ ಕೇಳಿ.

ಡಾ: ಹೆಚ್.ಸಿ.ಮಹದೇವಪ್ಪ : ನಾನು ಅವರಿಗೆ ಮುಜುಗರ ಮಾಡುವುದಿಲ್ಲ. ಆ ಕಡೆ ಡಾ: ಆಚಾರ್‌ರವರು ಇದ್ದಾರೆ, ಡಾ: ಬಗಲಿಯವರು ಇದ್ದಾರೆ. ಈ ಇಲಾಖೆಯನ್ನು ಮಾಡುವಾಗ ಸಚಿವರು ಅವರ ಸಲಹೆಯನ್ನು ಪಡೆದುಕೊಳ್ಳಬೇಕು. ಈಗ ಸುಮಾರು 1,200 ಜನ ವೈದ್ಯರ ಹುದ್ದೆಗಳು ಖಾಲಿ ಇವೆ, 15,000 ಕ್ಕೂ ಹೆಚ್ಚು ಅರೆ ವೈದ್ಯ ಸಿಬ್ಬಂದಿಗಳ ಕೊರತೆ ಇದೆ. ಹೋಗಿರುವಾಗ, ಸಿಬ್ಬಂದಿಗಳಿಲ್ಲದೇ, ಏನೂ ಸೇವೆಯೇ ಇಲ್ಲದೇ, ಈ ಎಲ್ಲ instrumentಗಳನ್ನು ತೆಗೆದುಕೊಂಡು ಬಂದರೆ ಕೆಲಸ ಮಾಡುವುದು ಹೇಗೆ? ಅವರು ಏನು ಮಾಡಬೇಕು ಎಂದರೆ, ಮೊದಲು ಸಿಬ್ಬಂದಿಗಳ ಕೊರತೆಯನ್ನು ತುಂಬದೇ ಕೇವಲ ವೆಹಿಕಲ್‌ಗಳನ್ನು ತೆಗೆದುಕೊಂಡು ಬಂದು ನಿಲ್ಲಿಸಿಕೊಂಡರೆ ಏನು ಪ್ರಯೋಜನ? ಅದಕ್ಕಾಗಿ, ದಯವಿಟ್ಟು ನಾನು ಮಂತ್ರಿಗಳಿಗೆ ಏನು ಹೇಳುತ್ತೇನೆ ಎಂದರೆ, ಅವರು ಮೀಟಿಂಗ್ ಮಾಡಬೇಕು, ರಿವ್ಯೂ ಮಾಡಬೇಕು, ಜಿಲ್ಲೆಗಳಿಗೆ ಹೋಗಬೇಕು. ಅದನ್ನು ಮಾಡಿದರೆ effective ಆಗಿ ಕೆಲಸ ಮಾಡಬಹುದು. ಇಲ್ಲಿ ನಾವು ಅವರಿಗೆ ಮುಜುಗರ ಮಾಡುವುದಕ್ಕೆ ಹೋಗುತ್ತಿಲ್ಲ. ಅಲ್ಲಿ ನಮಗೆ ಏನು ಅಂಕಿಅಂಶಗಳನ್ನು ಕೊಟ್ಟಿದ್ದಾರೆ, ಅದು ಬರೀ ತಪ್ಪುತಪ್ಪು ಕೊಟ್ಟಿರುತ್ತಾರೆ. ಅದರಿಂದ ನಿಮಗೇ ಮುಜುಗರವಾಗುತ್ತದೆ. ನೀವು ಅಧಿಕಾರಿಗಳೊಂದಿಗೆ ಚರ್ಚೆ ಮಾಡದೇ ಹೋದರೆ, ground reality ನಿಮಗೆ ಗೊತ್ತಾಗಬೇಕು ಎಂದರೆ ನೀವು ರಿವ್ಯೂ ಮಾಡಬೇಕು. ನೀವು ಅದನ್ನು ಮಾಡಿ, ಅಧಿಕಾರಿಗಳೊಂದಿಗೆ ಚರ್ಚೆ ಮಾಡಿದಾಗ ತಪ್ಪುಗಳನ್ನು ಸರಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ದಯವಿಟ್ಟು ಅದನ್ನು ಮಾಡಿ. ನಿಮ್ಮ ಬಗ್ಗೆ ನಾವು ಆಕ್ಷೇಪಣೆಯನ್ನೇನು ಮಾಡುತ್ತಿಲ್ಲ. ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು ಎನ್ನುವುದೇ ನಮ್ಮ ಉದ್ದೇಶ.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಮಾನ್ಯ ಮಹದೇವಪ್ಪನವರು ಕೇಳಿದಂಥ ಪ್ರಶ್ನೆಗೆ, ರಾಜ್ಯದಲ್ಲಿ 1,288 ಡಾಕ್ಟರ್‌ಗಳ ಕೊರತೆ ಇದೆ, Specialistಗಳ ಸುಮಾರು 970 ಹುದ್ದೆಗಳು ವೇಕೆಂಟ್ ಇವೆ. ಇಲ್ಲ ಸೇರಿ ಸುಮಾರು 17,000

ಪೋಸ್ಟ್‌ಗಳು ವೇಕೆಂಟ್ ಇವೆ. ಅಧಿಕಾರಿಗಳ ಜೊತೆ ಸಭೆ ನಡೆಸಬೇಕು, ಅವರಿಂದ ಮಾಹಿತಿ ತೆಗೆದುಕೊಳ್ಳಬೇಕು ಎಂದು ತಾವು ಏನು ಸಲಹೆ ಕೊಟ್ಟಿದ್ದೀರಿ, ಅದರ ಬಗ್ಗೆ ನಾನು ವಿಚಾರ ಮಾಡುತ್ತೇನೆ. ಬಹಳಷ್ಟು ಪೋಸ್ಟ್‌ಗಳು ವೇಕೆಂಟ್ ಇದ್ದ ಕಾರಣ, ತಮಗೆ ಗೊತ್ತಿರುವ ಹಾಗೆ ಇತ್ತೀಚೆಗೆ 815 ಜನ ಡಾಕ್ಟರ್‌ಗಳನ್ನು ತೆಗೆದುಕೊಂಡರೂ, ಅವರ ಪೈಕಿ 615 ಮಂದಿ ಡಾಕ್ಟರ್‌ಗಳು ಮಾತ್ರ ಬಂದು ಕೆಲಸಕ್ಕೆ join ಆಗಿದ್ದಾರೆ, ಕೆಲವರು join ಆಗಿಲ್ಲ. 5,300 paramedical postಗಳನ್ನು ಇನ್ನು ಎರಡು ತಿಂಗಳಲ್ಲಿ ಭರ್ತಿ ಮಾಡುತ್ತೇವೆ. ಇನ್ನು ಯಾವ ರೀತಿಯಲ್ಲಿ ತಾವು ಸಲಹೆಗಳನ್ನು ಕೊಡುತ್ತೀರೋ, ಅವುಗಳನ್ನು ನಾನು ಸಂಪೂರ್ಣವಾಗಿ ತೆಗೆದುಕೊಂಡು, ತಮಗೆ ಸಮಾಧಾನ ಮತ್ತು ತೃಪ್ತಿ ತರುವಂಥ ಕೆಲಸವನ್ನು ನಾನು ಮಾಡಿಕೊಡುತ್ತೇನೆ.

ಶ್ರೀ ಎಂ.ಮಂಜು : Contract basis appointmentಅನ್ನು ತಾವು ನಿಲ್ಲಿಸಿದ್ದೀರಿ. ದಯವಿಟ್ಟು contract basis ಮೇಲೆ appointment ಮಾಡಿಕೊಳ್ಳಬೇಕು.

ಶ್ರೀ ಅಶೋಕ್ ಕಾಟ್ಟೆ : ದಯವಿಟ್ಟು ಡಾಕ್ಟರ್‌ಗಳ ಸಂಬಳವನ್ನಾದರೂ ಜಾಸ್ತಿ ಮಾಡಿ. ಇಲ್ಲದಿದ್ದರೆ ಡಾಕ್ಟರ್‌ಗಳ್ಯಾರೂ ಸರ್ಕಾರಿ ಆಸ್ಪತ್ರೆಗಳಿಗೆ ಬರುವುದಿಲ್ಲ.

ಅಧ್ಯಕ್ಷರು : ಮಾನ್ಯ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಹೀಗೆ ಕೇಳುತ್ತಾ ಹೋದರೆ ಆರೋಗ್ಯ ಇಲಾಖೆಯ ಬಗ್ಗೆಯೇ ಚರ್ಚೆ ಪ್ರಾರಂಭವಾಗುತ್ತದೆ. ಬಜೆಟ್ ಮೇಲೆ ಚರ್ಚೆ ಮಾಡುವಾಗ, ಆರೋಗ್ಯ ಇಲಾಖೆಯ ವಿಷಯ ಬಂದಾಗ ಆಗ ಚರ್ಚೆ ಮಾಡಿ. ಆರೋಗ್ಯ ಕವಚ ಯೋಜನೆ ಹೋಗಿ, ಈಗ ಮೂರ್ತಿ ಆರೋಗ್ಯ ಇಲಾಖೆಯ ಬಗ್ಗೆಯೇ ಚರ್ಚೆ ಚಾಲೂ ಆಯಿತು. ಈಗ ಮುಂದಿನ ಪ್ರಶ್ನೆ, ಕೃಷ್ಣಪ್ಪನವರು ಪ್ರಶ್ನೆ ಕೇಳಬೇಕು.

ಕರ್ನಾಟಕ ವಿಧಾನ ಸಭೆ

7(32) ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ)

ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ. ತುಮಕೂರು ಜಿಲ್ಲೆ ತುರುವೇಕೆರೆ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ ಅನುದಾನವನ್ನು ಬಿಡುಗಡೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಿಡುಗಡೆ ಮಾಡಲಾದ ಅನುದಾನ ಎಷ್ಟು?

ಹೌದು.

ಪ್ರಸಕ್ತ ಸಾಲಿನಲ್ಲಿ ರೂ.16.49 ಲಕ್ಷಗಳ ಅನುದಾನ ಒದಗಿಸಲಾಗಿದೆ. ಇದುವರೆವಿಗೂ ಈ ಕಾಮಗಾರಿಗೆ ರೂ.95.73 ಲಕ್ಷಗಳು ವೆಚ್ಚವಾಗಿದೆ.

ಆ. ಆಸ್ಪತ್ರೆ ಕಟ್ಟಡದ ಕಾಮಗಾರಿಯನ್ನು ಕೈಗೊಂಡ ಗುತ್ತಿಗೆದಾರರ ಹೆಸರು ಮತ್ತು ವಿಳಾಸವನ್ನು ನೀಡುವುದು.

ಮೆ: ನಾಗಾರ್ಜುನ ಕನ್ಸ್‌ಟ್ರಕ್ಷನ್ ಕಂಪನಿ ಲಿಮಿಟೆಡ್, ನಂ.301, ಬಟಾವಿಯಾ ಛೇಂಬರ್ಸ್, ಕುಮಾರ ಕೃಪ ರಸ್ತೆ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು.

ಇ. ಮೂಲ ಗುತ್ತಿಗೆದಾರರು ಉಪಗುತ್ತಿಗೆ ನೀಡಿರುವುದರಿಂದ ಕಳಪೆ ಕಾಮಗಾರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು:

ಇಲ್ಲ.

ಉದ್ಭವಿಸುವುದಿಲ್ಲ.

ಶ್ರೀ ಎಂ.ಟಿ.ಕೃಷ್ಣಪ್ಪ : ಉತ್ತರ ಬಂದಿದೆ. ಆದರೆ ನನ್ನ ಪ್ರಶ್ನೆಗೂ, ಇವರ ಉತ್ತರಕ್ಕೂ ಅಸಂಬದ್ಧವಾದಂಥ ವಿಚಾರಧಾರೆ ಇದ್ದಂತಿದೆ. ಏತಕ್ಕೆ ನಾನು ಇದನ್ನು ಹೇಳುವುದಕ್ಕೆ ಬಯಸುತ್ತೇನೆ ಎಂದರೆ, ತುರುವೇಕರೆ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಗೆ ಮೇಲ್ದರ್ಜೆಗೇರಿಸಿ ಸುಮಾರು ಎರಡೂವರೆ ವರ್ಷಗಳಾಗಿವೆ. ಆಸ್ಪತ್ರೆ ಕಟ್ಟಡದ ಕಾಮಗಾರಿಯನ್ನು ಕೊಟ್ಟಿರತಕ್ಕಂಥ ನಾಗಾರ್ಜುನ ಕನ್ಸ್‌ಟ್ರಕ್ಷನ್ ಕಂಪನಿಯವರು, ಇದನ್ನು package ಆಧಾರದಲ್ಲಿ ತೆಗೆದುಕೊಂಡಿದ್ದು, ಬೇರೆಯವರಿಗೆ ಅಂದರೆ ಸೊಮಣ್ಣ ಎನ್ನುವವರಿಗೆ sub let ಮಾಡಿದ್ದಾರೆ. ಅವರು ಮತ್ತೊಬ್ಬರಿಗೆ sub let ಮಾಡಿದ್ದಾರೆ. ಹೀಗಾಗಿ ಅಲ್ಲಿ ಕಳಪೆ ಕಾಮಗಾರಿಯಾಗಿದ್ದು, ಸುಮಾರು ಒಂದೂವರೆ ವರ್ಷದಿಂದ ಆಸ್ಪತ್ರೆ ಕಟ್ಟಡದ ಕಾಮಗಾರಿ ನಿಂತು ಹೋಗಿದೆ. ಆ ತಾಲ್ಲೂಕಿನ ಜನ 2–3 ಸಾರಿ ಇದರ ಬಗ್ಗೆ ಪ್ರತಿಭಟನೆಯನ್ನು ಮಾಡಿದ್ದಾರೆ. 2008ನೇ ಇಸವಿಗೆ ಇದು ಮುಗಿಯಬೇಕಾಗಿತ್ತು, ಇನ್ನೂ ಮುಗಿದಿಲ್ಲ. ಕಾಮಗಾರಿಯನ್ನು ಯಾರಿಗೋ ಒಬ್ಬರಿಗೆ package systemನಲ್ಲಿ ಕೊಟ್ಟು, ಅವರು ಮತ್ತೆ 2–3 ಜನರಿಗೆ sub let ಕೊಡುವ system ಆದರೆ ಖಂಡಿತವಾಗಿ ಒಳ್ಳೆಯ ಕೆಲಸವಾಗುವುದಿಲ್ಲ. ಅಲ್ಲಿ 100% ಕಳಪೆ ಕಾಮಗಾರಿಯಾಗಿದೆ. ಇದರ ಬಗ್ಗೆ Chief Engineer ರವರು ಬಂದು ಆಗಲೇ report ಅನ್ನು ಮಾಡಿದ್ದಾರೆ. ಅವರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಆದರೆ ಇವರು ಉತ್ತರದಲ್ಲಿ ಸಂಬಂಧವಿಲ್ಲದ ವಿಚಾರವಾಗಿದೆ. ಸೂಕ್ತ enquity ಮಾಡಿ, repair ಮಾಡಿ, ಒಳ್ಳೆಯ building ಮಾಡಿ ಎಂದು ನಾನು ಈಗಾಗಲೇ ಎರಡು ಪತ್ರಗಳನ್ನು ಬರೆದಿದ್ದೇನೆ. ಆದರೆ ಇದುವರೆಗೂ ಸಹ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಅಲ್ಲಿ ಬಹಳಷ್ಟು ಸಮಸ್ಯೆ ಇದೆ. ದಯಮಾಡಿ ಅದರ ಬಗ್ಗೆ ಸೂಕ್ತವಾದಂಥ ನಿಲುವು ತೆಗೆದುಕೊಳ್ಳಬೇಕು. Sub ler ಕೊಡುವ system ಅನ್ನು ಪೂರ್ಣವಾಗಿ ತೆಗೆದು ಹಾಕಬೇಕು. ಬೆಂಗಳೂರಿನವರ್ಯಾರೋ ತೆಗೆದುಕೊಂಡು, ಅವರು ಅದನ್ನು ತುಮಕೂರಿನವರಿಗೆ ಕೊಟ್ಟು, ಅವರು ತುರುವೇಕೆರೆಯವರಿಗೆ ಕೊಟ್ಟು ಮಾಡುವುದು ಬರೀ

ಸ್ಪರ್ಧಾತ್ಮಕ ಧಾರಣೆ ದೊರೆಯಲು ಮಾರುಕಟ್ಟೆ ಪ್ರಾಂಗಣಗಳಲ್ಲಿ ಟೆಂಡರ್, ಬಹಿರಂಗ ಹರಾಜು ಮತ್ತು ಪರಸ್ಪರ ಒಪ್ಪಂದಗಳ ಮೂಲಕ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಅವಕಾಶವಿದೆ.

ಪ್ರಸ್ತುತ ಇರುವ ಮಾರುಕಟ್ಟೆಗಳ ಜೊತೆಗೆ ಖಾಸಗಿಯವರು ಮಾರುಕಟ್ಟೆಗಳ ಜೊತೆಗೆ ಖಾಸಗಿಯವರು ಮಾರುಕಟ್ಟೆಗಳ ಸ್ಥಾಪನೆ, ನೇರ ಖರೀದಿ ಕೇಂದ್ರ ಸ್ಥಾಪನೆ, ಒಪ್ಪಂದ ಕೃಷಿ, ಸ್ವಾಟ್ ಎಕ್ಸ್‌ಚೇಂಜ್‌ಗಳ ಸ್ಥಾಪನೆ, ಒಂದು ಮಾರುಕಟ್ಟೆಯಲ್ಲಿ ವರ್ತಕರ ಲೈಸೆನ್ಸ್ ಹೊಂದಿರುವವರು ರಾಜ್ಯದ ಇತರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ವ್ಯವಹರಿಸಲು ಲೈಸೆನ್ಸ್ ಪಡೆಯಲು ಕಾಯ್ದೆಯಲ್ಲಿ ಅವಕಾಶವಿದೆ. ಇದರಿಂದ ರೈತರಿಗೆ ಸ್ಪರ್ಧಾತ್ಮಕ ಧಾರಣೆ ದೊರೆಯುವ ಅವಕಾಶಗಳು ಹೆಚ್ಚಿರುತ್ತದೆ.

ಶ್ರೀ ಟಿ.ಬಿ.ಜಯಚಂದ್ರ: ಇದೊಂದು ಬಹಳ ಪ್ರಾಮುಖ್ಯವಾದ ಪ್ರಶ್ನೆಯಾಗಿದೆ. ತಾವು ಹೇಗೆ ಉತ್ತರವನ್ನು ಕೊಟ್ಟಿದ್ದೀರಿ ಎನ್ನುವುದನ್ನು ನಾನು ನೋಡಿದ್ದೇನೆ. ನಾನು ಮೂಲತ: ಒಂದು ಮಾತು ಹೇಳಬೇಕು. ತಾವೂ ಕೂಡ ರೈತ ಕುಟುಂಬದಿಂದ ಬಂದಿರುವವರು. ಬೆಂಗಳೂರಿನ ಯಶವಂತಪುರ ಬಿಟ್ಟರೆ ದೊಡ್ಡ ಮಾರುಕಟ್ಟೆ ನಿಮ್ಮ ಊರಿನಲ್ಲಿದೆ. ನಿಮಗೆ ಗೊತ್ತಿಲ್ಲವೆನ್ನುವ ಮಾತನ್ನು ಹೇಳುತ್ತಿಲ್ಲ. ಆದರೆ, ಸತ್ಯವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ರೈತರಿಂದ ದಲ್ಲಾಳಿಗಳು 4% commission ಅನ್ನು ಚೀಟಿಗಳಲ್ಲಿ ವಸೂಲಿ ಮಾಡುವುದಿದೆ. ಅದು ರಾಜ್ಯ ವ್ಯಾಪ್ತಿ ಇದೆ. ಆ ಬಗ್ಗೆ

ಕಾನೂನಿನ ನಿಷೇಧವಿದ್ದರೂ ಅದನ್ನು ತಪ್ಪಿಸಲಿಕ್ಕೆ ಸಾಧ್ಯವಾಗಿಲ್ಲ. ಕೆಲವು ನಮ್ಮ ಗಮನಕ್ಕೆ ಬಂದಿದೆ ಎನ್ನುವುದನ್ನು ತಾವೇ ಒಪ್ಪಿಕೊಂಡಿದ್ದೀರಿ ಪ್ರರಕರಣಗಳನ್ನು ಆಧರಿಸಿ ನಿಯಮಾನುಸಾರ ಕಾಲಕಾಲಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಉತ್ತರಿಸಿದ್ದೀರಿ. ಏನು ಕ್ರಮ ಕೈಗೊಂಡಿದ್ದೀರಿ ಎಂದು ನೇರವಾಗಿ ಪ್ರಶ್ನೆ ಕೇಳುತ್ತೇನೆ. ತಾಲ್ಲೂಕಿಗೆ ಒಂದು ಮಾರುಕಟ್ಟೆ ಇರುತ್ತದೆ ಅಥವಾ ಎರಡು ತಾಲ್ಲೂಕುಗಳಿಗೆ ಒಂದು ಮಾರುಕಟ್ಟೆ ಇರುತ್ತದೆ. Licence ಇರುತ್ತದೆ, ಅವರಿಗೆ freedom ಇದ್ದರೂ ಹೆಚ್ಚು ಜನ ಖರೀದಿದಾರರು ಬರುವುದಕ್ಕೆ ಆಗುವುದಿಲ್ಲ. ಅದಕ್ಕೆ ಕಾರಣವೇನೆಂದರೆ ಸ್ಥಳೀಯವಾಗಿರುವ ಖರೀದಿದಾರರು ಅಲ್ಲಿಗೆ ಬೇರೆಯವರು ಬರುವುದಕ್ಕೆ ಬಿಡುವುದಿಲ್ಲ. ಅಂಥ ಸಂದರ್ಭದಲ್ಲಿ ನಿಮ್ಮ ಕಾರ್ಯದರ್ಶಿಯವರು ಏನು ಕೆಲಸ ಮಾಡುತ್ತಾರೆ? ನಾವು ಅವರನ್ನು ಕರೆದಿದ್ದೇವೆ, ಇವರನ್ನು ಕರೆದಿದ್ದೇವೆಂದು ಅವರು ಹೇಳುತ್ತಾರೆ. ಆದರೆ, ಖಂಡಿತವಾಗಿಯೂ ಕರೆಸುವುದಿಲ್ಲ. ಉದಾಹರಣೆಗೆ, ಶಿರಾದಲ್ಲಿಯೇ 4 ಜನ mill owners ಇದ್ದಾರೆ. ಅವರನ್ನು ಬಿಟ್ಟರೆ ಬೇರೆ ಯಾರನ್ನೂ ಬರುವುದಕ್ಕೆ ಬಿಡುವುದಿಲ್ಲ. ದಾವಣಗೆರೆಯಿಂದ ಖರೀದಿದಾರರು ಅಲ್ಲಿಗೆ ಬಂದರೆ ಅವರನ್ನು ವಾಪಸ್ಸು ಓಡಿಸುತ್ತಾರೆ. ನೀವು ಬತ್ತಕ್ಕೆ ಕೊಡುತ್ತೀರುವ ಬೆಂಬಲ ಬೆಲೆ 854 ರೂ. ಇದೆ. ಆದರೆ, 600 ರಿಂದ 700 ರೂ.ಗಿಂತ ಮೇಲೆ ಬತ್ತ ಖರೀದಿ ಆಗುತ್ತಿಲ್ಲ. ಸೋನಾ ಮಸೂರಿ ಅಕ್ಕಿ ಮಾತ್ರ 1,000 ರಿಂದ 1100 ರೂ. ಗಳಿಗೆ ಹೋಗುವುದನ್ನು ಬಿಟ್ಟರೆ ಬೇರೆ ಬತ್ತ ಅಷ್ಟು ಬೆಲೆಗೆ ಹೋಗುತ್ತಿಲ್ಲ. ಇದು ನಿಮಗೂ ಗೊತ್ತಿರುವ ವಿಚಾರವಾಗಿದೆ. ಸರ್ಕಾರದವರು ಈ ಬಗ್ಗೆ ಯಾವ ರೀತಿ action ತೆಗೆದುಕೊಳ್ಳುತ್ತದೆ ಎನ್ನುವ ಸ್ಪಷ್ಟ message ಜನರಿಗೆ ಹೋಗಬೇಕಾಗುತ್ತದೆ. competition ಅನ್ನು create ಮಾಡುವುದಕ್ಕೋಸ್ಕರ ಮಾರುಕಟ್ಟೆ ಪ್ರಾಂಗಣಕ್ಕೆ ಹೆಚ್ಚು ಜನ ಖರೀದಿದಾರರು ಬರುವ ರೀತಿಯಲ್ಲಿ rules ಮಾಡಿ ಎಂದು ಹೇಳಿದರೆ ಅವಕಾಶ ಇಲ್ಲವೆಂದು ಹೇಳುತ್ತೀರಿ. ಅವಕಾಶ ಬೇಕೆನ್ನುವುದಾದರೆ ನಾವೆಲ್ಲರೂ ಒಪ್ಪುತ್ತೇವೆ, ಅದಕ್ಕೊಂದು amendment ಮಾಡಿ. ಯಾರು ಬೇಡವೆನ್ನುತ್ತಾರೆ? ಆದರೆ, ಹೆಚ್ಚು ಜನ ಖರೀದಿದಾರರು ಬಂದರೆ ನ್ಯಾಯಯುತವಾದ ಬೆಲೆ ಕೊಡುವ ರೀತಿಯಲ್ಲಿ ಆಗುವುದಕ್ಕೋಸ್ಕರ ಸರ್ಕಾರದ ಕಾಯಕ್ರಮ ಅಥವಾ ಚಿಂತನೆ ಏನಾದರೂ ಇದೆಯೇ?

ಶ್ರೀ ಶಿವರಾಜ್ ಎಸ್. ತಂಗಡಗಿ: ನಮ್ಮ ನಿಯಮಾನುಸಾರ ಕ್ರಮಗಳನ್ನು ಕೈಗೊಂಡ ಬಗ್ಗೆ ಮಾನ್ಯ ಹಿರಿಯ ಸದಸ್ಯರು ಪ್ರಶ್ನೆ ಕೇಳಿದ್ದರು. ಈಗಾಗಲೇ 165 ಪ್ರಕರಣಗಳಲ್ಲಿ ವಿಷಯ ಸಂಗ್ರಹಣ ಮಾಡಿದಾಗ ಒಂದು ಪ್ರಕರಣ ಮಾತ್ರ ನಮಗೆ ಸಿಕ್ಕಿದೆ. ಆ ಪ್ರಕರಣದಲ್ಲಿ ಈಗ ಕ್ರಮ ತೆಗೆದುಕೊಳ್ಳುವ ಹಂತದಲ್ಲಿದ್ದೇವೆ. ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇವೆ. ಅದರ ಜೊತೆಗೆ, ತಾವು ಬತ್ತದ ಬೆಲೆ ನಿಗದಿ ಪಡಿಸುವ ಬಗ್ಗೆ ಕೇಳಿದ್ದೀರಿ. ಬತ್ತದ ಬೆಲೆ ನಿಗದಿ ಮಾಡುವ ಪದ್ಧತಿ ನಮ್ಮದಲ್ಲ.

ಅದನ್ನು ಕೇಂದ್ರ ಸರ್ಕಾರ ನಿಗದಿಪಡಿಸಬೇಕು. ಆದ್ದರಿಂದ, ಮುಂದಿನ ದಿನಗಳಲ್ಲಿ ಮಾರುಕಟ್ಟೆಗೆ ಖರೀದಿದಾರರನ್ನು ಕ್ರೋಢೀಕರಿಸಬೇಕು, ಅವರನ್ನು ಸೇರಿಸಿ ಬೆಂಬಲ ಬೆಲೆ ಹೆಚ್ಚು ಬರುವ ರೀತಿಯಲ್ಲಿ ಕೆಲಸ ಮಾಡಬೇಕೆಂದು ತಾವೇನು ಹೇಳಿದಿರಿ, ಅದರ ಬಗ್ಗೆ ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ಕಾಯ್ದೆಗೆ ತಿದ್ದುಪಡಿ ತಂದು ಅದರ ಬಗ್ಗೆ ಚರ್ಚಿಸಿ ಮುಂದಿನ ಪರಿಶೀಲನೆ ಮಾಡುತ್ತೇನೆಂಬ ಮಾತನ್ನು ಹೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಈಗ ತೂಕದಲ್ಲಿ ಮೋಸವಾಗುತ್ತಿದೆ. ಒಂದು ಕ್ವಿಂಟಾಲ್ ಬತ್ತ ಮಾರುಕಟ್ಟೆಗೆ ಬಂದರೆ ಎರಡು ಕೆ.ಜಿ. ಬತ್ತವನ್ನು ನಿಚ್ಚಳವಾಗಿ ಅವನಿಗೆ ಲಾಭವಾಗಿ ಕೊಡಬೇಕು, ಚೀಲದ ತೂಕವೆಂದು ಒಂದು ಕೆ.ಜಿ. ಹೋಗುತ್ತದೆ. ಈಗ ಚೀಲದ ಬದಲು ಪ್ಲಾಸ್ಟಿಕ್ ಚೀಲ ಮಾಡಿದ್ದಾರೆ, ಅದು ಅರ್ಧ ಕೆ.ಜಿ. ತೂಕ ಮಾತ್ರ ಬರುತ್ತದೆ. ಆದರೆ, ಅದಕ್ಕೆ ಒಂದು ಕೆ.ಜಿ. ತೂಕವೆಂದು ವಸೂಲಿ ಮಾಡುತ್ತಾರೆ. ಹಮಾಲರಿಗೆ ಎಂದು ಒಂದು ಕೆ.ಜಿ. ತೆಗೆಯುತ್ತಾರೆ. ಕಸ ಗುಡಿಸುವವರಿಗೆಂದು ಒಂದು ಕೆ.ಜಿ. ಎಂದು ತೆಗೆಯುತ್ತಾರೆ. ಒಂದು ಕ್ವಿಂಟಾಲ್ ಬತ್ತದಲ್ಲಿ 5 ಕೆ.ಜಿ. shortage ತರುತ್ತಿದ್ದಾರೆ. ನೀವೇನಾದರೂ ಮಾಡಿ computer weighing machine ಹಾಕಬೇಕೆಂದಿದೆ. ಇದು ಯಾವ ಮಾರುಕಟ್ಟೆಯಲ್ಲಿ ಇದೆ? ಇವತ್ತು ನೀವು ಅಳವಡಿಸಿ ನೋಡಿ ನಂತರದ 8 ದಿವಸಗಳಲ್ಲಿ ಅದನ್ನು ಉದ್ದೇಶಪೂರ್ವಕವಾಗಿ ಕೆಡಿಸಿ ಇಟ್ಟಿರುತ್ತಾರೆ. ನಮ್ಮ ಕಡೆ ಚಿಂತಾಲು ಎಂದು ಹೇಳುತ್ತಾರೆ. ಅದೇ ಚಿಂತಾಲುಗಳನ್ನು ಹಾಕಿಕೊಂಡು ಇವತ್ತು ತೂಕ ಮಾಡುತ್ತಿದ್ದಾರೆ. ಹಾಗಾಗಿ, ತೂಕದಲ್ಲಿ ಮೋಸವಾಗುತ್ತಿದೆ. ಅದರಲ್ಲಿಯೂ ಕಂಡ ಹಾಗೆಯೇ 4–5 ಕೆ.ಜಿ. ಕಳೆದರೆ ರೈತರು ಹೇಗೆ ಉದ್ಧಾರವಾಗುವುದಕ್ಕೆ ಸಾಧ್ಯ? ಇದಕ್ಕೆ ಏನಾದರೊಂದು action ಮಾಡುವುದಕ್ಕಾಗುತ್ತದೆಯೇ? ಇದು ನಿಮ್ಮ ಕೈಯಲ್ಲಿಯೇ ಇದೆ.

ಶ್ರೀ ಶಿವರಾಜ್ ಎಸ್. ತಂಗಡಗಿ: ತೂಕದ ವಿಷಯದಲ್ಲಿ ಮಾನ್ಯ ಹಿರಿಯ ಸದಸ್ಯರು ಸಲಹೆ ಕೊಟ್ಟಿದ್ದಾರೆ. ನನ್ನ ಇಲಾಖೆ ಮುಂದಿನ ಆಗಸ್ಟ್‌ನಿಂದ ಒಂದು ಯೋಜನೆಯನ್ನು ಪ್ರಾರಂಭ ಮಾಡುತ್ತಿದೆ. ಇಡೀ ಎಪಿಎಂಸಿಯಲ್ಲಿ ಪ್ರತಿ ಖರೀದಿದಾರರ ಹತ್ತಿರ computer weighing machine ಇಡಬೇಕೆಂದು ಇಲಾಖೆಯಲ್ಲಿ ನಿರ್ಧಾರ ತೆಗೆದುಕೊಂಡಿದೆ. ಮುಂದಿನ ದಿನಗಳಲ್ಲಿ ಆ ಕೆಲಸ ಮಾಡಲಿಕ್ಕೆ ಸಿದ್ಧರಿದ್ದೇವೆ. ಇಲಾಖೆಯಿಂದ ಈಗಾಗಲೇ ನಾವು ಕಾರ್ಯಕ್ರಮವನ್ನು ಅಳವಡಿಸಿಕೊಂಡಿದ್ದೇವೆ.

ಶ್ರೀ ಯು.ಟಿ. ಖಾದರ್: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳಷ್ಟು ಜನರು ಮುಖ್ಯ ಕೃಷಿಯಾದ ಅಡಿಕೆಯಿಂದ ಜೀವಿಸುತ್ತಿದ್ದಾರೆ. ಆದರೆ, ಒಂದು ತಿಂಗಳ ಅನಾವೃಷ್ಟಿ ಮತ್ತು ಅತಿವೃಷ್ಟಿಯಿಂದ ಸಂಪೂರ್ಣವಾಗಿ ಅಡಿಕೆ ಹಾಳಾಗಿದೆ. ಬಹಳಷ್ಟು ಹಿಂದೆ ಸಚಿವರು ಬಂದಿದ್ದಾಗ 65 ರೂ. ಕೊಡುತ್ತೇವೆಂದು ಹೇಳಿದರು, ರಾಜ್ಯ

ಅಧ್ಯಕ್ಷರು ಮತ್ತು ಸಂಸದರು 85 ರೂ. ಕೊಡಿಸುತ್ತೇನೆಂದು ಹೇಳಿದರು. ಇನ್ನೊಬ್ಬ ಸಂಸದರು ಬಂದು 75 ರೂ. ಕೊಡಿಸುತ್ತೇನೆಂದು ಹೇಳಿದರು. ಹೀಗೆ ಬೇರೆ ಬೇರೆ ರೀತಿಯ ಘೋಷಣೆ ಮಾಡಿ ಹೋಗಿದ್ದಾರೆ. ಆದಕಾರಣ, ನಾನು ಕಳಕಳಿಯಿಂದ ಕೇಳುತ್ತೇನೆ, ದಕ್ಷಿಣ ಕನ್ನಡ ಜಿಲ್ಲೆಯ ಜನರ ಮೇಲೆ ಪ್ರೀತಿ ಇಟ್ಟು ಕನಿಷ್ಟ 100 ರೂ.ಗಳ ಬೆಂಬಲ ಬೆಲೆಯನ್ನು ಅಡಿಕೆಗೆ ತಾವು ಕೊಡುವ ನಿರ್ಧಾರವನ್ನು ಅತಿ ಶೀಘ್ರದಲ್ಲಿ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಶ್ರೀ ಟಿ.ಬಿ. ಜಯಚಂದ್ರರವರು ಒಳ್ಳೆಯ ಪ್ರಶ್ನೆ ಕೇಳಿದ್ದಾರೆ. ರೈತರ ಮೇಲೆ ನಿರಂತರವಾಗಿ ಖರೀದಿದಾರರಿಂದ ಶೋಷಣೆಯಾಗುತ್ತಿದೆ. ಉದಾಹರಣೆಗೆ, ನಮ್ಮಲ್ಲಿ ತೆಂಗಿನಕಾಯಿ, ಸೂರ್ಯಕಾಂತಿ, ನೆಲಗಡಲೆಯನ್ನು ಬೆಳೆದು ಮಾರುತ್ತಾರೆ. ಅದಕ್ಕೆ ನೀವು ಏನಾದರೂ computerize ಮಾಡಿ ದಯವಿಟ್ಟು ಖರೀದಿದಾರರಿಂದ ರೈತರಿಗೆ ಏನು ಅನಾಹುತವಾಗುತ್ತಿದೆ, ಅನ್ಯಾಯವಾಗುತ್ತಿದೆ ಅದನ್ನು ಸರಿಪಡಿಸುವ ಪ್ರಯತ್ನ ನಿಮ್ಮಿಂದ ಆಗಬೇಕು. ಶಿರಾ, ಕಡೂರು ಎಪಿಎಂಸಿಗಳಲ್ಲಿ ಮಾತ್ರವಲ್ಲ ಬೀರೂರಿನಲ್ಲಿ ಅಡಿಕೆ ಮತ್ತು ಖಾದರ್‌ರವರು ಹೇಳಿದ ಹಾಗೆ CAMPCO ನಲ್ಲಿಯೂ ಕೂಡ ತೂಕದಲ್ಲಿ ಮೋಸವಾಗುತ್ತಿದೆ. ನನಗನ್ನಿಸುವುದೇನೆಂದರೆ, ಎಪಿಎಂಸಿ ಯಾರ್ಡ್‌ಗಳಲ್ಲಿ ತೂಕ ಮತ್ತು ಅಳತೆ ಮಾಡುವ ಅಧಿಕಾರಿಗಳನ್ನು ನೇಮಿಸಿ, ಆಗ ರೈತರಿಗೆ ನ್ಯಾಯ ಸಿಗುತ್ತದೆ. ರೈತರಿಗೆ ನಿಗದಿಯಾದ ಬೆಲೆ ಸಿಗುತ್ತಿಲ್ಲ. ಕಡೂರಿನಲ್ಲಿ 4 ಖರೀದಿದಾರರು ಮಾತ್ರ ಇದ್ದಾರೆ. ಬೇರೆ ಖರೀದಿದಾದರರೂ ಅಲ್ಲಿಗೆ ಬರುವ ಹಾಗೆ ಮಾಡಬೇಕು. ಈ ಬಗ್ಗೆ ಎಪಿಎಂಸಿ ಸಹ ನಿರ್ದೇಶಕರಿಗೆ ಆದೇಶ ನೀಡಬೇಕು. ಕಡೂರಿನಿಂದ ಬೆಂಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಪ್ರತಿ ದಿನ 4–5 ಲಕ್ಷ ರೂ.ಗಳ ತರಕಾರಿ ಸರಬರಾಜು ಆಗುತ್ತಿದೆ. ಕಡೂರಿನಲ್ಲಿ ತರಕಾರಿ ಮಾರುಕಟ್ಟೆ ಮಾಡಲಿಕ್ಕೆ ಅವಕಾಶ ಮಾಡಿ, ಆ ತರಕಾರಿ ಖರೀದಿದಾರರಿಗೆ ಲೈಸೆನ್ಸ್ ಕೊಡಿಸುವ ಕಾರ್ಯ ತಮ್ಮ ಇಲಾಖೆಯಿಂದ ಆಗಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಕೇಳುತ್ತೇನೆ.

ಶ್ರೀ ಬಂಡೆಪ್ಪ ಕಾಶಂಪೂರ್: ಇದು ಬಹಳ ಮಹತ್ವವಾದ ವಿಷಯ. ನಮ್ಮ ಭಾಗದಲ್ಲಿ ನಮ್ಮ ರೈತರು ಹೆಚ್ಚುಕಡಿಮೆ 80% food-grains ಬೆಳೆಯುತ್ತಾರೆ. ಈ ಕಡೆ ತೆಂಗು, ಅಡಿಕೆ ಮುಂತಾದವನ್ನು ಬೆಳೆಯುತ್ತಾರೆ. ನಮ್ಮ ಜನ ಯಾವ ರೀತಿ ಸಮಸ್ಯೆ face ಮಾಡುತ್ತಾರೆಂದರೆ ಕೆಲವು ಹಂತದಲ್ಲಿ ಮಾರುಕಟ್ಟೆಗೆ ಬಂದಾಗ ಅವರಿಗೆ ಕೆಲವು ಸಮಸ್ಯೆ ಇರುತ್ತದೆ. ಆದರೆ, ರೈತ ಯಾವ ರೀತಿ ದೊಡ್ಡ ದನಿ ಇದ್ದಾನೆಂದರೆ ಹೊಲದಲ್ಲಿ ಬೀಜ ಬಿತ್ತಿದ ಮೇಲೆ ತೆನೆ ಆದಮೇಲೆ ಹಕ್ಕಿ ತಿಂದು ಹೋಗುತ್ತವೆ, ರಾಶಿ ಹಾಕಿದ ಮೇಲೆ ಅಲ್ಲಿ ನಾಲ್ಕು ಜನರಿಗೆ ಕೊಡಬೇಕು, ನಂತರ ಮಾರುಕಟ್ಟೆಗೆ ಬಂದಮೇಲೆ especially ನಮ್ಮ ಗುಲಬರ್ಗಾ, ಬೀದರ್ ಭಾಗದಲ್ಲಿ ಬೆನ್ನಿ ಹೊಡೆಯುವ ಕೆಲಸವಿದೆ. clean ಮಾಡುವ ಪದ್ಧತಿಯನ್ನು market yard ನಿಂದ

ತೆಗೆದುಹಾಕಬೇಕು. major ಶೋಷಣೆ ಎಲ್ಲಿ ಆಗುತ್ತಿದೆ ಎಂದರೆ ರೈತ ಮೂಟೆಯನ್ನು ತೆಗೆದುಕೊಂಡು ಬಂದ ಮೇಲೆ ಮಾರುಕಟ್ಟೆಯಲ್ಲಿಯೇ complete clean ಮಾಡುತ್ತಾರೆ. ಆ clean ಮಾಡುವುದರಲ್ಲಿಯೇ ಒಂದು ಕೆ.ಜಿ. ಅನ್ನು ಹುಡುಗರು ತೆಗೆದುಕೊಂಡರು, ಒಂದು ಕೆ.ಜಿ.ಯನ್ನು ಚೆನ್ನಿ ಹೊಡೆಯುವವರು ತೆಗೆದುಕೊಳ್ಳುತ್ತಾರೆ ಮತ್ತು ಕೊನೆಗೆ ಮೂಟೆ ಹಾಕಿದ ಮೇಲೆ ವ್ಯಾಪಾರಸ್ಥರು ಬಂದು ಖರೀದಿ ಮಾಡುತ್ತಾರೆ. ಮಾರುಕಟ್ಟೆಯಲ್ಲಿ clean ಮಾಡುವ ವ್ಯವಸ್ಥೆಯನ್ನು ತೆಗೆದರೆ ಅವೆಲ್ಲ ಕಡಿಮೆ ಆಗುತ್ತದೆ. ಜೊತೆಗೆ computer ಅಳವಡಿಸುವುದು ಬಹಳ ಜರೂರು ಇದೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ತಮಗೂ ಅನುಭವವಿದೆ. ಇಲ್ಲಿ Food Minister ಇದ್ದಾರೆ, ಮಾರುಕಟ್ಟೆ ಸಚಿವರು ಉತ್ತರಿಸುತ್ತಿದ್ದಾರೆ. ಈಗ ಸೋನಾ ಮಸೂರಿ ಅಕ್ಕಿಯ ಬೆ 38ರಿಂದ 40 ರೂ. ಇದೆ. ಆದರೆ, ಒಬ್ಬ ರೈತ ಮಾರುಕಟ್ಟೆಗೆ ಹೋದರೆ ಮೂಟೆಗೆ ಒಂದು ಸಾವಿರ ರೂ. ಮಾತ್ರ ಸಿಗುತ್ತದೆ. ಅಲ್ಲಿ ಎಷ್ಟು ಲಾಭ ಇಡಲಾಗುತ್ತದೆ ಎನ್ನುವುದನ್ನು ತಾವು ಅರ್ಥಮಾಡಿಕೊಳ್ಳಬೇಕು. Demand and Supply ನೀತಿಗಳನ್ನು ಬಿಟ್ಟುಬಿಡಿ. mill owners ಎಷ್ಟು ಲಾಭ ಮಾಡುತ್ತಿದ್ದಾರೆ? ಅದರ ಮೇಲೆ ಏನಾದರೂ ನಿಯಂತ್ರಣವಿದೆಯೇ? ಗ್ರಾಹಕರಿಗೂ ಮತ್ತು ರೈತರಿಗೂ ಲಾಭವಾಗುತ್ತಿಲ್ಲವೆಂದು ಹೇಳಿದರೆ ವರ್ತಕರಿಗೆ ಲಾಭವಾಗುತ್ತಿರುವುದನ್ನು ನೋಡಿಕೊಂಡು ಕುಳಿತಿದ್ದೇವೆ. ಈ ಬಗ್ಗೆ ಪತ್ರಿಕೆಗಳಲ್ಲೂ ಸಾಕಷ್ಟು ಬರುತ್ತಿದೆ. ಏಕೆ ಈ ರೀತಿ ಆಗುತ್ತಿದೆ ಎನ್ನುವುದನ್ನು ಕಂಡುಹಿಡಿಯುವುದಕ್ಕೆ ಏನಾದರೂ ಒಂದು ಚಿಂತನೆ ಮಾಡುವುದಕ್ಕೆ ಸಾಧ್ಯವೇ? ಕೃಷಿ ಸಚಿವರು ಸಹ ಇಲ್ಲಿಯೇ ಇದ್ದಾರೆ. ಈ ಬೆಲೆಗಳಲ್ಲಿ ರೈತರು ಯಾರೂ ಕೂಡ ಉದ್ಧಾರವಾಗುವುದಕ್ಕೆ ಸಾಧ್ಯವಿಲ್ಲ. ಈ ಬಗ್ಗೆ ಏನು action ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ?

ಶ್ರೀ ಶಿವರಾಜ್ ಎಸ್. ತಂಗಡಗಿ: ಹಿರಿಯ ಸದಸ್ಯರಾದ ಕೃಷ್ಣಮೂರ್ತಿಯವರು ಒಂದು ಸಲಹೆ ಕೊಟ್ಟರು. ಈಗಾಗಲೇ 25 ಎಪಿಎಂಸಿಗಳಲ್ಲಿ e-tendering ಪದ್ಧತಿ ಪ್ರಾರಂಭ ಮಾಡಿದ್ದೇವೆ. ಈ ವರ್ಷವೂ 15 ಎಪಿಎಂಸಿಗಳಲ್ಲಿ computer ಅಳವಡಿಸಿ e-tendering ಪದ್ಧತಿಯನ್ನು ಪ್ರಾರಂಭಿಸುತ್ತಿದ್ದೇವೆ, ಖಾದರ್ ರವರು ಅಡಿಕೆ ಬೆಳೆ ಬಗ್ಗೆ ಹೇಳಿದರು. ಈಗಾಗಲೇ ನಾವು ಕೆಂಪು ಅಡಿಕೆಗೆ ಒಂದು ಕ್ವಿಂಟಾಲ್ 9500 ರೂ.ಗಳ ಬೆಂಬಲ ಬೆಲೆಯನ್ನು ನಿಗದಿಪಡಿಸಿದ್ದೇವೆ. ಬಿಳಿ ಅಡಿಕೆ ಬೆಂಬಲ ಬೆಲೆ ಈಗಾಗಲೇ ನಿಗದಿಯಾಗಿದೆ. ಅವರು extra 100 ರೂ. ಕೊಡಿ ಎಂದು ಕೇಳುತ್ತಿದ್ದಾರೆ. ಆ ಬಗ್ಗೆ ಮುಂದಿನ ದಿನಗಳಲ್ಲಿ ಪರಿಶೀಲನೆ ಮಾಡುವ ಕೆಲಸ ಮಾಡುತ್ತೇನೆ.

ಶ್ರೀ ಬಂಡೆಪ್ಪ ಕಾಶಂಪೂರ್: cleaning system ನಲ್ಲಿ ರೈತರಿಗೆ ಮೋಸವಾಗುತ್ತಿದೆ. ಅವರು ತಮ್ಮ ಹತ್ತಿರ clean ಮಾಡಿಕೊಂಡು ಬಂದು ಪುನ: market yard ನಲ್ಲಿ complete clean ಮಾಡುತ್ತಾರೆ.

ಶ್ರೀ ಶಿವರಾಜ್ ಎಸ್. ತಂಗಡಗಿ: ಯಾವ ರೈತರೂ ಇವತ್ತಿನವರೆಗೂ ಅದರ ಬಗ್ಗೆ complaint ಕೊಟ್ಟಿಲ್ಲ. ಇವತ್ತು ಮಾನ್ಯ ಸದಸ್ಯರು ಆ ಬಗ್ಗೆ ನನ್ನ ಗಮನಕ್ಕೆ ತಂದಿದ್ದಾರೆ. ಆ ಬಗ್ಗೆ ನಾನು ಅಧಿಕಾರಿಗಳ ಜೊತೆ ಚರ್ಚಿಸಿ ಪರಿಶೀಲನೆ ಮಾಡುತ್ತೇನೆ.

ಹಾಲು ಉತ್ಪಾದಕ ಸಹಕಾರ ಒಕ್ಕೂಟಗಳ ಲಾಭ/ನಷ್ಟದ ಬಗ್ಗೆ

12(155) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)
ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಸಹಕಾರ ಸಚಿವರು)

ಅ) ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ (ಕೆ.ಎಂ.ಎಫ್) ಅಧೀನದಲ್ಲಿ ಬರುವ ಜಿಲ್ಲಾ ಹಾಲು ಒಕ್ಕೂಟಗಳು ಪಶು ಆಹಾರ ತಯಾರಿಕಾ ಮತ್ತು ಇತರ ಘಟಕಗಳು ಯಾವುವು? (ಪೂರ್ಣ ವಿವರ ಒದಗಿಸುವುದು)

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ ನಿ, ಬೆಂಗಳೂರು ಇದರ ಅಧೀನದಲ್ಲಿ ಒಟ್ಟು 13 ಜಿಲ್ಲಾ ಹಾಲು ಒಕ್ಕೂಟಗಳು ಕಾರ್ಯನಿರ್ವಹಿಸುತ್ತಿವೆ. ಇದಲ್ಲದೆ, ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳವು 4 ಪಶು ಆಹಾರ ಘಟಕಗಳನ್ನು ಹಾಗೂ 6 ಇತರೆ ಘಟಕಗಳನ್ನು ಹೊಂದಿದೆ.

ಆ) ಕೆ.ಎಂ.ಎಫ್. ಮತ್ತು ವಿವಿಧ ಹಾಲು ಒಕ್ಕೂಟಗಳು (ಪ್ರಾಡಕ್ಟ್ ಡೈರಿ ಹಾಗೂ ಇತರ ಘಟಕಗಳು ಸೇರಿದಂತೆ) ಕಳೆದ ಮೂರು ವರ್ಷಗಳಿಂದ ಗಳಿಸಿರುವ ಲಾಭ ಅಥವಾ ಅನುಭವಿಸಿರುವ ನಷ್ಟದ ಮೊತ್ತವೆಷ್ಟು? (ಜಿಲ್ಲಾವಾರು ವಿವರ ಒದಗಿಸುವುದು)

ಕೆ.ಎಂ.ಎಫ್ ಮತ್ತು ವಿವಿಧ ಹಾಲು ಒಕ್ಕೂಟಗಳು ಕಳೆದ ಮೂರು ವರ್ಷಗಳಿಂದ ಗಳಿಸಿರುವ ಲಾಭ, ಅಥವಾ ಅನುಭವಿಸಿರುವ ನಷ್ಟದ ಮೊತ್ತವನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಕೆ.ಎಂ.ಎಫ್. ಸೇರಿದಂತೆ ಯಾವ ಯಾವ ಒಕ್ಕೂಟಗಳು ಮತ್ತು ಪ್ರಾಡೆಕ್ಟ್ ಡೈರಿಗಳ ಮೇಲೆ ದೂರುಗಳು ಬಂದಿರುವ ಹಿನ್ನೆಲೆಯಲ್ಲಿ ಸರ್ಕಾರವು ಈ ಸಹಕಾರ ಸಂಸ್ಥೆಗಳ ಲೆಕ್ಕಪರಿಶೋಧನೆಯ ತಪಾಸಣೆ ನಡೆಸುತ್ತಿರುವುದು ನಿಜವೇ? ಹಾಗಿದ್ದಲ್ಲಿ, ಈ ದೂರುಗಳ ವಿವರಗಳೇನು? ಇದರಿಂದ ಆಗಿರುವ ನಿಯಮಗಳ ಉಲ್ಲಂಘನೆಯ ವಿವರಗಳೇನು?

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ ನಿ., (ಕೆಎಂಎಫ್) ಬೆಂಗಳೂರು ಮತ್ತು ಚನ್ನರಾಯಪಟ್ಟಣ ತಾಲ್ಲೂಕಿನ ಶೆಟ್ಟಿಹಳ್ಳಿ ಗ್ರಾಮದಲ್ಲಿರುವ ಹಾಲು ಉತ್ಪನ್ನಗಳ ಘಟಕದ ಸಿಬ್ಬಂದಿಗಳ ನೇಮಕಾತಿ ವಿಷಯದ ಬಗ್ಗೆ ದೂರುಗಳು ಬಂದಿರುತ್ತವೆ. ಈ ದೂರುಗಳಲ್ಲಿನ ಅಂಶಗಳ ಬಗ್ಗೆ ಸಹಕಾರ ಸಂಘಗಳ ನಿಬಂಧಕರಿಂದ ಪೂರ್ವಭಾವಿಯಾಗಿ ವಿಚಾರಣೆ ನಡೆಸಿ, ಅವರ ಅಭಿಪ್ರಾಯದ ಮೇರೆಗೆ ಕರ್ನಾಟಕ ಸಹಕಾರಿ ಹಾಲು ಉತ್ಪಾಧಕರ ಮಹಾಮಂಡಳ ನಿ, ಬೆಂಗಳೂರು ಇದರ 2001–02 ನೇ ಸಾಲಿನಿಂದ 2007–08ನೇ ಸಾಲಿನವರೆಗಿನ ಲೆಕ್ಕಪತ್ರಗಳ ಮರುಪರಿಶೀಲನೆಯ ಅಗತ್ಯತೆಯನ್ನು ಮನಗಂಡು ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕರು ದಿನಾಂಕ: 05.11.2008 ರಂದು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 63(11) ರಡಿ ಮರುಪರಿಶೀಲನೆಗೆ ಆದೇಶಿಸಿದ್ದಾರೆ.

ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಇಲ್ಲದ, ಸಾಮಾನ್ಯ ವಿಜ್ಞಾನ ಪದವಿ ಹೊಂದಿದ ಶ್ರೀ ಐ.ಆರ್.ರಾಮಲಿಂಗೇಗೌಡ ಇವರನ್ನು ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ನೇಮಿಸಿರುವುದು, ಇವರಿಂದ ಮಹಾಮಂಡಳದಲ್ಲಿ ಹಲವು ರೀತಿಯ ದುಂದು ವೆಚ್ಚವಾಗಿರುವುದು, ಹಾಲು ಉತ್ಪನ್ನಗಳನ್ನು ಅವೈಜ್ಞಾನಿಕ ರೀತಿಯಲ್ಲಿ ಮಾರಾಟ ಮಾಡುತ್ತಿರುವುದು ಹಾಗೂ ಮಂಡಳಿಯ ಸಿಬ್ಬಂದಿ ನೇಮಕಾತಿಯಲ್ಲಿ ನಿಯಮಗಳ ಉಲ್ಲಂಘನೆ ಮಾಡಿರುವುದು ಮುಂತಾದ ಅಪಾದನೆಗಳನ್ನು ಅರ್ಜಿಗಳಲ್ಲಿ ಮಾಡಲಾಗಿರುತ್ತದೆ.

ಮರುಪರಿಶೀಲನಾ ವರದಿ ಇನ್ನೂ ಸಲ್ಲಿಕೆಯಾಗದೆ ಇರುವುದರಿಂದ ನಿಯಮಗಳ ಉಲ್ಲಂಘನೆಯ ವಿವರಗಳು ಲಭ್ಯವಿರುವುದಿಲ್ಲ.

ಈ) ಈ ತಪಾಸಣೆ ಎಂದಿನಿಂದ ಪ್ರಾರಂಭವಾಯಿತು ಮತ್ತು ಈ ಯಾವ ಹಂತದಲ್ಲಿದೆ? ಯಾವಾಗ ಈ ತಪಾಸಣಾ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಗುವುದು?

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ ನಿ, ಬೆಂಗಳೂರು ಇದರ ಮರುಪರಿಶೀಲನಾ ಕಾರ್ಯವನ್ನು ದಿನಾಂಕ:06.11.2008ರಿಂದ ಪ್ರಾರಂಭಿಸಲಾಗಿರುತ್ತದೆ.

ಮರುಪರಿಶೀಲನಾ ಸಂದರ್ಭದಲ್ಲಿ ಮರುಪರಿಶೀಲನಾ ಅಧಿಕಾರಿಗಳು ಗಮನಿಸಿರುವ ನ್ಯೂನತೆಗಳ ಸಂಬಂಧ ಸಂಸ್ಥೆಯ ಸಂಬಂಧಪಟ್ಟ ಅಧಿಕಾರಿಗಳಿಂದ ಸಮಜಾಯಿಸಿ ವಿವರಣೆಯನ್ನು ಸೂಕ್ತ ದಾಖಲೆಗಳೊಂದಿಗೆ ಬಗ್ಗೆ ಅತೃಪ್ತಗೊಂಡ ಸಂಸ್ಥೆಯು ಗೌರವ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಈ ಸಂಬಂಧ ರಿಟ್ ಅರ್ಜಿ ಸಂಖ್ಯೆ 14136/2009ನ್ನು ದಾಖಲಿಸಿದ್ದು, ಗೌರವ ಉಚ್ಚ ನ್ಯಾಯಾಲಯವು ಪ್ರಕರಣವನ್ನು ಅಲಿಸಿ ಸಮಜಾಯಿಷಿ/ವಿವರಣೆ ನೀಡಲು ದಿನಾಂಕ:17.07.2009 ರವರೆಗೆ ಗಡುವು ನೀಡಿರುತ್ತದೆ.

ಗೌರವ ಉಚ್ಚ ನ್ಯಾಯಾಲಯ ನೀಡಿರುವ ದಿನಾಂಕ:17.07.2009 ರ ಗಡುವು ಮುಗಿದ ನಂತರ ಮರುಪರಿಶೀಲನಾ ಕಾರ್ಯವನ್ನು ಮುಕ್ತಾಯಗೊಳಿಸಲಾಗುವುದು.

ಅನುಬಂಧ

ಕರ್ನಾಟಕ ಹಾಲು ಮಹಾಮಂಡಳಿ ಹಾಗೂ ಹಾಲು ಒಕ್ಕೂಟಗಳು ಕಳೆದ ಮೂರು ವರ್ಷಗಳಿಂದ ಗಳಿಸಿರುವ ಲಾಭ/ನಷ್ಟದ ಬಗ್ಗೆ ಸಂಕ್ಷಿಪ್ತ ವಿವರ

(ರೂ. ಲಕ್ಷಗಳಲ್ಲಿ)

		2005–06	2006–07	2007–08	2008–09 (ತಾತ್ಕಾಲಿಕ)
1.	ಬೆಂಗಳೂರು ಹಾಲು ಒಕ್ಕೂಟ	357.31	327.48	343.80	159.38
2.	ಕೋಲಾರ ಹಾಲು ಒಕ್ಕೂಟ	382.77	47.07	109.78	221.60
3.	ಮೈಸೂರು ಚಾಮರಾಜನಗರ ಹಾಲು ಒಕ್ಕೂಟ	–0.30 (ನಷ್ಟ)	86.72	201.81	286.44
4.	ಮಂಡ್ಯ ಹಾಲು ಒಕ್ಕೂಟ	60.06	47.30	17.39	264.98
5.	ಧಾರವಾಡ ಹಾಲು ಒಕ್ಕೂ	–16.85 (ನಷ್ಟ)	15.12	203.66	68.69
6.	ಬೆಳಗಾವಿ ಹಾಲು ಒಕ್ಕೂಟ	49.51	2.81	–8.57 (ನಷ್ಟ)	51.30

7.	ಹಾಸನ ಹಾಲು ಒಕ್ಕೂಟ	61.55	61.40	199.57	185.28
8.	ತುಮಕೂರು ಹಾಲು ಒಕ್ಕೂಟ	29.53	168.39	104.26	170.75
9.	ದಕ್ಷಿಣ ಕನ್ನಡ ಹಾಲು ಒಕ್ಕೂಟ	49.74	34.96	72.78	108.00
10.	ಶಿವಮೊಗ್ಗ ಹಾಲು ಒಕ್ಕೂಟ	27.07	15.01	21.70	83.57
11.	ಗುಲ್ಬರ್ಗಾ ಬೀದರ್ ಹಾಲು ಒಕ್ಕೂಟ	7.39	1.14	1.09	-58.10 (ನಷ್ಟ)
12.	ಬಿಜಾಪುರ ಬಾಗಲಕೋಟೆ ಹಾಲು ಒಕ್ಕೂಟ	42.81	20.82	80.77	87.77
13.	ರಾಯಚೂರು ಬಳ್ಳಾರಿ ಹಾಗೂ ಕೊಪ್ಪಳ ಹಾಲು ಒಕ್ಕೂಟ	26.73	72.46	52.29	114.34
14.	ಕರ್ನಾಟಕ ಹಾಲು ಮಹಾಮಂಡಳಿ ಹಾಗೂ ಘಟಕಗಳು	561.80	745.16	1111.45	1179.88

ಶ್ರೀ ಈಶ್ವರ ಭೀಮಣ್ಣ ಖಂಡ್ರೆ:- ಗುಲ್ಬರ್ಗಾ ಬೀದರ್ ಹಾಲು ಒಕ್ಕೂಟವನ್ನು ಪ್ರತ್ಯೇಕವಾಗಿ ಬೀದರ್‌ನಲ್ಲಿ ಮಾಡಿ, ಏಕೆಂದರೆ ಬೀದರ್‌ನಲ್ಲಿ ಹಾಲು ಉತ್ಪಾದನೆ ಜಾಸ್ತಿಯಾಗುತ್ತದೆಂದು ಬಹಳ ದಿವಸಗಳಿಂದ ಬೇಡಿಕೆಯಿದ್ದರೂ ಇಲ್ಲಿಯವರೆವಿಗೂ ಬೀದರ್‌ನಲ್ಲಿ ಪ್ರತ್ಯೇಕವಾದ ಹಾಲು ಒಕ್ಕೂಟ ಪ್ರಾರಂಭಿಸಿಲ್ಲ. ಸರ್ಕಾರ ಇದನ್ನು ಪ್ರಾರಂಭಿಸುತ್ತದೆಯೆ? ಇದರ ಬಗ್ಗೆ ಮಾನ್ಯ ಸಚಿವರು ಉತ್ತರಿಸಬೇಕು. ಜೊತೆಗೆ ನಿನ್ನೆ ನನಗೆ ಗುಲ್ಬರ್ಗಾ ಬೀದರ್ ಹಾಲು ಒಕ್ಕೂಟವನ್ನು ಸೂಪರ್‌ಸೀಡ್ ಮಾಡಿದ್ದಾರೆಂದು ಪತ್ರಿಕೆಗಳಿಂದ ಗೊತ್ತಾಯಿತು. ಒಂದು ಕಡೆ ವೈದ್ಯನಾಥನ್ ಕಮಿಟಿ ರಿಪೋರ್ಟ್‌ನ್ನು ಅನುಷ್ಠಾನಕ್ಕೆ ತರುತ್ತೇವೆಂದು ಹೇಳುತ್ತಾರೆ. ಜೊತೆಗೆ ನಿನ್ನೆ ಇದನ್ನು ಸೂಪರ್‌ಸೀಡ್ ಮಾಡಿರುವುದು ಏಕೆ ಎಂದು ಉತ್ತರಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಗೌರವಾನ್ವಿತ ಸದಸ್ಯರು ಬೀದರ್ ಮತ್ತು ಗುಲ್ಬರ್ಗಾದಲ್ಲಿರುವ ಹಾಲು ಒಕ್ಕೂಟವನ್ನು ಬೇರ್ಪಡಿಸಬೇಕೆನ್ನುವ ಬೇಡಿಕೆಯನ್ನು ಇಟ್ಟಿದ್ದಾರೆ. ಬಹುಶ: ಈಗಾಗಲೇ ಬೀದರ್ ಮತ್ತು ಗುಲ್ಬರ್ಗಾದಲ್ಲಿರುವ ಹಾಲು ಒಕ್ಕೂಟ ಈ ವರ್ಷ ನಷ್ಟದಲ್ಲಿರತಕ್ಕಂಥ ಸಂದರ್ಭ ನೋಡಿದಾಗ ಸಧ್ಯಕ್ಕೆ ಬೇರ್ಪಡಿಸುವಂಥದ್ದು ಸದ್ಯದ ಪರಿಸ್ಥಿತಿಯಲ್ಲಿ ಸೂಕ್ತವಲ್ಲ. ಮುಂದಿನ

D-1054-34

ದಿನಮಾನಗಳಲ್ಲಿ ಲಾಭದಾಯಕವಾಗಿದ್ದಂಥ ಸಂದರ್ಭದಲ್ಲಿ ಅದನ್ನು ಬೇರ್ಪಡಿಸಲಿಕ್ಕೆ ಸರಕಾರ ಚಿಂತನೆ ಮಾಡುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಇದರ ಜೊತೆಗೆ ಅವರು ಇನ್ನೊಂದು ಪ್ರಶ್ನೆ ಕೇಳಿದರು. ಆ ಸಂಸ್ಥೆ ನಿನ್ನೆ ದಿವಸ ಸೂಪರ್‌ಸೀಡ್ ಆಗಿರುವ ಬಗ್ಗೆ ಕೇಳಿದರು. ವೈದ್ಯನಾಥನ್ ಕಮಿಟಿಯ ವರದಿಯ ಆಧಾರ ಇಟ್ಟುಕೊಂಡು ಸೂಪರ್‌ಸೀಡ್ ಮಾಡಿರುವುದು ಸರಿಯಲ್ಲವೆಂದು ಅವರ ಅಭಿಪ್ರಾಯ. ವೈದ್ಯನಾಥನ್ ಕಮಿಟಿಯ ವರದಿಗೆ ಮತ್ತು ಈ ಹಾಲು ಒಕ್ಕೂಟಗಳಿಗೆ ಯಾವುದೇ ತರಹದ ಸಂಬಂಧವಿಲ್ಲ. ಈ ಒಂದು ಹಿನ್ನೆಲೆಯಲ್ಲಿ ಈ ಪ್ರಶ್ನೋತ್ತರ ಮುಗಿದ ಬಳಿಕ ಸೂಪರ್‌ಸೀಡ್ ಆಗಿರುವ ಬಗ್ಗೆ ನಾನು ಮಾಹಿತಿ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಸೂಪರ್‌ಸೀಡ್ ಆಗಿರುವ ಬಗ್ಗೆ ನಂತರ ಉತ್ತರ ಕೊಡಿ. ಈ ಪ್ರಶ್ನೆಗೆ ಅದು ಸಂಬಂಧವಿಲ್ಲ. ಅವರು ಮೊದಲು ಉತ್ತರ ಮುಗಿಸಿದ ನಂತರ ನೀವು ಪ್ರಶ್ನೆ ಕೇಳಿ. ನಿಮ್ಮದು ಉತ್ತರ ಮುಗಿಯತೆ?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ನಾನು ಈಗಾಗಲೇ ಉತ್ತರಿಸಿದ್ದೇನೆ. ಆ ಬಗ್ಗೆ ನಂತರ ಉತ್ತರ ಕೊಡುತ್ತೇನೆ.

ಶ್ರೀ ಬಂಡೆಪ್ಪ ಕಾಶಂಪೂರ್: ಬೀದರ್‌ನಲ್ಲಿ ಹಾಲು ಒಕ್ಕೂಟ ಏಕೆ ಮಾಡಬಾರದು ಎನ್ನುವುದಕ್ಕೆ ಸನ್ಮಾನ್ಯ ಸಚಿವರು ಉತ್ತರ ಕೊಟ್ಟರು. ಏನೆಂದರೆ, ಈಗ ನಷ್ಟ ಇದೆ, ಲಾಭ ಬಂದ ನಂತರ ಬೀದರ್‌ನಲ್ಲಿ ಮಾಡುತ್ತೇವೆಂದು ಹೇಳಿದರು. ಆದರೆ, ನಾನು ತಮ್ಮ ಮುಖಾಂತರ ಏನು ಹೇಳಬಯಸುತ್ತೇನೆಂದರೆ, ನಿನ್ನೆ ಏನು ಸೂಪರ್‌ಸೀಡ್ ಮಾಡಿದ್ದಾರೆ, ಬೀದರ್‌ಗೆ ಶಿಫ್ಟ್ ಮಾಡಿದ್ದಾರೆಂದು ಮಾಡಿದ್ದಾರೆ. ಇವತ್ತು ಇವರೇ ಬೀದರ್‌ಗೆ ಮಾಡಲಿಕ್ಕೆ ಆಗುವುದಿಲ್ಲ. ಲಾಭವಾದ ನಂತರ ಮಾಡುತ್ತೇವೆಂದು ಹೇಳುತ್ತಾರೆ. ಅದೇ ಒಂದು ಕಾರಣದಿಂದ ಸೂಪರ್‌ಸೀಡ್ ಮಾಡಿದ್ದಾರೆಂದು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಸದಸ್ಯರು ನನ್ನ ಉತ್ತರವನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲವೆಂದು ಕಾಣುತ್ತದೆ. ನಾನು ಏನು ಹೇಳಿದೆ ಎಂದರೆ, ಈಗ ನಷ್ಟದಲ್ಲಿದೆ ಮುಂದೆ ಲಾಭವಾದಾಗ ಪರಿಶೀಲಿಸಬಹುದು ಎಂದು ಹೇಳಿದೆ.

ಶ್ರೀ ಬಂಡೆಪ್ಪ ಕಾಶಂಪೂರ್: ಅದರಲ್ಲಿಯೇ ಇದೆ. ಬೀದರ್‌ಗೆ ಆಫೀಸ್ ಶಿಫ್ಟ್ ಮಾಡಿರುವುದರಿಂದ ನಾವು ಇದನ್ನು ಮಾಡುತ್ತೇವೆಂದು ಇದೆ. ಶಿಫ್ಟ್ ಆಗಿಲ್ಲವೇ?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಸದಸ್ಯರು ನನ್ನ ಉತ್ತರವನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲವೆಂದು ಕಾಣುತ್ತದೆ. ನಾನು ಏನು ಹೇಳಿದೆ ಎಂದರೆ, ಈಗ ನಷ್ಟದಲ್ಲಿದೆ ಮುಂದೆ ಲಾಭವಾದಾಗ ಪರಿಶೀಲಿಸಬಹುದು ಎಂದು ಹೇಳಿದೆ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ: ಬೀದರ್‌ಗೆ ಪ್ರತ್ಯೇಕವಾದ ಹಾಲು ಒಕ್ಕೂಟ ಮಾಡಿದರೆ ಲಾಭ ಆಗೇ ಆಗುತ್ತದೆ. ಆದರೆ, ಸರ್ಕಾರ ತಾರತಮ್ಯ ನೀತಿ ಅನುಸರಿಸುತ್ತದೆ. ಇದು ಬಹಳ ದಿವಸಗಳಿಂದ ಬೇಡಿಕೆಯಿದ್ದರೂ ಇದನ್ನು ಅನುಷ್ಠಾನಕ್ಕೆ ತರುತ್ತಿಲ್ಲ. ಅದಕ್ಕಾಗಿ ಮಾನ್ಯ ಸಚಿವರು ತಕ್ಷಣವೇ ಇದನ್ನು ಬೇರ್ಪಡೆ ಮಾಡುತ್ತೇವೆಂದು ಅಲ್ಲಿ ಆಶ್ವಾಸನೆ ಕೊಡಬೇಕೆಂದು ನಾನು ಅವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಗುಲ್ಬರ್ಗಾ ಮತ್ತು ಬೀದರ್ ಎರಡು ಜಿಲ್ಲೆಗಳಿಗೂ ಒಂದೇ ಹಾಲು ಒಕ್ಕೂಟ ಇರುವುದು. ನಿಮ್ಮ ಉತ್ತರ ಏನು ಇದೆ ಎಂದರೆ, ಬೈಫರ್‌ಕೇಟ್ ಮಾಡಿದರೆ ಈಗಾಗಲೇ ನಷ್ಟದಲ್ಲಿದೆ ಇನ್ನೂ ನಷ್ಟ ಹೆಚ್ಚಾಗಿ ಬಿಡುತ್ತದೆ, ಅದಕ್ಕೋಸ್ಕರ ಅದು ಲಾಭಕ್ಕೆ ಬಂದಾಗ ಅದನ್ನು ಡಿವಿಜನ್ ಮಾಡಿ ಆ ಜಿಲ್ಲೆಗೂ ಬೈಫರ್‌ಕೇಟ್ ಮಾಡುತ್ತೇವೆ ಎನ್ನುವುದು ನಿಮ್ಮ ವಾದ. ಆದರೆ ನನ್ನ ಪ್ರಕಾರ, ನಾನು ಕೂಡ ಸ್ವಲ್ಪ ದಿವಸ ಪಶುಸಂಗೋಪನಾ ಇಲಾಖೆಯ ಸಚಿವನಾಗಿ ಕೆಲಸ ಮಾಡಿದ್ದಾನೆ. ಆವೋತ್ತಿನ ದಿವಸಗಳಿಂದಲೂ ಬೀದರ್ ಜಿಲ್ಲೆಯವರದು ನಮಗೆ ಪ್ರತ್ಯೇಕವಾದ ಯೂನಿಯನ್ ಬೇಕು, ಪ್ರತ್ಯೇಕವಾದ ಹಾಲು ಸಂಸ್ಕರಣೆ ಮಾಡುವ ಡೈರಿ ಬೇಕು ಎಂದು ಬಹಳ ಒತ್ತಾಯವಿದೆ. ಮಿಲ್ಕ್ ರೂಟ್‌ಗಳು ಬಹಳ ದೂರ ಇವೆ. ದೂರದಿಂದ ಹಾಲು ಸಾಗಾಣಿಕೆ ಮಾಡಿಕೊಂಡು ಬರಬೇಕಾದರೆ ಟ್ರಾನ್ಸ್‌ಪೋರ್ಟ್ ಕಾಸ್ಟ್ ಜಾಸ್ತಿಯಾಗುತ್ತದೆ ಮತ್ತು ಹೆಚ್ಚು ಹಾಲು ಉತ್ಪಾದನೆಯಾಗುವುದು ಬೀದರ್‌ನಲ್ಲಿ. ಬೀದರ್‌ನಲ್ಲಿ ಹೆಚ್ಚು ಹಾಲು ಉತ್ಪಾದನೆ ಮಾಡಿಕೊಂಡು ನೀವು ಸಂಸ್ಕರಣಾ ಘಟಕವನ್ನು ಡೈರಿಯನ್ನು ಗುಲ್ಬರ್ಗಾದಲ್ಲಿ ಇಟ್ಟುಕೊಂಡು ಲಾಭ ಮಾಡಬೇಕೆಂದು ನೀವು ವಿಚಾರ ಮಾಡಿದರೆ ಲಾಭ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಅದಕ್ಕೋಸ್ಕರ ಡೈರಿ ಬೀದರ್‌ನಲ್ಲಿರಬೇಕು. ಯೂನಿಯನ್ ಕೂಡ ಅಲ್ಲಿಯೇ ಇರಬೇಕು. ಹಾಗಿದ್ದಾಗ ಮಾತ್ರ ಲಾಭ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಿಮ್ಮ ಉತ್ತರ other way round ಇದೆ. ಯಾವ ಕಾರಣಕ್ಕೂ ಕೂಡ ಲಾಭ ಬರುವುದಿಲ್ಲ. ಬೈಫರ್‌ಕೇಟ್ ಮಾಡಲಿಕ್ಕೆ ಆಗುವುದಿಲ್ಲ. ಲಾಭ ನಷ್ಟ ನೀವು ಈಗ ನೋಡದೇ ಬೈಫರ್‌ಕೇಟ್ ಮಾಡಿ ಈಗ ಲಾಭ ಬಂದೇ ಬರುತ್ತದೆ. ಗುಲ್ಬರ್ಗಾದಲ್ಲೂ ಲಾಭ ಬರುತ್ತದೆ. ಆಗ ಅದು ವಯಬಲ್ ಆಗುತ್ತದೆ. ಈಗ ವಯಬಲ್ ಆಗುವುದಕ್ಕೆ ಸಾಧ್ಯವಿಲ್ಲ. ಆದುದರಿಂದ, ನೀವು ಅಧಿಕಾರಿಗಳಿಗೆ ಜೊತೆಗೆ ಚರ್ಚಿಸಿ ಅದಕ್ಕೆ ಸೆಪರೇಟಾದ ಯೂನಿಯನ್ನ ಮಾಡಿ, ಸೆಪರೇಟಾದ ಸಂಸ್ಕರಣಾ ಘಟಕ ಮಾಡಿದರೆ ಲಾಭವಾಗುತ್ತದೆ ಮತ್ತು ಇದರಿಂದಾ ಹಾಲು ಉತ್ಪಾದನಾ ಹೆಚ್ಚಾಗಿ ರೈತರಿಗೂ ಅನುಕೂಲವಾಗುತ್ತದೆ. ಹೀಗಾಗಿ ತಾವು ಇದರ ಬಗ್ಗೆ ಗಮನಹರಿಸಬೇಕು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಪರಿಶೀಲಿಸುತ್ತೇನೆ.

ಗುಲ್ಬರ್ಗಾ ಜಿಲ್ಲೆಯಲ್ಲಿರುವ ತೊಗರಿ ಬೀಜದ ಅಭಾವದ ಬಗ್ಗೆ

18(301) ಡಾ:ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ)
ಶ್ರೀ ಎಸ್.ವಿ. ರವಿಂದ್ರನಾಥ್ (ಕೃಷಿ ಸಚಿವರು)

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿ ಬೀಜದ ಕೊರತೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಜಿಲ್ಲೆಗೆ, ಬಿತ್ತನೆ ಬೀಜಗಳನ್ನು, ಸರ್ಕಾರಿ ಸ್ವಾಮ್ಯದ ಮತ್ತು ಖಾಸಗಿ ವಲಯದ ಸಂಸ್ಥೆಗಳ ಮುಖಾಂತರ ದೊರಕಿಸಲು ಕ್ರಮ ಕೈಗೊಂಡಿದೆ. ರೈತರಿಗೆ ರಿಯಾಯಿತಿ ದರದಲ್ಲಿ ಬೀಜ ಒದಗಿಸಲು ಸಹ ಕ್ರಮ ಕೈಗೊಳ್ಳಲಾಗಿರುತ್ತದೆ. ಅಲ್ಲದೆ, ರೈತರ ಬಳಿ ದೊರಕಬಹುದಾದ ಗುಣಮಟ್ಟದ ಬಿತ್ತನೆ ಬೀಜಗಳನ್ನು ಗುರುತಿಸಿ ವಿತರಿಸಲು ವ್ಯವಸ್ಥೆ ಮಾಡಲಾಗಿದೆ.

ಗುಲ್ಬರ್ಗಾ ಜಿಲ್ಲೆಯಲ್ಲಿ 2006–07ನೇ ಸಾಲಿನಲ್ಲಿ ಅತಿ ಹೆಚ್ಚು 1883.77 ಕ್ವಿಂ. ಮತ್ತು ಕಡಿಮೆ 962.78 ಕ್ವಿಂ ಬೀಜ 2007–08 ನೇ ಸಾಲಿನಲ್ಲಿ ವಿತರಿಸಲಾಗಿರುತ್ತದೆ. ಇದರ ಆಧಾರದ ಮೇರೆಗೆ, 2009ರ ಮುಂಗಾರು ಹಂಗಾಮಿಗೆ 1625ಕ್ವಿಂ.ಬೀಜ ವಿತರಿಸಲು ಗುರಿ ಹೊಂದಲಾಗಿತ್ತು. ಅದಕ್ಕನುಸಾರವಾಗಿ ಗುಲ್ಬರ್ಗಾ ಜಿಲ್ಲೆಯಲ್ಲಿ ಪ್ರಸ್ತುತ ಮುಂಗಾರು ಹಂಗಾಮಿನಲ್ಲಿ 1605.00 ಕ್ವಿಂ ಈಗಾಗಲೇ ರೈತರಿಗೆ ವಿತರಿಸಲಾಗಿರುತ್ತದೆ. ಹಾಲಿ 230 ಕ್ವಿಂ. ತೊಗರಿ ಬೀಜ ಲಭ್ಯವಿರುತ್ತದೆ.

ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಸಚಿವರು ಉತ್ತರಿಸಿದ್ದಾರೆ. ತಾವು ಬೇಕಾದರೆ ನೋಡಬಹುದು. ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿ ಬೀಜದ ಕೊರತೆ ಇದೆಯೆ ಎಂದರೆ ಹೌದು ಎಂದು ಉತ್ತರಿಸಿದ್ದಾರೆ. ಇದಕ್ಕೆ ಪರಿಹಾರ ಏನು ಹುಡುಕುತ್ತೀರಿ ಎಂದರೆ ಅವರ ಹತ್ತಿರ ಪರಿಹಾರವಿಲ್ಲ. ಪರಿಹಾರ ಏನು ಹೇಳುತ್ತಿದ್ದಾರೆಂದರೆ, ರೈತರಿಗೆ ಎಲ್ಲಿ ಬೀಜ ಇದೆ ಅಲ್ಲಿ ಐಡೆಂಟಿಫೈ ಮಾಡುತ್ತಿದ್ದೇವೆ. ನಂತರ ಹಿಂದಿನ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. 2006–07 ನೇ ಸಾಲಿನಿಂದಲೂ ಪ್ರತಿ ವರ್ಷ 1600, 1700, 1800 ಕ್ವಿಂಟಾಲ್ ಕೊಟ್ಟಿದ್ದೇವೆ, ಹೀಗಾಗಿ ಈ ವರ್ಷವೂ 1600 ಕ್ವಿಂಟಾಲ್ ಕೊಟ್ಟಿದ್ದೇವೆ. 230 ಕ್ವಿಂಟಾಲ್ ತೊಗರಿ ಬೀಜ ಲಭ್ಯವಿರುತ್ತದೆಂದು ಹೇಳಿದ್ದಾರೆ. ಇದು ಸತ್ಯಕ್ಕೆ ದೂರ. ಅಲ್ಲಿ ಒಂದು ಕಾಳು ಬೀಜ ಇಲ್ಲ. ರೈತರು ಆ ಕೇಂದ್ರಗಳಿಗೆ ಹೋಗಿ ಅಲೆದಾಡುತ್ತಿದ್ದಾರೆ ಅಲ್ಲಿ ಯಾವುದೇ ಬೀಜ ಇಲ್ಲ. ನಿಮಗೆ ತಪ್ಪು ಮಾಹಿತಿ ಇದೆ. ಗುಲ್ಬರ್ಗಾ ಜಿಲ್ಲೆಯಲ್ಲಿ 3 ಲಕ್ಷ 30 ಸಾವಿರ ಹೆಕ್ಟೇರ್ ಭೂಮಿಗೆ ಮುಂಗಾರಿನಲ್ಲಿ ತೊಗರಿ ಬಿತ್ತನೆಯಾಗುತ್ತದೆ. ಇದರಲ್ಲಿ 50% ಅಂದರೆ 1 ಲಕ್ಷ 50 ಸಾವಿರ ಹೆಕ್ಟೇರ್ ಮಾತ್ರ ಬಿತ್ತನೆಯಾಗಿದೆ. ಇನ್ನೂ ಬಿತ್ತನೆ ಆಗಬೇಕಾದರೆ ಸುಮಾರು

ಕ್ವಿಂಟಾಲ್ ಬೀಜ ಬೇಕಾಗುತ್ತದೆ. ಕೃಷಿ ಇಲಾಖೆಯಲ್ಲಿ ವೈಜ್ಞಾನಿಕವಾಗಿ ಎಷ್ಟು ಬೀಜ ಬೇಕಾಗುತ್ತದೆ? ಎಷ್ಟು ಬಿತ್ತನೆಯಾಗುತ್ತದೆ? ಎಂದು ಅಸೆಸ್‌ಮೆಂಟ್ ಮಾಡಿಲ್ಲ. ಒಂದು ವೇಳೆ 3 ಲಕ್ಷ 30 ಸಾವಿರ ಹೆಕ್ಟೇರ್ಸ್ ಬಿತ್ತನೆಯಾಗಬೇಕಾದರೆ ಸುಮಾರು 25,000 ಕ್ವಿಂಟಾಲ್ ಬೀಜ ಬೇಕು. ಇಷ್ಟು ಪ್ರಮಾಣದ ಬೀಜ ನೀವು ವ್ಯವಸ್ಥೆ ಮಾಡದೇ ಇದ್ದರೂ standard practices ಎಲ್ಲಿದೆ ಎಂದರೆ ನಿವು 30% ಬೀಜ ಕೊಡಬೇಕು. 70% ರೈತ ತನ್ನಲ್ಲಿ ಇರತಕ್ಕಂಥ ಬೀಜದಿಂದಲೇ ತಾನು ಬಿತ್ತನೆ ಮಾಡಿಕೊಳ್ಳುತ್ತಾನೆ. ನೀವು 25,000 ಕ್ವಿಂಟಾಲ್‌ನಲ್ಲಿ 30% ಎಂದರೆ ಸುಮಾರು 7-8 ಸಾವಿರ ಕ್ವಿಂಟಾಲ್ ಬೀಜದ ವ್ಯವಸ್ಥೆ ಮಾಡಬೇಕಾಗಿತ್ತು. ಆದರೆ ನೀವು 1600 ಕ್ವಿಂಟಾಲ್ ಇಟ್ಟು ಹೆಚ್ಚಿಗೆ ಕೊಡುವುದಕ್ಕೆ ಆಗುವುದಿಲ್ಲವೆಂದರೆ ರೈತರು ಈಗ ಏನು ಮಾಡಬೇಕು? ರೈತರ ಹತ್ತಿರ ಬೀಜ ಇಲ್ಲ. ಇನ್ನೂ 1 ಲಕ್ಷ 50 ಸಾವಿರ ಹೆಕ್ಟೇರ್ ಬಿತ್ತನೆಯಾಗಬೇಕಾಗಿದೆ. ಇದು ಬಹಳ ಗಂಭೀರವಾಗಿರುವುದರಿಂದ ನಾನು ಈ ಮಾತನ್ನು ಹೇಳಬೇಕಾಗುತ್ತದೆ. ನಾನು ಏಕೆ ಹೇಳುತ್ತೇನೆಂದರೆ, ಇಲಾಖೆಯಲ್ಲಿ ಮಾನ್ಯ ಮಂತ್ರಿಗಳು ಜಾಗ್ರತೆಯಿಂದ ಕೆಲಸ ಮಾಡಬೇಕಾಗುತ್ತದೆ. ಈಗ ರೈತ ಸಂಕಷ್ಟದಲ್ಲಿದ್ದಾನೆ. ನೀವು ಮೂರುವರೆ ಲಕ್ಷ ಹೆಕ್ಟೇರ್‌ಗೆ ತೊಗರಿ ಬಿತ್ತನೆ ಮಾಡಬೇಕಾದರೆ ಬೀಜ ಎಷ್ಟು ಬೇಕೆಂದು ನಿಮ್ಮ ಅಸೆಸ್‌ಮೆಂಟ್ ಇಲ್ಲ. ನಿಮ್ಮ ಇಲಾಖೆಯವರು ಫ್ರೀ ಪ್ಲಾನ್ ಮಾಡುವುದಿಲ್ಲ. ಹಿಂದಿನಿಂದಲೂ ಹೀಗೆ ನಡೆದುಕೊಂಡು ಬಂದಿದೆ ಎಂದರೆ ಹಿಂದೆ lacuna ಆಗಿದೆ. ಅದಕ್ಕೆ ನಮ್ಮ ಇಳುವರಿ ಕಡಿಮೆಯಾಗುತ್ತದೆ. ನಿಮ್ಮ ಹತ್ತಿರ ಈಗ ಏನೂ ವಿಕಲ್ಪ ಇಲ್ಲ. ನಮಗೆ ಇನ್ನೂ ಸುಮಾರು 2 ಸಾವರ ಕ್ವಿಂಟಾಲ್ ಬೀಜ ಬೇಕು. ಬೀಜ ಅವರ ಹತ್ತಿರ ಇಲ್ಲ. ಈಗ ಏನು ಮಾಡುತ್ತಾರೆ? ರೈತರು ಅಲ್ಲಿ ಕಷ್ಟದಲ್ಲಿದ್ದಾರೆ ಇದಕ್ಕೆ ಮಾನ್ಯ ಸಚಿವರು ಏನು ಮಾಡುತ್ತಾರೆಂದು ಹೇಳಬೇಕಾಗುತ್ತದೆ.

ಶ್ರೀ ಎಸ್.ಎ.ರವಿಂದ್ರನಾಥ್: ಮಾನ್ಯ ಅಧ್ಯಕ್ಷರೆ, ನಾವು ಹಿಂದಿನ ಮೂರು ವರ್ಷದಲ್ಲಿ ಎಷ್ಟೆಷ್ಟು ಖರ್ಚು ಆಗಿದೆ ಎಂಬುದನ್ನು ನೋಡಿ ನಾವು ಬೀಜ ಸಂಗ್ರಹಣೆ ಮಾಡುತ್ತೇವೆ. ಅಂಕಿ ಸಂಖ್ಯೆಗಳನ್ನು ಹೇಳುವುದಾದರೆ, 2006-07ರಲ್ಲಿ 1883.77 ಕ್ವಿಂಟಾಲ್‌ನಷ್ಟು ಖರ್ಚು ಆಗಿತ್ತು. 2007-08 ರಲ್ಲಿ 967.78 ಕ್ವಿಂಟಾಲ್‌ನಷ್ಟು ಖರ್ಚು ಆಗಿತ್ತು ಇದರ ಆಧಾರದ ಮೇಲೆ 2008-09 ರಲ್ಲಿ 1625 ಕ್ವಿಂಟಾಲ್‌ನಷ್ಟು ಬೀಜ ಅವಶ್ಯಕತೆ ಇದೆ ಎಂದು ಅಂದಾಜು ಮಾಡಿದ್ದು ಅದರಂತೆ 1605 ಕ್ವಿಂಟಾಲ್ ಬೀಜವನ್ನು ಈಗಾಗಲೇ ವಿತರಣೆ ಮಾಡಲಾಗಿದೆ. ಇನ್ನೂ ನಮ್ಮಲ್ಲಿ 230 ಕ್ವಿಂಟಾಲ್ ಬೀಜ ಇದೆ. ಹೀಗಾಗಿ ಅವರು ಯಾವ ಭಾಗಕ್ಕೆ ಬೀಜ ಬೇಕೆಂದು ಹೇಳುತ್ತಾರೆ ಅಲ್ಲಿಗೆ ಕೊಡುವಂಥ ವ್ಯವಸ್ಥೆ ಮಾಡುತ್ತೇವೆ.

ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ನೀವು ಬೀಜ ಇಲ್ಲವೆಂದು ಹೇಳುತ್ತೀರಿ. ಜನರು ನಿರೀಕ್ಷೆ ಮಾಡುತ್ತಿದ್ದಾರೆ. ಹೀಗಾಗಿ ತಾವು ಸ್ಪಷ್ಟವಾಗಿ ಉತ್ತರ ಹೇಳಬೇಕಾಗುತ್ತದೆ. ಅಲ್ಲಿ ಬೀಜದ ಕೊರತೆ ಇದೆ. ಅಲ್ಲಿ ಯಾವ ಬೀಜ ಲಭ್ಯವಿಲ್ಲ. ಇನ್ನು ಮಳೆ ಸಮರ್ಪಕವಾಗಿಲ್ಲ, ನಮ್ಮ ಭಾಗದಲ್ಲಿ ಇನ್ನೂ 50% ಮಳೆ ಆಗಿಲ್ಲ.

ಅಧ್ಯಕ್ಷರು:– ಇನ್ನೂ ಹೆಚ್ಚಿನ ಬೀಜ ವಿತರಣೆ ಮಾಡಬೇಕೆಂದು ಅವರು ಸಲಹೆ ಕೊಟ್ಟಿದ್ದಾರೆ. ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆಂದು ಹೇಳಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:– ಎಲ್ಲಿಂದ ತಂದು ಮಾಡುತ್ತಾರೆಂಬುದನ್ನು ನಮಗೆ ಹೇಳಬೇಕು.

ಶ್ರೀ ಟಿ.ಬಿ.ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ತೊಗರಿ ಬೆಳೆಯನ್ನು ಹೆಚ್ಚಾಗಿ ಬೆಳೆಯಕ್ಕಂಥ ಗುಲ್ಬರ್ಗಾ ಜಿಲ್ಲೆಯಲ್ಲಿಯೇ ಬೀಜ ಸಿಗುತ್ತಿಲ್ಲವೆಂದರೆ, ಇನ್ನು ನಮ್ಮ ಕತೆ ಏನೆಂಬುದರ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ನನ್ನ ಕ್ಷೇತ್ರದಲ್ಲಿ ಕೇವಲ 10–15 ಕ್ವಿಂಟಾಲ್ ಬೀಜ ಕೊಡಿಸುವುದಕ್ಕೆ ಮಾತ್ರ ಸಾಧ್ಯವಾಗಿದೆ. ತೊಗರಿ ಬೀಜಕ್ಕೆ ಇವತ್ತು ಬೇಡಿಕೆ ಇದೆ. ಕಾರಣವೇನೆಂದರೆ, ಇವತ್ತಿನ ದಿವಸ ಮಳೆಯಲ್ಲಿ ವ್ಯತ್ಯಾಸವಾಗಿರುವುದರಿಂದ ಎಲ್ಲಾ ರೈತರು ತೊಗರಿ ಬೆಳೆಯುವುದಕ್ಕೆ ಹೋಗುತ್ತಿದ್ದಾರೆ. ಆದ್ದರಿಂದ, ನನ್ನ ಒಂದು ಸಲಹೆ ಏನೆಂದರೆ, ಸೀಡ್ಸ್ ಕಾರ್ಪೋರೇಷನ್ ಮೂಲಕ ನಿಮಗೆ ಸರ್ಟಿಫೈಡ್ ಸೀಡ್ಸ್ ಸಿಗದೆ ಇರಬಹುದು, ಆದರೆ, ರೈತರ ಹತ್ತಿರ ಇರತಕ್ಕಂಥ ಟ್ರೂತ್‌ಫುಲ್ ಸೀಡ್ಸ್ ನಿಮಗೆ ಸಿಗುತ್ತದೆ. ಇದನ್ನಾದರು ತೆಗೆದುಕೊಂಡು ಹೋಗಿ ಕೊಡಿಸಿ. ಇವತ್ತಿನ ದಿವಸ ಎಲ್ಲಿಯೂ ಕೂಡ ಬೀಜ ಸಿಗುತ್ತಿಲ್ಲ.

ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:– ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಬೀಜದ ಲಭ್ಯತೆ ಎಲ್ಲಿಯೂ ಎಲ್ಲ. ಸರ್ಟಿಫೈಡ್ ಸೀಡ್ಸ್ ಕುಡ ಯಾರ ಹತ್ತಿರ ಇಲ್ಲ. ಆದರೆ, ರೈತರ ಹತ್ತಿರ ಟ್ರೂತ್‌ಫುಲ್ ಸೀಡ್ಸ್ ಇದ್ದರೆ ಅದನ್ನು ಪತ್ತೆ ಹಚ್ಚಿ ಕೊಡಿಸುತ್ತೇವೆಂದು ಹೇಳಿದ್ದಾರೆ. KSSC is the only agency which is supplying seeds. KSSC ರವರು 1600 ಕ್ವಿಂಟಾಲ್ ಟಾರ್ಗೆಟ್ ಇಟ್ಟುಕೊಂಡಿದ್ದರು. ಆದರೆ, ಟಾರ್ಗೆಟ್ ನಿಗದಿ ಮಾಡುವಾಗ ಇದರ ಬಗ್ಗೆ ಗಮನ ಕೊಡಬೇಕಾಗುತ್ತದೆ. ಏಕೆಂದರೆ, ಮುಂದಿನ ವರ್ಷ ಕೂಡ ಇದೇ ಸಮಸ್ಯೆ ಬರಬಹುದು. ಆದ್ದರಿಂದ, ಮುಂದಿನ ವರ್ಷಕ್ಕೆ ಕೊನೇಪಕ್ಷ 6 ಸಾವಿರ ಕ್ವಿಂಟಾಲ್‌ನಷ್ಟು ಟಾರ್ಗೆಟ್ ಇಟ್ಟುಕೊಳ್ಳುವುದಕ್ಕೆ ನಿಮಗೆ ಏನು ಸಮಸ್ಯೆ ಇದೆ ಎಂದು ಹೇಳಬೇಕು? ಮೂರು ವರ್ಷಗಳಿಂದ ಏನು ಕೊಟ್ಟಿದ್ದಾರೆಯೋ ಅದರ ಆಧಾರದ ಮೇಲೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. 3 ವರ್ಷಗಳಲ್ಲಿ ಏಕೆ ಕಡಿಮೆ ಹೋಗಿದೆ ಎಂದರೆ, ರೈತರ ಹತ್ತಿರ ಬೀಜ ಇತ್ತು. ನೀವು ಸಬ್ಸಿಡಿ ಕೊಡುತ್ತಿದ್ದೀರಿ. ಸಬ್ಸಿಡಿ ಮತ್ತು ಮಾರ್ಕೆಟ್ ರೇಟ್ ಒಂದೇ ಇತ್ತು. ಆದ್ದರಿಂದ ರೈತರ್ಯಾರೂ ನಿಮ್ಮ ಹತ್ತಿರ ಬೀಜವನ್ನು ತೆಗೆದುಕೊಂಡಿಲ್ಲ. ಆದರೆ, ಈಗ ಸಬ್ಸಿಡಿಗೂ ಮತ್ತು ಮಾರುಕಟ್ಟೆಯಲ್ಲಿನ ರೇಟ್‌ಗೆ ಬಹಳಷ್ಟು ವ್ಯತ್ಯಾಸ ಇದೆ. ಆದ್ದರಿಂದ, ಮಾನ್ಯ ಸಚಿವರು ಇದಕ್ಕೆ ನಿರ್ದಿಷ್ಟವಾದ ಉತ್ತರ ಕೊಡಬೇಕಾಗುತ್ತದೆ. ಈ ಸಾರಿ ಇನ್ನೂ ಎರಡು ಸಾವರಿ ಕ್ವಿಂಟಾಲ್‌ನ್ನು ಎಲ್ಲಿಂದ ತಂದು ಕೊಡುತ್ತೀರಿ ಎಂಬ ಬಗ್ಗೆ ಕೂಡ ಹೇಳಬೇಕು. ಮುಂದಿನ ವರ್ಷಕ್ಕೆ ಕೆಎಸ್‌ಎಸ್‌ಸಿ ಮೂಲಕ ಬೀಜವನ್ನು ಉತ್ಪಾದನೆ

ಮಾಡುವುದಕ್ಕೆ ನಿಮ್ಮ ಟಾರ್ಗೆಟ್‌ನ್ನು ಜಾಸ್ತಿ ಮಾಡುತ್ತೀರಾ? ಈ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಎಸ್.ಎ.ರವೀಂದ್ರನಾಥ್:– ಮಾನ್ಯ ಅಧ್ಯಕ್ಷರೆ, ಫೌಂಡೇಷನ್ಸ್ ಸೀಡ್ಸ್ ಅಥವಾ ಸರ್ಟಿಫೈಡ್ ಸೀಡ್ಸ್ ಎಷ್ಟು ಅವಶ್ಯಕತೆ ಇದೆಯೋ ಅಷ್ಟು ತಯಾರು ಮಾಡತಕ್ಕಂಥ ಕೆಲಸವನ್ನು ಈ ಸಾರಿ ಮಾಡುತ್ತೇವೆ. ಈಗ ಟ್ರುತ್‌ಫುಲ್ ಲೇಬಲ್‌ನ ಸೀಡ್ಸ್ ಸಂಗ್ರಹಣೆ ಮಾಡಿ ವಿತರಣೆ ಮಾಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ. ಆಂಧ್ರಪ್ರದೇಶ ಅಥವಾ ಇತರೆ ರಾಜ್ಯಗಳಿಂದ ತರಿಸಿ ಕೊಡುತ್ತೇವೆ.

ಅಧ್ಯಕ್ಷರು:– ಮುಂದಿನ ಪ್ರಶ್ನೆ ಮಾನ್ಯ ಕರಡಿ ಸಂಗಣ್ಣ ಅಮರಪ್ಪನವರದು. ಆದರೆ, ತೋಟಗಾರಿಕೆ ಇಲಾಖೆ ಮಂತ್ರಿಗಳು ಬಂದಿದ್ದಾರೆಯೇ? ಮಾನ್ಯ ಸುರೇಶ್ ಕುಮಾರ್‌ರವರೆ, ತೋಟಗಾರಿಕೆ ಇಲಾಖೆ ಮಂತ್ರಿಗಳು ಇಲ್ಲಿ ಕಾಣುತ್ತಿಲ್ಲ.

ಶ್ರೀ ಎಸ್.ಸುರೇಶ್ ಕುಮಾರ್:– ಬರುತ್ತಾರೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ:– ಕಾನೂನು ಮಂತ್ರಿಗಳಿಗೆ ಅವರು ಏನಾದರು ಹೇಳಿದ್ದಾರೆಯೇ?

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಅವರಿಗೆ ಸಂಬಂಧಪಟ್ಟಂಥ ಇಲಾಖೆಯ ಬಗ್ಗೆ ಪ್ರಶ್ನೆ ಬಂದಾಗ ಇಲಾಖೆಯ ಮಂತ್ರಿಗಳು ಇಲ್ಲವೆಂದರೆ ಇವರು ಎಷ್ಟು ಜವಾಬ್ದಾರಿಯಿಂದ ಕೆಲಸ ಮಾಡುತ್ತಿದ್ದಾರೆಂಬುದನ್ನು ತಾವು ಗಮನಿಸಬೇಕು. ಇವತ್ತು ಪ್ರಶ್ನೆ ಇರುವುದನ್ನು ಅವರು ನೋಡಿರುತ್ತಾರೆ. ಆದ್ದರಿಂದ, ಸಂಬಂಧಪಟ್ಟಂಥ ಮಂತ್ರಿಗಳು ಇಲ್ಲಿ ಬಂದು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲವೇ?

ಶ್ರೀ ಎಸ್.ಸುರೇಶ್ ಕುಮಾರ್:– ಖಂಡಿತ ಬರುತ್ತಾರೆ. ಆ ನಂತರ ಸದರಿ ಪ್ರಶ್ನೆಯನ್ನು ತೆಗೆದುಕೊಳ್ಳಿ.

ಶ್ರೀ ಸಿದ್ದರಾಮಯ್ಯ:– ಆಮೇಲೆ ತೆಗೆದುಕೊಳ್ಳುವುದು ಬೇರೆ.

ಶ್ರೀ ಎಸ್.ಸುರೇಶ್ ಕುಮಾರ್:– ಇವತ್ತೇ ತೆಗೆದುಕೊಳ್ಳಲಿ.

ಶ್ರೀ ಸಿದ್ದರಾಮಯ್ಯ:– ಇವತ್ತು ಅಥವಾ ನಾಳೆ ದಿವಸ ತೆಗೆದುಕೊಳ್ಳಲಿ. ಅದರ ಬಗ್ಗೆ ನಾನು ಹೇಳುತ್ತಿಲ್ಲ. ಆದರೆ, ನನ್ನ ಸಲಹೆ ಏನೆಂದರೆ, ಆಯಾಯ ಇಲಾಖೆಯ ಪ್ರಶ್ನೆಗಳಿರುವಾಗ ಸಂಬಂಧಪಟ್ಟಂಥ ಮಂತ್ರಿಗಳು ಇಲ್ಲಿರಬೇಕೆಂದು ತಾವು ಹೇಳಬೇಕು. ಸದಸ್ಯರು ಪ್ರಶ್ನೆ ಬಂದಾಗ ಉತ್ತರ ಪಡೆದುಕೊಳ್ಳುವುದಕ್ಕೆ ಇಲ್ಲಿ ಕಾಯುತ್ತಾ ಕುಳಿತುಕೊಂಡಿರುತ್ತಾರೆ. ಆದ್ದರಿಂದ, ಮಂತ್ರಿಗಳು ಇಲ್ಲಿ ಹಾಜರಿರಬೇಕು.

ಶ್ರೀ ಎಸ್.ಸುರೇಶ್ ಕುಮಾರ್:– ಮಾನ್ಯ ಮಂತ್ರಿಗಳು ಬರುತ್ತಿದ್ದಾರೆ

ಶ್ರೀ ಸಿದ್ದರಾಮಯ್ಯ:– ಅಧಿವೇಶನ ಪ್ರಾರಂಭವಾಗಿ ಎರಡನೇ ದಿವಸವೇ ಅವರು ಬಂದಿಲ್ಲ.

ಶ್ರೀ ಎಸ್.ಸುರೇಶ್ ಕುಮಾರ್:– ಮೊದಲನೇ ದಿವಸ ಏನಾಯಿತ್ತೆಂದು ಇಡೀ ರಾಜ್ಯಕ್ಕೆ ಗೊತ್ತಾಗಿದೆ.

ಶ್ರೀ ಸಿದ್ದರಾಮಯ್ಯ:– No, no, this is not correct. Question hour ಇದೆ ಎಂದು ಅಜೆಂಡಾದಲ್ಲಿದೆ. ಮೊದಲನೇ ದಿನ ಮತ್ತು ಎರಡನೇ ದಿನ ಬೇರೆ ಇರುತ್ತದೆ. ಮಾನ್ಯ ಅಧ್ಯಕ್ಷರೇ, ತಾವು ಅವರಿಗೆ ಸ್ವಲ್ಪ ಸ್ಟ್ರೀಕ್ಟ್ ಆಗಿ ಹೇಳಬೆಕು.

ಅಧ್ಯಕ್ಷರು:– ಮಾನ್ಯ ಮಂತ್ರಿಗಳು ತಡವಾಗಿ ಬರುತ್ತಾರೆಂದು ಹೇಳುತ್ತಿದ್ದಾರೆ. ಅವರು ಏತಕ್ಕೆ ತಡವಾಗಿ ಬರುತ್ತಾರೆಂದು ಅವರು ಪ್ರಶ್ನೆ ಕೇಳಿದರೆ ನಾವು ಉತ್ತರ ಹೇಳುತ್ತೇವೆ. ಏಕೆಂದರೆ, ಹಿಂದೆ ಹೇಳಿರತಕ್ಕಂಥದ್ದನ್ನು ಇನ್ನು ಮಾಡುವುದಕ್ಕೆ ಅವರಿಂದ ಆಗಿಲ್ಲ. ಆದ್ದರಿಂದ, ಅವರು ಬರುತ್ತಿಲ್ಲವಷ್ಟೆ.

ಅಧ್ಯಕ್ಷರು:– ಮಾನ್ಯ ಕರಡಿ ಸಂಗಣ್ಣ ಅಮರಪ್ಪನವರೆ ನಿಮ್ಮ ಪ್ರಶ್ನೆಗೆ ಇವತ್ತೇ ಉತ್ತರ ಕೊಡಿಸುತ್ತೇನೆ. ಮುಂದಿನ ಪ್ರಶ್ನೆ ಮಾನ್ಯ ಕೆ.ಜಿ.ಕುಮಾರಸ್ವಾಮಿಯವರದು ಇದೆ. ಆದರೆ, ಅವರು ಬಂದಿಲ್ಲ. ಮುಂದಿನ ಪ್ರಶ್ನೆ ಮಾನ್ಯ ಎಸ್.ಆರ್.ಮಹೇಶ್‌ರವರದು.

ರಾಜ್ಯದಲ್ಲಿ ರೈತರಿಗೆ ವಿತರಿಸುವ ಬಿತ್ತನೆ ಬೀಜ ಕುರಿತು

21(305) ಶ್ರೀ ಮಹೇಶ್ ಎಸ್.ಆರ್ (ಕೃಷ್ಣರಾಜನಗರ)
ಶ್ರೀ ಎಸ್.ಎ. ರವಿಂದ್ರನಾಥ್ (ಕೃಷಿ ಸಚಿವರು)

ಅ) ರಾಜ್ಯದಲ್ಲಿ ರೈತರಿಗೆ ವಿತರಿಸಲಾಗುತ್ತಿರುವ ಬಿತ್ತನೆ ಬೀಜಗಳ ತಳಿಗಳಾವುವು. ಈ ಬಿತ್ತನೆ ಬೀಜಗಳಲ್ಲಿ ಪೇಟೆಂಟ್ ಪಡೆದ ಬೀಜಗಳ ತಳಿಗಳೆಷ್ಟು;

ರಾಜ್ಯದಲ್ಲಿ ರೈತರಿಗೆ ವಿತರಿಸಲಾಗುತ್ತಿರುವ ಬಿತ್ತನೆ ಬೀಜಗಳ ತಳಿಗಳ ಪಟ್ಟಿಯನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಪೇಟೆಂಟ್ ಪಡೆದ ಬೀಜಗಳಿರುವುದಿಲ್ಲ.

ಆ) ಬಿತ್ತನೆ ಬೀಜಗಳನ್ನು ರೈತರಿಗೆ ವಿತರಿಸಲಾಗುವ ಸಂಸ್ಥೆಗಳಾವುವು; ಆ ಪೈಕಿ ನೊಂದಾಯಿತ ಮತ್ತು ನೊಂದಾಯೇತರ ಸಂಸ್ಥೆಗಳು ಎಷ್ಟು;

ಬಿತ್ತನೆ ಬೀಜ ವಿತರಿಸುವ ಸಂಸ್ಥೆಗಳ ಪಟ್ಟಿಯನ್ನು ಅನುಬಂಧ–2ರಲ್ಲಿ ನೀಡಲಾಗಿದೆ. ಸಂಸ್ಥೆಗಳ ನೊಂದಾವಣೆ ವ್ಯವಸ್ಥೆ ಇರುವುದಿಲ್ಲ.

ಇ) ರೈತರಿಗೆ ಕಳಪೆ ಬಿತ್ತನೆ ಬೀಜ ಸರಬರಾಜು ಮಾಡಿದ ಸಂಸ್ಥೆಗಳು ಯಾವುವು (ವಿವರ ನೀಡುವುದು);

ಇಲ್ಲ.

ಈ) ರೈತರಿಗೆ ಕಳಪೆ ಬಿತ್ತನೆ ಬೀಜ ವಿತರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಲ್ಲ.

ಊ) ಕಳಪೆ ಬೀಜ ಸರಬರಾಜಿನಲ್ಲಿ ಅಧಿಕಾರಿಗಳು ಶಾಮೀಲಾಗಿರುವುದು ನಿಜವೇ;

ಇಲ್ಲ

ಋ) ಹಾಗಿದ್ದಲ್ಲಿ, ತಪ್ಪಿತಸ್ಥರ ವಿರುದ್ಧ ತೆಗೆದುಕೊಂಡ ಕ್ರಮಗಳೇನು?

ಉದ್ಭವಿಸುವುದಿಲ್ಲ.

ಅನುಬಂಧ-1						
ರಾಜ್ಯದಲ್ಲಿ ವಿತರಿಸುವ ಬೆಳೆವಾರು ಸಂಕರ/ತಳಿಗಳ ಪಟ್ಟಿ						
ಕ್ರ ಸಂ	ಬೆಳೆ	ತಳಿ/ಹೈಬ್ರೀಡ್		ಕ್ರ ಸಂ	ಬೆಳೆ	ತಳಿ/ಹೈಬ್ರೀಡ್
1	ಅವರೆ	ಹೆಚ್ ಎ-3			ಸಜ್ಜೆ	ವಿಕಾಸ್
		ಹೆಚ್ ಎ-4				ವಿಕಾಸ್ (ಎನ್ ಬಿ ಜೆ-09)
2	ಸಜ್ಜೆ	9333				ವಿಎಸ್ ಹೆಚ್-53
		8421(ಎಂ.ಹೆಚ್.658)				ಎಕ್ಸ್ ಎಲ್-51
		86 ಎಂ 32		3	ಉದ್ದು	ಟಿ-9
		9533(ಎಂ.ಹೆಚ್-1062)				ಟಿಎಯು-1
		ಎಜಿಸನ್ ಬಿ-38		4	ಹರಳು	ಗಾಚ್-4
		ಎಜಿಸನ್ ಬಿ-54				ಜ್ಯೋತಿ
		ಎಆರ್-6				ಕ್ರಾಂತಿ
		ಅಸೋಕ		5	ಹತ್ತಿ	ಎಜಿಸನ್ 39-2, & 401
		ಎಟಿ-11 ಮತ್ತು ಎಟಿ-27				ಎಟಿ-55
		ಬಿ-2301				ಬಾಬಾ
		ಡಿಬಿಹೆಚ್-739				ಭಾಗ್ಯ
		ದಿವ್ಯ ಎಸ್-88				ಛತ್ರಪತಿ
		ಜಿಕೆ-1004				ಡಿಸಿಹೆಚ್-32
		ಜಿಕೆ-1044				ಡಿಹೆಚ್ ಬಿ-105
		ಜಿಕೆ-1051				ಡಿಹೆಚ್ ಹೆಚ್-11
		ಹನುಮಾನ್				ಧ್ರುವ
		ಐಸಿಟಿಪಿ-8203				ಡೈನಾ
		ಜಿಕೆಬಿಹೆಚ್-26				ಗೋವಿಂದ
		ಕಾಮಧೇನು				ಕೆ-5717

0-1054-55

		ಕಾಂಚನ್ ರಾಣಿ				ಕಾಶಿನಾಥ್
		ಕೆಹೆಚ್ ಬಿ–800				ಮಲ್ಲಿಗೆ
		ಕ್ರಾಂತಿ ಎಸ್–88				ಮಾರುತಿ
		ಲಕ್ಷ್ಮೀ–234				ಎನ್‌ಹೆಚ್ ಹೆಚ್–44
		ಎಂಬಿಹೆಚ್–163/183				ಪಿಎಸಿ–133
		ಎಂಎಲ್‌ಬಿಹೆಚ್–504				ಪವನ್, ಸೂಪರ್ ಪೈಬರ್ e
		ಎಂಆರ್‌ಬಿ–204				ರಾಶಿ ಬಿ–21/201/2000
		ಎನ್‌ಬಿ ಹೆಚ್–105				ಆರ್‌ಸಿಹೆಚ್–2/20/111/144
		ಎನ್‌ಬಿಹೆಚ್–4599(ಪೂಜ)				ಸಂಜು
		ಪಿಎಸಿ–931				ಸೂಪರ್‌ಕಾಟನ್
		ರಾಶಿ2246 ಮತ್ತು 4061				ವರಲಕ್ಷ್ಮಿ
		ರತನ್				ವಿಸಿಹೆಚ್–208
		ಎಸ್‌ಬಿಹೆಚ್ 7173/7178				ವೇದ
		ಎಸ್‌ಬಿಹೆಚ್–40		6	ಅಲಸಂದೆ	ಸಿ–152
		ಸೂಪರ್ ಬಾಸ್				ಕೆಬಿಸಿ
7	ಹೆಸರು	ಪಿಬಿ			ಸಂ. ಜೋಳ	ಶುಭಂ–511
		ಎಸ್‌ಎಂ				ಸುಧಾಮ–333
8	ನೆಲಗಡಲೆ	ಡಿಹೆಚ್–86				ವಿಜೆಹೆಚ್–540
		ಜಿಪಿಬಿಡಿ–4		11	ಮೆಕ್ಕೆ ಜೋಳ	25 ಕೆ 55
		ಜೆಎಲ್–24				30 ಬಿ 07
		ಟಿಎಂವಿ–2				30 ಆರ್ 77
		ವಿಆರ್‌ಐ–2				30 ಆರ್ 88
9	ಸಂಕರ ಭತ್ತ	6444(ಐಇಟಿ 16434 ಮತ್ತು ಹೆಚ್‌ಅರೈ 120)				4640 (ಪ್ರೋ–311)
		ಜಿಕೆ–5006				4642(ಪ್ರೋ–312)

		ಜಿಕೆ–5008				900 ಎಂ–ಗೋಲ್ಡ್
		ಗೋರಕ್‌ನಾಥ್–509				ಎಬಿ–2001/02/04
		ಐಎಚ್‌ಎಸ್– 200004/010/011/01 2				ಎಜಿಸನ್‌ಎಂ–126 ಮತ್ತು ಎಂ–128
		ಜೆಕೆಆರ್‌ಹೆಚ್–401				ಅಲ್ ರೌಂಡರ್
		ಕೆಆರ್ ಹೆಚ್–2				ಎಎಂ–2000ಎಂ
		ಲೋಕನಾಥ್–505				ಅಮೇಜ್
		ಲೋಕನಾಥ್–510				ಎಪಿ–4007
		ಪಿಎಸಿ837, 801				ಎಪಿ–407
		ಪಿಹೆಚ್‌ಬಿ–71				ಎಪಿಎಸ್‌ಎ–91
10	ಸಂಕರ ಜೋಳ	8340				ಬಾನು (ಎಜಿ ಸನ್–95)
		ಏ–2000				ಬಯೋ–9637
		ಎಜಿಸನ್ ಜಿ–28				ಬಯೋ ಮಹಾರಾಜ– ಬಯೋ 52331
		ಅಮನ್				ಬಯೋ ರಾಜ್‌ಕುಮಾರ್
		ಎಟಿ–333				ಬಿಸ್ಕೋ ಭೀಮ್
		ಕಲೋನೆಲ್–6363				ಬಿಸ್ಕೋ ಜಂಬೊ
		ಸಿಎಸ್‌ಹೆಚ್–14				ಬಿಸ್ಕೋ–745
		ಸಿಎಸ್‌ಹೆಚ್–16				ಸಿ–1921
		ಜಿಕೆ–4013				ಚಾಲೆಂಜ್–1
		ಜೆಕೆಎಸ್‌ಹೆಚ್–22				ಸಿಎಂಹೆಚ್–6648
		ಜೆಕೆಎಸ್‌ಹೆಚ್–434 (ಜ್ಯೋತಿ)				ಸಿಪಿ–818
		ಎಂಜೆ–4334				ಸಿಪಿ–848
		ಎಂಆರ್‌ಎಸ್– 4094/4696				ಡಿಕೆ–972 ಪ್ಲಸ್
		ಎಂಎಸ್‌ಹೆಚ್–51				ಡಿಕೆ–984
		ಎನ್‌ಎಸ್‌ಹೆಚ್–18				ಡಿಎಂಹೆಚ್–8255
		ಎನ್‌ಎಸ್‌ಹೆಚ್– 27(ಸೋನಾ)				ಡಿಎಂಹೆಚ್–849
		ಪಿಎಸಿ–501				ಡಿಎಂಹೆಚ್–888
		ಪಿಎಸಿ–537(ಎಹೆಚ್– 505)				ಎಕ್ಸ್‌ಪ್ರಸ್

		ಪಿಎಸ್‌ಹೆಚ್–511 ಮತ್ತು ಪಿಎಸ್‌ಹೆಚ್ 396				ಎಫ್–7013(ಟಿಪ್ ಟಾಪ್)
		ಶಿವಾಜಿ				ಜಿಕೆ–3015
		ಎಸ್‌ಜೆಹೆಚ್–8282				ಜಿಕೆ–3018
	ಮೆಕ್ಕೆಜೊಳ	ಜಿಕೆ–3045			ಮೆಕ್ಕೆಜೊಳ	ಪಿಎಂಹೆಚ್ 540
		ಜಿಕೆ–3057				ಪೋಲೋ
		ಜಿಕೆ–3059				ಪ್ರಬಲ್
		ಹೈಶೆಲ್				ಪ್ರಿಮಿಯರ್
		ಐಎಂಹಚ್–111				ಆರ್‌ಎಂಹೆಚ್–32
		ಇಂದು				ಎಸ್–641
		ಜೆಕೆಎಂಹೆಚ್–1001				ಎಸ್–661
		ಜೆಕೆಎಂಹೆಚ್–2492				ಎಸ್–900M
		ಜೆಕೆಎಂಹೆಚ್–502				ಎಸ್–9681
		ಜೆಎಂಹೆಚ್–203				ಸಂಪನ್(ಪ್ರೋ–371)
		ಕೆ–225				ಸಾಮ್ರಾಟ್ (ಪ್ರೋ–370)
		ಕೆ–244				ಎಸ್‌ಎಟಿ
		ಕೆಹೆಚ್–2001				ಸ್ಕಾರ್ ಪಿಯೋ
		ಕೆಹೆಚ್–2182				ಎಸ್. ಎಂ–1
		ಕೆಹೆಚ್–517				ಎಸ್‌ಎಂಹೆಚ್ 3904/3637/3103
		ಕೆಹೆಚ್–9374				ಎಸ್‌ಎಂಹೆಚ್ 36/42
		ಕೆಹೆಚ್‌ಹೆಚ್‌ಎಂ–101				ಎಸ್‌ಎಂಹೆಚ್–9
		ಕೆಹೆಚ್‌ಹೆಚ್‌ಎಂ–110				ಸೂಪರ್ ಕನಕ
		ಲಕ್ಷ್ಮೀ–4959				ಸುಪ್ರಿಂ
		ಲಕ್ಷ್ಮೀ–999				ಸ್ವರ್ಣ
		ಲಕ್ಷ್ಮೀ–4950				ಟಾಪ್‌ಸ್ಟಾರ್
		ಮಹಾರಾಜ				ಟರ್ಬೊ
		ಮಿರಾಕಲ್				ವಜ್ರ
		ಮಿಸೈಲ್				ವಿಜಯ್
		ಎಂಆರ್‌ಎನ್–3838				ವಿಕ್ರಮ್ –1
		ಎನ್‌ಎಸಿ–6002				ವಿಕ್ರಮ್ –2
		ಎನ್‌ಎಸಿ–6004				ವಿಎಂಹೆಚ್–5/9/18
		ನರೇಂದ್ರ				ವಿಎಂಹೆಚ್–126

		ನಾಥ್‌ಸಾಮ್ರಾಟ್–1008				ವಿಎಂಹೆಚ್–131
		ನಾಥ್ ಸಾಮ್ರಾಟ್–1144		12	ಭತ್ತ	ಅಭಿಲಾಷ್
		ನವೀ–98				ಅತಿರ
		ನಿತ್ಯಶ್ರೀ				ಬಿಪಿಟಿ–5204
		ಎನ್‌ಕೆ–30				ಬಿಆರ್–2655
		ಎನ್‌ಕೆ–6240				ಸಿಟಿಹೆಚ್–1
		ಎನ್‌ಎಂಹೆಚ್–145				ಐಇಟಿ–13901(ತುಂಗ)
		ಎನ್‌ಎಂಹೆಚ್–360				ಐಇಟಿ–7191
		ಪಿಎಸಿ–740, 9735				ಇಂಟಾನ್
		ಪಿಎಂಹೆಚ್–306				ಐಆರ್–30864
		ಪಿಎಂಹೆಚ್–495				ಐಆರ್–64
	ಭತ್ತ	ಜಯ			ಸೂರ್ಯಕಾಂತಿ	ಡಿಕೆ–3849
		ಜೆಜಿಎಲ್–1798				ಜಿಕೆ–2002
		ಜ್ಯೋತಿ				ಕೆ–618
		ಎಂಒ–4				ಕೆ–678 (ಲೀಡರ್)
		ಎಂಟಿಯು–1001				ಕಪಿಲ್
		ಎಂಟಿಯು–1010				ಕೆಬಿಎಸ್‌ಹೆಚ್ KBSH-1
		ರಾಶಿ				ಕೆಬಿಎಸ್‌ಹೆಚ್–41
		ತೆಲ್ಲ ಹಂಸ				ಕೆಬಿಎಸ್‌ಹೆಚ್–44
		ತನು				ಕೆಹೆಚ್‌ಎಸ್–2030
		ಉಮ				ಲಕ್ಷ್ಮೀ–1818
13	ರಾಗಿ	ಜಿಪಿಯು–28				ಲಕ್ಷ್ಮೀ–4455
		ಜಿಪಿಯು–48				ಮಾರ್ಷಲ್–675
		ಹೆಚ್‌ಆರ್–911				ಮಾಕ್ಸ್
		ಇಂಡಾಫ್–5				ಮಾರ್ಡೆನ್
		ಇಂಡಾಫ್–9				ಎಂಎಸ್‌ಎಫ್‌ಹೆಚ್–17
		ಎಂಆರ್–1				ಎನ್‌ಕೆಅರ್ಮೊನಿ(ಎನ್‌ಎಕ್ಸ್ 00997)
		ಎಂಆರ್–2				ಎಂಎಸ್‌ಎಫ್‌ಹೆಚ್–145(ಸ್ವಾತಿ)

		ಪಿ ಆರ್—202				ಎಂಎಸ್‌ಹೆಚ್–160(ಜೆಎಸ್‌ಹೆಚ್–261)
14	ತೊಗರಿ	ಬಿಆರ್‌ಜಿ–1				ಪಿಎಸಿ–336
		ಬಿಎಸ್‌ಎಂಅರ್–736				ಪಿಎಸಿ–361, 3776
		ಹೈ–3ಸಿ				ಪಿಎಸಿ–8699
		ಐಸಿಪಿ–8863				ಎಸ್–461
		ಐಸಿಪಿಎಲ್–87119				ಸತ್ಯ
		ಪಿಟಿ–221				ಎಸ್‌ಬಿ–207
		ಟಿಟಿಬಿ–7				ಎಸ್‌ಬಿ–244
		ಡ್ಬ್ಲ್ಯು ಆರ್‌ಪಿ–1				ಎಸ್‌ಬಿ––275 ಪಿಆರ್ (ಅರೆನಾ)
15	ಸೋಯ ಅವರೆ	ಜೆಎಸ್–335				ಎಸ್‌ಹೆಚ್–177
16	ಸೂರ್ಯ ಕಾಂತಿ	64 ಎಸ್ 99				ಎಸ್‌ಹೆಚ್–416
		ಎಎಎಸ್‌ಎಫ್‌ಟಿ–1, ಅಮರ್ ಸೂರ್ಯ				ಶಾಂತಿ/ಕೀರ್ತಿ
		ಆದಿತ್ಯ				ಎಸ್‌ಎಸ್‌ಎಫ್‌ಹೆಚ್–444
		ಎಜಿಸನ್–110/95/75				ಎಸ್‌ಎಸ್‌ಹೆಚ್–90/48
		ಎಪಿಎಸ್‌ಹೆಚ್–118, 116				ಶುಭಂ–103
		ಎಎಸ್‌ಹೆಚ್(ಮಾನಿಟರ್)				ಸನ್‌ಮ್ಯಾಕ್ಸ್
		ಎಎಸ್‌ಹೆಚ್–100				ಸನ್ನಿ–1
		ಎಟಿ–531				ಸೂರ್ಯ
		ಬಾನು(ಎಜಿಸನ್–95)				ಸೂರ್ಯ ಶಕ್ತಿ
		ಭಾಸ್ಕರ್ (ಪಿಎಸ್‌ಹೆಚ್–234)				ಸೂರ್ಯ ವಂಶಿ
	Sunflower	ಸಿಎಸ್‌ಹೆಚ್–915				ಸೂರ್ಯಕಿರಣ್
	Sunflower	ಡಿಕೆ–3389				ವಿಎಸ್‌ಎಫ್‌ಹೆಚ್–475
						ವಿಎಸ್‌ಹೆಚ್—405

ಅನುಬಂಧ–2

ಬೀಜ ವಿತರಕರ ಪಟ್ಟಿ

ಕ್ರ.ಸಂ	ಹೆಸರು ಮತ್ತು ವಿಳಾಸ
1	ಮೆ// ಅಡ್ವಾಂಟ ಇಂಡಿಯಾ ಲಿಮಿಟೆಡ್
2	ಮೆ// ಎ.ಜಿ.ಸನ್ ಸೀಡ್ಸ್ (ಇಂಡಿಯಾ) ಲಿಮಿಟೆಡ್
3	ಮೆ// ಆಗ್ರೋ ಸೀಡ್ಸ್ ಕಾರ್ಪೊರೇಷನ್
4	ಮೆ// ಆಗ್ರೋ ಸೀಡ್ಸ್ ಕಂಪನಿ
5	ಮೆ// ಅರುಣೋದಯ ಸೀಡ್ಸ್
6	ಮೆ// ಎ.ಪಿ. ಅಗ್ರಿ ಜೆನಿಟಿಕ್ಸ್
7	ಮೆ// ಅಂಕುರ್ ಸೀಡ್ಸ್
8	ಮೆ// ಅಜಿತ್ ಸೀಡ್ಸ್ ಲಿಮಿಟೆಡ್
9	ಮೆ// ಅರುಣ ಸೀಡ್ಸ್ ಪ್ರೈವೇಟ್ ಲಿಮಿಟೆಡ್
10	ಮೆ// ಅಗರ್‌ವಾಲ್ ಆಗ್ರೋ ಏಜೆನ್ಸಿಸ್
11	ಮೆ// ಐಶ್ವರ್ಯ ಸೀಡ್ ಕಂಪನಿ
12	ಮೆ// ಎ.ಎಸ್.ಎನ್ ಅಗ್ರಿ ಜೆನೆಟಿಕ್ಸ್
13	ಮೆ// ಅಮರೇಶ್ವರ ಅಗ್ರಿ-ಟೆಕ್ ಲಿಮಿಟೆಡ್
14	ಮೆ// ಭದ್ರ ಹೈಬ್ರಿಡ್ ಸೀಡ್ಸ್ ಕಂಪನಿ
15	ಮೆ// ಬಿಸ್ಕೋ ಬಯೋ ಸೈನ್ಸಸ್ ಪ್ರೈವೇಟ್ ಲಿಮಿಟೆಡ್
16	ಮೆ// ಬಸವೇಶ್ವರ ಹೈ-ಟೆಕ್ ಸೀಡ್ಸ್
17	ಮೆ// ಬಸವೇಶ್ವರ ಸೀಡ್ಸ್ ಫಾರಂ
18	ಮೆ// ಬೆಯರ್ ಕ್ರಾಪ್ ಸೈನ್ಸಸ್ ಲಿಮಿಟೆಡ್
19	ಮೆ// ಚರೋನ್ ಪಾಕ್ಹೌಂಡ್ ಸೀಡ್ಸ್ ಲಿಮಿಟೆಡ್
20	ಮೆ// ಧಾನ್ಯ ಸೀಡ್ಸ್
21	ಮೆ// ದೇವಗನ್ ಸೀಡ್ಸ್ & ಕ್ರಾಪ್ ಟೆಕ್ನಾಲೋಜಿಸ್
22	ಮೆ// ದಿಶಾ ಕ್ರಾಪ್ ಟೆಕ್ನಾಲೋಜೀಸ್
23	ಮೆ// ಗಂಗಾ ಕಾವೇರಿ ಸೀಡ್ ಪ್ರೈವೇಟ್ ಲಿಮಿಟೆಡ್
24	ಮೆ// ಗ್ರೀನ್ ಗೋಲ್ಡ್ ಅಗ್ರಿಟೆಕ್
25	ಮೆ// ಹೈಟೆಕ್ ಸೀಡ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
26	ಮೆ// ಇಂಡೋ ಅಮೇರಿಕನ್ ಹೈಬ್ರಿಡ್ ಸೀಡ್ಸ್
27	ಮೆ// ಜೆ.ಕೆ.ಅಗ್ರಿ ಜೆನೆಟಿಕ್ಸ್
28	ಮೆ// ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ
29	ಮೆ// ಕಿರಣ್ ಆಗ್ರೋ ಕಾಪೋರೇಷನ್
30	ಮೆ// ಕರ್ನಾಟಕ ಹೈಟೆಕ್ ಆಗ್ರೋ ಎಂಟರ್‌ಪ್ರೈಸಸ್

31	ಮೆ// ಕೆ.ಆರ್.ವಿಜಯಕುಮಾರ್ ಫರ್ಟಿಲೈಸರ್ಸ್ & ಸೀಡ್ಸ್
32	ಮೆ// ಕಾವೇರಿ ಸೀಡ್ಸ್ ಪ್ರೈವೇಟ್ ಲಿಮಿಟೆಡ್
33	ಮೆ// ಕನ್ನಿಕಪರಮೇಶ್ವರಿ ಆಗ್ರೋ ಕೆಮಿಕಲ್ಸ್
34	ಮೆ// ಕೃಷಿಧನ್‌ಸೀಡ್ಸ್ ಲಿಮಿಟೆಡ್
35	ಮೆ// ಕರ್ನಾಟಕ ಸೀಡ್ಸ್ ಕಂಪನಿ
36	ಮೆ// ಕಿಸಾನ್ ಬೀಜ ನಿಗಮ
37	ಮೆ// ಕಂಚನ್ ಗಂಗಾ ಸೀಡ್ ಕಂಪನಿ ಪ್ರೈವೇಟ್ ಲಿಮಿಟೆಡ್
38	ಮೆ// ಕೃಷಿ ಸೀಡ್ ಇಂಡಸ್ಟ್ರೀಸ್
39	ಮೆ// ಲಕ್ಷ್ಮೀ ಸೀಡ್ಸ್ & ಫಾರಂ
40	ಮೆ// ಮಹಾರಾಷ್ಟ್ರ ರಾಜ್ಯ ಬೀಜ ನಿಗಮ ನಿಯಮಿತ
41	ಮೆ// ಮೊನ್ಸಾಂಟೋ ಇಂಡಿಯಾ ಲಿಮಿಟೆಡ್
42	ಮೆ// ಮಹಿಕೋ ಸೀಡ್ಸ್ ಕಂಪನಿ
43	ಮೆ// ಮಲ್ಲಿಕಾರ್ಜುನ ಸೇಲ್ಸ್ ಕಾರ್ಪೋರೇಷನ್
44	ಮೆ// ಮಹಾಧನ್ ಸೀಡ್ಸ್ ಲಿಮಿಟೆಡ್
45	ಮೆ// ಮಿತ್ರಾ ಆಗ್ರೋ ಕಾರ್ಪೋರೇಷನ್
46	ಮೆ// ಎಮ್ & ಎಮ್ ಏಜೆನ್ಸಿಸ್
47	ಮೆ// ರಾಷ್ಟ್ರೀಯ ಬೀಜ ನಿಗಮ
48	ಮೆ// ನುಜಿವೀಡು ಸೀಡ್ಸ್ ಪ್ರೈವೇಟ್ ಲಿಮಿಟೆಡ್
49	ಮೆ// ನಾಥ್ ಬಯೋಜೀನ್ ಇಂಡಿಯಾ ಲಿಮಿಟೆಡ್
50	ಮೆ// ನೂಸನ್ ಜೆನೆಟಿಕ್ ರಿಸರ್ಚ್ ಲಿಮಿಟೆಡ್
51	ಮೆ// ನೂಸನ್ ಪ್ರೈವೇಟ್ ಲಿಮಿಟೆಡ್
52	ಮೆ// ಪ್ರಧಮ್ ಬಯೋಟೆಕ್ ಲಿಮಿಟೆಡ್
53	ಮೆ// ಪಿ.ಎಚ್.ಐ ಸೀಡ್ಸ್ ಲಿಮಿಟೆಡ್
54	ಮೆ// ಪಟಾರು ಅಗ್ರಿ ಬಯೋಟೆಕ್ ಲಿಮಿಟೆಡ್
55	ಮೆ// ಪ್ರಭಾತ್ ಅಗ್ರಿ ಬಯೋಟೆಕ್
56	ಮೆ// ಪಾಟೀಲ್ ಆಗ್ರೋ ಸರ್ವಿಸಸ್
57	ಮೆ// ಪ್ರವರ್ಧನ್ ಸೀಡ್ಸ್
58	ಮೆ// ಪ್ರಭಾತ್ ಹೈಟೆಕ್ ಸೀಡ್ಸ್
59	ಮೆ// ರಾಶಿ ಸೀಡ್ಸ್ ಲಿಮಿಟೆಡ್
60	ಮೆ// ರೋಹಿಣಿ ಸೀಡ್ಸ್ ಪ್ರೈವೇಟ್ ಲಿಮಿಟೆಡ್
61	ಮೆ// ಶಕ್ತಿ ಸೀಡ್ಸ್ ಲಿಮಿಟೆಡ್
62	ಮೆ// ಶೇಖರ್ ಆಗ್ರೋ ಇಂಡಸ್ಟ್ರೀಸ್

63	ಮೆ// ಸೇಠಿ ಸೀಡ್ಸ್ ಕಂಪನಿ
64	ಮೆ// ಸಾಗರ್ ಸೀಡ್ಸ್
65	ಮೆ// ಸಿಂಜೆಂಟ ಇಂಡಿಯಾ ಲಿಮಿಟೆಡ್
66	ಮೆ// ಸ್ವಾಗತ್ ಸೀಡ್ಸ್ ಪ್ರೈವೇಟ್ ಲಿಮಿಟೆಡ್
67	ಮೆ// ಶ್ರೀ ರಾಜರಾಜೇಶ್ವರಿ ಸೀಡ್ಸ್
68	ಮೆ// ಸೋಮನಾಥ ಸೀಡ್ಸ್
69	ಮೆ// ಸಾಯಿ ಆಗ್ರೋ ಸಿಂಡಿಕೇಟ್
70	ಮೆ// ಶ್ರೀ ಸಿದ್ದೇಶ್ವರ ಏಜೆನ್ಸಿಸ್
71	ಮೆ// ಸೂಪರ್ ಅಗ್ರಿ ಸೀಡ್ಸ್ ಪ್ರೈವೇಟ್ ಲಿವಿಟೆಡ್
72	ಮೆ// ಶ್ರೀ ಯರಗುಂಟೇಶ್ವರ ಆಗ್ರಿಟೆಕ್
73	ಮೆ// ಸೀಮ ಹತ್ತಿ ಅಭಿವೃದ್ಧಿ ಮತ್ತು ಸಂಶೋಧನಾ ಸಂಘ
74	ಮೆ// ಶ್ರೀ ಅಮರೇಶ್ವರ ಹೈಬ್ರಿಡ್ ಸೀಡ್ಸ್
75	ಮೆ// ಸಂಧ್ಯಾ ಏಜೆನ್ಸಿಸ್
76	ಮೆ// ಸ್ನೇಹಾ ಬಯೋ ಸೈನ್ಸಸ್ ಲಿಮಿಟೆಡ್
77	ಮೆ// ಶ್ರೀ ಗೌರಿ ಶಂಕರ್ ಆಗ್ರೋ ಇನ್‌ಪುಟ್ಸ್
78	ಮೆ// ಶ್ರೀ ದುಂಡಿ ಬಸವೇಶ್ವರ ಆಗ್ರೋ ಕೇಂದ್ರ
79	ಮೆ// ಶ್ರೀ ರಾಮ ಬಯೋ ಸೀಡ್ ಜೆನೆಟಿಕ್ಸ್
80	ಮೆ// ಶಾಂತಿ ಟ್ರೇಡಿಂಗ್ ಕಂಪನಿ
81	ಮೆ// ಸಿಂಹಾದ್ರಿ ಆಗ್ರೋ ಸೀಡ್ಸ್
82	ಮೆ// ಶಿವ ಸೀಡ್ಸ್ ಫಾರಂ
83	ಮೆ// ಸೂರಜ್ ಸೀಡ್ಸ್ ಪ್ರೈವೇಟ್ ಲಿಮಿಟೆಡ್
84	ಮೆ// ಸಿದ್ಧಾರ್ಥ ಸೀಡ್ಸ್ ಕಂಪನಿ
85	ಮೆ// ಶ್ರೀ ರಾಜಲಕ್ಷ್ಮೀ ಸೀಡ್ಸ್
86	ಮೆ// ಶ್ರೀ ಅರುಣ ಆಗ್ರೋ ಏಜೆನ್ಸಿಸ್
87	ಮೆ// ಶ್ರೀ ವೆಂಕಟೇಶ್ವರ ಹೈಬ್ರಿಡ್ ಸೀಡ್ಸ್
88	ಮೆ// ಶ್ರೀ ಮಾಲತೇಶ್ ಕೃಷಿ ಕೇಂದ್ರ
89	ಮೆ// ತುಳಸಿ ಸೀಡ್ಸ್ ಪ್ರೈವೇಟ್ ಲಿಮಿಟೆಡ್
90	ಮೆ// ಯುನೀಫಾಸ್ ಸೀಡ್ಸ್ & ಬಯೋ ಜೆನೆಟಿಕ್ಸ್
91	ಮೆ// ಉಗಲಾಟದ & ಕಂಪನಿ
92	ಮೆ// ವಿಶಾಲ್ ಸೀಡ್ಸ್ ಪ್ರೈವೇಟ್ ಲಿಮಿಟೆಡ್
93	ಮೆ// ವರದ ಸೀಡ್ಸ್ ಫಾರಂ
94	ಮೆ// ವಾಣಿ ಹೈಬ್ರಿಡ್ ಸೀಡ್ ಕಂಪನಿ

95	ಮೆ// ವರುಣ್ ಹೈಬ್ರಿಡ್ ಸೀಡ್ಸ್
96	ಮೆ// ವಿಗರ್ ಅಗ್ರಿಟೆಕ್ ಸೀಡ್ಸ್
97	ಮೆ// ವಿಕ್ಕೀಸ್ ಅಗ್ರಿ ಸೈನ್ಸಸ್ ಪ್ರೈವೇಟ್ ಲಿಮಿಟೆಡ್
98	ಮೆ// ವರದ ಆಗ್ರೋ ಸರ್ವಿಸಸ್
99	ಮೆ// ವಿಭಾ ಆಗ್ರೋಟೆಕ್ ಲಿಮಿಟೆಡ್
100	ಮೆ// ವಿಕ್ಟರಿ ಸೀಡ್ಸ್
101	ಮೆ// ಯಾಗಂಟಿ ಸೀಡ್ಸ್ ಪ್ರೈವೇಟ್ ಲಿಮಿಟೆಡ್
102	ಮೆ// ಜುವಾರಿ ಸೀಡ್ಸ್ ಲಿಮಿಟೆಡ್

ಶ್ರೀ ಎಸ್.ಅರ್.ಮಹೇಶ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿಕೊಟ್ಟಿದ್ದಾರೆ. ರೈತರಿಗೆ ಯಾವುದೇ ಸಂಸ್ಥೆಗಳು ಕಳಪೆ ಬೀಜವನ್ನು ಸರಬರಾಜು ಮಾಡುತ್ತಿಲ್ಲವೆಂದು ಹೇಳಿದ್ದಾರೆ. ಆದರೆ, ಎಲ್ಲರಿಗೂ ಗೊತ್ತಿರುವ ಪ್ರಕಾರ ಇವತ್ತಿನ ದಿವಸ ರಾಜ್ಯದಲ್ಲಿ ರೈತರು ಬಿತ್ತನೆ ಮಾಡತಕ್ಕಂಥ ಬಿತ್ತನೆ ಬೀಜದಲ್ಲಿ ಅರ್ಧದಷ್ಟು ಕೂಡ ಹುಟ್ಟುತ್ತಿಲ್ಲ. ಕಳಪೆ ಬಿತ್ತನೆ ಬೀಜವನ್ನು ನಾವು ಸರಬರಾಜು ಮಾಡಿಲ್ಲವೆಂದು ನೇರವಾಗಿ ಹೇಳಿದ್ದಾರೆ. ಇವತ್ತಿನ ದಿವಸ ಇಡೀ ಕರ್ನಾಟಕ ರಾಜ್ಯದಲ್ಲಿ 102 ಸಂಸ್ಥೆಗಳು ಬಿತ್ತನೆ ಬೀಜವನ್ನು ಸರಬರಾಜು ಮಾಡುತ್ತಿವೆ. ಕರ್ನಾಟಕ ರಾಜ್ಯ ಬೀಜ ನಿಗಮವೆಂದು ನಮ್ಮಲ್ಲಿ ಸರ್ಕಾರದ ಒಂದು ಅಂಗ ಸಂಸ್ಥೆ ಇದೆ. ಅದರಲ್ಲಿರಕ್ಕಂಥ ಶೇರುದಾರರನ್ನು ಹೊಸದಾಗಿ ನೋಂದಾವಣೆ ಮಾಡತಕ್ಕಂಥ ಕೆಲಸ ಆಗಿಲ್ಲ. ಅಂದರೆ, ಇಲ್ಲಿಗೆ ಬೀಜವನ್ನು ಕೊಡತಕ್ಕಂಥ ರೈತರನ್ನು ಹೊಸದಾಗಿ ನೋಂದಾವಣೆ ಮಾಡತಕ್ಕಂಥ ಕೆಲಸ ಸರ್ಕಾರದ ವತಿಯಿಂದ ಆಗುತ್ತಿಲ್ಲ. ಸುಮಾರು 10–15 ವರ್ಷಗಳ ಹಿಂದೆ ಭೂಮಾಲೀಕರಾದಂಥ ರೈತರನ್ನು ಇಲ್ಲಿಗೆ ನೋಂದಾವಣೆ ಮಾಡಿಕೊಂಡಿದ್ದಾರೆ. ಆ ಸಂದರ್ಭದಲ್ಲಿ ನೋಂದಾವಣೆ ಮಾಡಿಕೊಂಡಿರತಕ್ಕಂಥ ಸುಮಾರು ಜನ ರೈತರು ಭೂಮಿಯನ್ನು ಮಾರಾಟ ಮಾಡಿಕೊಂಡಿದ್ದಾರೆ. ಅವರ ಹೆಸರಿನಲ್ಲಿ ಖಾತೆಗಳು ಸಹ ಇರುವುದಿಲ್ಲ. ಆದರೆ, ಅಂಥವರೂ ಸಹ ಕರ್ನಾಟಕ ರಾಜ್ಯ ಬೀಜ ನಿಗಮಕ್ಕೆ ಬೀಜವನ್ನು ಕೊಟ್ಟು ಹಣವನ್ನು ನಿಗಮದಿಂದ ತೆಗೆದುಕೊಳ್ಳುವಂಥದ್ದನ್ನು ನಾವು ಇವತ್ತಿನ ದಿವಸ ನೋಡುತ್ತಿದ್ದೇವೆ. ಆದ್ದರಿಂದ, ಇಡೀ ರಾಜ್ಯದ ರೈತರು ಏನಿದ್ದಾರೆ ಅವರೆಲ್ಲರಿಗೂ ಹೊಸದಾಗಿ ನೋಂದಾವಣೆ ಮಾಡುವುದಕ್ಕೆ ದಯಮಾಡಿ ಅವಕಾಶ ಮಾಡಿಕೊಡಿ ಎಂದು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತಿದ್ದೇನೆ.

ಶ್ರೀ ಎಸ್.ಎ.ರವೀಂದ್ರನಾಥ್:– ಬೀಜ ನಿಗಮದಲ್ಲಿ ನೋಂದಾವಣೆ ಮಾಡುವುದರ ಬಗ್ಗೆ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಮುಂದಿನ ದಿನಗಳಲ್ಲಿ ನೋಂದಾವಣೆ ಕೆಲಸವನ್ನು ಮಾಡಲಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ:– ನೋಂದಾವಣೆ ವ್ಯವಸ್ಥೆ ಇರುವುದಿಲ್ಲವೆಂದು ಉತ್ತರದಲ್ಲಿ ಹೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಎಷ್ಟೋ ಖಾಸಗಿ ಸಂಸ್ಥೆಗಳು ಬಿತ್ತನೆ ಬೀಜವನ್ನು ಉತ್ಪಾದನೆ ಮಾಡಿ ಮಾರಾಟ ಮಾಡುತ್ತಿದ್ದಾರೆ. ಈ ಸಂಸ್ಥೆಗಳನ್ನು ಸರ್ಕಾರ ನೋಂದಾವಣೆ ಮಾಡಿಕೊಳ್ಳದೆ ಇದ್ದರೆ ಅವರು ಯಾವ ಆಧಾರದ ಮೇಲೆ ಕರ್ನಾಟಕ ರಾಜ್ಯದಲ್ಲಿ ಬಿತ್ತನೆ ಬೀಜವನ್ನು ಮಾರಾಟ ಮಾಡುತ್ತಿದ್ದಾರೆ? ಇಲ್ಲಿ ಬೀಜ ಮಾರಾಟ ಮಾಡುವುದಕ್ಕೆ ಸರ್ಕಾರದಿಂದ ಏನಾದರೂ ಅಂದರೆ, ಬೀಜ ಮಾರಾಟ ಮಾಡಲು ಮಾನ್ಯತೆ ಅಥವಾ ರಿಜಿಸ್ಟ್ರೇಷನ್ ಮಾಡಿಕೊಂಡಿರಬೇಕಲ್ಲವೇ? ಸರ್ಕಾರ ಅವರನ್ನು ಯಾವುದಾದರೊಂದು ಹಿಡಿತದಲ್ಲಿ ಇಟ್ಟುಕೊಂಡಿರಬೇಕಲ್ಲವೇ? ಕರ್ನಾಟಕ ರಾಜ್ಯದಲ್ಲಿ ಖಾಸಗಿ ಸಂಸ್ಥೆಗಳು ಸುಮಾರು 90%ನಷ್ಟು ಹೈಬ್ರೀಡ್ ಬೀಜವನ್ನು ಉತ್ಪಾದನೆ ಮಾಡಿ ಮಾರಾಟ ಮಾಡುತ್ತಿದ್ದಾರೆ. ಆದರೆ, ಈ ಸಂಸ್ಥೆಗಳನ್ನು ನಾವು ನೋಂದಾವಣೆ ಮಾಡಿಕೊಳ್ಳುವ ವ್ಯವಸ್ಥೆಯೇ ಇಲ್ಲವೆಂದರೆ ಹೇಗೆ?

ಶ್ರೀ ಎಸ್.ಎ.ರವೀಂದ್ರನಾಥ್:– ಮಾನ್ಯ ಅಧ್ಯಕ್ಷರೆ, ಅವರನ್ನು ನೋಂದಾವಣೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ. ಮೊದಲು ಬೀಡರ್ ಸೀಡ್ಸ್ ಬಳಕೆ ಮಾಡಿ ಫೌಂಡೇಷನ್ ಸೀಡ್ಸ್ ಬೆಳೆಯುತ್ತಾರೆ. ಆನಂತರ ಫೌಂಡೇಷನ್ ಸೀಡ್ಸ್‌ನ್ನು ಬಳಕೆ ಮಾಡಿಕೊಂಡು ಸರ್ಟಿಫೀಕೇಟ್ ಸೀಡ್ಸ್‌ನ್ನು ಉತ್ಪಾದನೆ ಮಾಡುತ್ತಾರೆ. ಇದು ಆದಮೇಲೆ ಮತ್ತೆ ಏನಾದರೂ ಬೀಜದ ಕೊರತೆ ಯಾದಾಗ ಟ್ರೂತ್‌ಫುಲ್ ಲೇಬಲ್‌ನ ಬೀಜವನ್ನು ಮಾರಾಟ ಮಾಡುತ್ತಾರೆ. ಈ ರೀತಿಯಾದ ವ್ಯವಸ್ಥೆ ಇಡೀ ರಾಜ್ಯದಲ್ಲಿದೆ.

ದಾಳಿಂಬೆ ಬೆಳೆಗೆ ದುಂಡಾಣು ರೋಗ ಹರಡಿರುವ ಬಗ್ಗೆ

19(40) ಶ್ರೀ ಕರಡಿ ಸಂಗಣ್ಣ ಅಮರಪ್ಪ(ಕೊಪ್ಪಳ)
ಶ್ರೀ ವಿ. ಉಮೇಶ್‌ಕತ್ತಿ (ಮಾನ್ಯ ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು)

ಅ) ರಾಜ್ಯದಲ್ಲಿ ದಾಳಿಂಬೆ ಬೆಳೆ ಬೆಳೆಯುವ ಜಿಲ್ಲೆಗಳು ಎಷ್ಟು ಹಾಗೂ ಯಾವುವು (ವಿವರಗಳನ್ನು ನೀಡುವುದು);

ಹನ್ನೊಂದು

ಅವುಗಳ ವಿವರಗಳು ಕೆಳಗಿನಂತಿವೆ.

ಕ್ರ. ಸಂ.	ಜಿಲ್ಲೆಗಳು	ವಿಸ್ತೀರ್ಣ (ಹೆಕ್ಟೇರ್)
1	ಕೊಪ್ಪಳ	3580
2	ಬಳ್ಳಾರಿ	1340

3	ಬಾಗಲಕೋಟೆ	2196
4	ಬಿಜಾಪುರ	1336
5	ತುಮಕೂರು	1613
6	ಚಿತ್ರದುರ್ಗ	1644
7	ಬೆಳಗಾಂ	377
8	ಗದಗ	213
9	ಬೀದರ್	58
10	ದಾವಣಗೆರೆ	119
11	ರಾಯಚೂರು	1259
	ಒಟ್ಟು	13735

ಅ) ಈ ದಾಳಿಂಬೆ ಬೆಳೆಗೆ ದುಂಡಾಣು ರೋಗ ಹರಡಿರುವುದರಿಂದ ರೈತರಿಗೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು

ಇ) ಹಾಗಿದ್ದಲ್ಲಿ, ದುಂಡಾಣು ರೋಗವನ್ನು ತಡೆಗಟ್ಟಲು ಕೈಗೊಂಡ ಕ್ರಮಗಳೇನು;

ಕೈಗೊಂಡ ಕ್ರಮಗಳು ಈ ಕೆಳಕಂಡಂತಿವೆ;

1. ರಾಷ್ಟ್ರೀಯ ತೋಟಗಾರಿಕೆ ಮಿಷನ್ (National Horticulture Mission) ಯೋಜನೆ ಅಡಿಯಲ್ಲಿ ದಾಳಿಂಬೆ ದುಂಡಾಣು ರೋಗ ನಿಯಂತ್ರಣಕ್ಕಾಗಿ ಉತ್ತಮ ನಿರ್ವಹಣಾ ಪದ್ಧತಿಗಳನ್ನು (Good Management Practices) ಅನುಸರಿಸಲು ರೈತರಿಗೆ ಪ್ರತಿ ಹೆಕ್ಟೇರಿಗೆ ರೂ. 25,000/- ದಂತೆ 2007-08 ಮತ್ತು 2008-09ನೇ ಸಾಲಿನಲ್ಲಿ ಸಹಾಯಧನವನ್ನು 4 ಹೆಕ್ಟೇರ್‌ವರೆಗೆ ನೀಡಲಾಗಿದೆ.
2. ದುಂಡಾಣು ರೋಗದ ನಿಯಂತ್ರಣೆಗೆ ಸಮೀಕ್ಷೆ (Survey), ಕಣ್ಗಾವಲು (Surveilance), ತರಬೇತಿ (Training), ಪ್ರಾತ್ಯಕ್ಷಿಕೆ (Demonstration) ಮತ್ತು ರೋಗ ಮುನ್ಸೂಚನೆ ವ್ಯವಸ್ಥೆ (Disease Forecasting) ಕಲ್ಪಿಸಲು ಜಾಲವನ್ನು ರೂಪಿಸಲಾಗಿರುತ್ತದೆ.
3. ರಾಜ್ಯ ಸರ್ಕಾರದ ವತಿಯಿಂದ ದುಂಡಾಣು ರೋಗದ ಬಗ್ಗೆ ಹೆಚ್ಚಿನ ಸಂಶೋಧನೆ ಕೈಗೊಂಡು ನಿಯಂತ್ರಣಕ್ಕೆ ಪರಿಣಾಮಕಾರಿ ನಿವಾರಣೋಪಾಯಗಳನ್ನು ಕಂಡಿ ಹಿಡಿಯಲು ರೂ. 100 ಲಕ್ಷಗಳನ್ನು

ಕೃಷಿ ವಿಶ್ವವಿದ್ಯಾನಿಲಯ, ಧಾರವಾಡರವರಿಗೆ ಮಂಜೂರು ಮಾಡಲಾಗಿದೆ (2007–08 ರಿಂದ 2009–10 ರವರೆಗೆ).

ಈ) ಕೇಂದ್ರ ಸರ್ಕಾರ ಈ ರೋಗವನ್ನು ತಡೆಗಟ್ಟಲು ವಿಶೇಷ ಪ್ಯಾಕೇಜ್ ಘೋಷಣೆ ಮಾಡಿದೆಯೇ;

ಹೌದು, 2007–08 ಮತ್ತು 2008–09ರ ಸಾಲಿನ 2 ವರ್ಷಗಳ ಅವಧಿಗೆ ವಿಶೇಷ ಪ್ಯಾಕೇಜ್ ಜಾರಿಯಲ್ಲಿತ್ತು.

ಉ) ಹಾಗಿದ್ದಲ್ಲಿ, ಈ ಯೋಜನೆಯು ರಾಜ್ಯದಲ್ಲಿ ಜಾರಿಯಲ್ಲಿದೆಯೇ, ಈ ರೋಗವನ್ನು ತಡೆಗಟ್ಟಲು ಕೈಗೊಂಡ ಕ್ರಮಗಳೇನು?

ವಿವರಗಳು ಮೇಲೆ 'ಇ' ನಲ್ಲಿರುವಂತೆ

ಶ್ರೀ ಕರಡಿ ಸಂಗಣ್ಣ ಅಮರಪ್ಪ:– ಮಾನ್ಯ ಅಧ್ಯಕ್ಷರೆ, ದಾಳಿಂಬೆ ಬೆಳೆಗೆ ಬರುವ ದುಂಡಾಣು ರೋಗವನ್ನು ನಾಶಪಡಿಸಬೇಕೆಂದು ಕೇಂದ್ರ ಸರ್ಕಾರ 2007–08 ಮತ್ತು 2008–09ನೇ ಸಾಲಿನಲ್ಲಿ ಒಂದು ಪ್ಯಾಕೇಜ್‌ನ್ನು ಘೋಷಣೆ ಮಾಡಿದರು. ಆ ಪ್ಯಾಕೇಜ್‌ನ ಹಣವನ್ನು ಕೇಂದ್ರ ಸರ್ಕಾರದವರು ವಿತರಣೆ ಮಾಡಿದ್ದಾರೆ. ರಾಜ್ಯ ಸರ್ಕಾರದ ಪಾಲು ಕೂಡ ಅದರಲ್ಲಿ ಇದೆ. ಆ ಕಾರಣಕ್ಕಾಗಿ ರಾಜ್ಯ ಸರ್ಕಾರದ ಪಾಲಿನ ಹಣ ಅಂದರೆ, ರೈತರಿಗೆ ಕೊಡತಕ್ಕಂಥ ಸಹಾಯಧನವನ್ನು ಇದುವರೆಗೆ ಏಕೆ ವಿತರಣೆ ಮಾಡಲಿಲ್ಲವೆಂಬುದು ನನ್ನ ಪ್ರಶ್ನೆಯಾಗಿದೆ. ಮತ್ತೆ ಆ ರೋಗವನ್ನು ಹತೋಟಿಯಲ್ಲಿಡುವುದಕ್ಕೆ ಏನು ಕಾರ್ಯಕ್ರಮಗಳನ್ನು ಈ ಸರ್ಕಾರದವರು ಹಾಕಿಕೊಂಡಿದ್ದಾರೆಂದು ಮತ್ತು ಆ ಬೆಳೆಯನ್ನು ಉಳಿಸತಕ್ಕಂಥ ವಿಚಾರ ಸರ್ಕಾರದ ಮುಂದೆ ಇದೆಯೇ ಎಂಬುದು ನನ್ನ ಪ್ರಶ್ನೆಯಾಗಿದೆ. ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಸರ್ಕಾರದ ಕಡೆಯಿಂದ ಬಯಸುತ್ತೇನೆ.

ಶ್ರೀ ಉಮೇಶ್ ವಿ.ಕತ್ತಿ:– ಮಾನ್ಯ ಸಭಾಧ್ಯಕ್ಷರೆ, ಈ ದಾಳಿಂಬೆ ಬೆಳೆಗೆ ದುಂಡಾಣು ರೋಗ ಕೊಪ್ಪಳ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ವಿಶೇಷವಾಗಿ ಹರಡಿದೆ. 2007–08 ಮತ್ತು 2008–09ನೇ ಸಾಲಿನಲ್ಲಿ ಈ ರೋಗ ಸಾಕಷ್ಟು ಹರಡಿ ದಾಳಿಂಬೆ ಬೆಳೆಗೆ ತೊಂದರೆಯಾಗಿದ್ದು ನಿಜ. ಕೇಂದ್ರ ಸರ್ಕಾರ 25%ನಷ್ಟು ಹಣಕಾಸಿನ ಸಹಾಯವನ್ನು ಒದಗಿಸಿ ಆ ರೋಗವನ್ನು ತಡೆಯುವುದಕ್ಕೆ ಪ್ರಯತ್ನ ಮಾಡಿರತಕ್ಕಂಥ

11-30 PM

ಮಾಹಿತಿ ಮಾನ್ಯ ಸದಸ್ಯರಿಗೆ ಗೊತ್ತಿದೆ. ಅದೇ ರೀತಿ ರೈತನು ತನ್ನದೇ ಆದಂಥ 25% ಹಣ ಅವನು ಹಾಕಬೇಕು ಎನ್ನುವಂಥ ಕಾರ್ಯಕ್ರಮ ಇದೆ. ಅದರ ಜೊತೆಗೆ ರಾಜ್ಯ ಸರ್ಕಾರ ತನ್ನದೇ ಆದ ಪಾಲನ್ನು 2.500 ರೂ.ಗಳನ್ನು ಕೊಡಬೇಕಾದಂಥ ಕಾರ್ಯಕ್ರಮ ಈ ಯೋಜನೆಯಲ್ಲಿ ಜಾರಿಯಲ್ಲಿದೆ. ಆದರೆ ಆ ರೋಗ ಬಂದಂಥ ಸಂದರ್ಭದಲ್ಲಿ ಕೆಲವು ರೈತರು ರೋಗ ಬಂದ ತಕ್ಷಣ ಈ ದಾಳಿಂಬೆ ಬೆಳೆಯನ್ನು ಕಿತ್ತು ಹಾಕಿದರು. ಆ ರೋಗ ಬಂದಂಥ ಸಂದರ್ಭದಲ್ಲಿ ಈ ದುಂಡಾಣು ರೋಗಕ್ಕೆ ಔಷದಿ ಸಿಂಪಡಿಸಲಿಕ್ಕೆ ಸಹಾಯಧನ ಕೊಡಬೇಕಾಗಿತ್ತು. ಆವತ್ತಿನ ದಿವಸ ಸರ್ಕಾರ

ಪೂರ್ತಿಯಾಗಿ ಅದರ ಬಗ್ಗೆ ವಿಚಾರ ಮಾಡಿದಾಗ ಬಹಳಷ್ಟು ಜನರು ಕಿತ್ತು ಹಾಕಿದ್ದಾರೆ. ಕಿತ್ತು ಹಾಕಿರುವುದರಿಂದ ಕೊಡುವುದಕ್ಕೆ ಬರುವುದಿಲ್ಲವೆನ್ನುವ ತೀರ್ಮಾನಕ್ಕೆ ಬಂದಿದ್ದರು. ಆ ಬೆಳೆಯನ್ನು ಬೆಳೆಯಲಿಕ್ಕೆ ನಾವು ಸಹಾಯಧನವನ್ನು ಕೊಟ್ಟಿದ್ದೆವು. ದುಂಡಾಣು ರೋಗ control ಮಾಡುವುದಕ್ಕೆ ಸರ್ಕಾರ ಮತ್ತು ರಾಜ್ಯ ಸರ್ಕಾರ ಸಹಾಯಧನವನ್ನು ಕೊಡಬೇಕಾಗಿತ್ತು. ಆದರೆ ಆವತ್ತಿನ ದಿವಸ ಅದನ್ನು ಕೊಡುವುದಕ್ಕೆ ಆಗಿರಲಿಲ್ಲ. ಆದರೆ ಕಳೆದ ಸದನದಲ್ಲಿ ಈ ಬಗ್ಗೆ ಪ್ರಶ್ನೆ ಬಂದಾಗ ಆ ಸಹಾಯಧನವನ್ನು ಕೊಡುತ್ತೇವೆಂದು ನಾನು ಒಪ್ಪಿದ್ದೇವೆ. ಈಗಾಗಲೇ ಹಣಕಾಸು ಇಲಾಖೆಯವರು ಸಹ ಹಣವನ್ನು ಬಿಡುಗಡೆ ಮಾಡುವಂಥ ಹಂತದಲ್ಲಿದ್ದಾರೆ. ಕೂಡಲೆ ಅದರ ಹಣವನ್ನು ಬಿಡುಗಡೆ ಮಾಡಿ ಕೊಡಿಸುವಂಥ ಪ್ರಯತ್ನವನ್ನು ನಾವು ಮಾಡುತ್ತೇವೆಂದು ತಮ್ಮ ಮುಖೇನ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಮಾನ್ಯ ಅಧ್ಯಕ್ಷರೆ, ಹಣವನ್ನು ಬಿಡುಗಡೆ ಮಾಡುವ ಹಂತದಲ್ಲಿದ್ದೇವೆ ಎನ್ನುವಂಥ ಮಾತನ್ನು ಹೇಳುತ್ತಿದ್ದಾರೆ. ಕಳೆದ ಅಧಿವೇಶನದಲ್ಲಿ ಇವರೇ ಕಮಿಟ್‌ಮೆಂಟ್ ಮಾಡಿಕೊಂಡಿದ್ದಾರೆ. ಸರ್ಕಾರ ಬೆಳೆ ಹಾನಿ ಏನು ಇದೆ, ಆ ಪ್ಯಾಕೇಜ್‌ನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇದುವರೆಗೂ ಕೂಡ ಅದು ಕಾರ್ಯಗತವಾಗುತ್ತಿಲ್ಲ. ಆ ಬೆಳೆ ಬೆಳೆಯುವುದಕ್ಕೆ ರೈತ ಬ್ಯಾಂಕಿನಲ್ಲಿ ಲಕ್ಷಾಂತರ ಹಣವನ್ನು ತೆಗೆದುಕೊಂಡಿದ್ದಾನೆ. ಅವನು ಬೆಳೆ ಬೆಳೆಯತಕ್ಕಂಥ ಸಂದರ್ಭದಲ್ಲಿ ಫೆನ್ನಿಂಗ್ ಮಾಡಬೇಕಾಗುತ್ತದೆ, ಪಿಟ್ಸ್ ಹಾಕಬೆಕಾಗುತ್ತದೆ. 8–10 ರೂ.ಗಳನ್ನು ಕೊಟ್ಟು ಪ್ಲಾಂಟ್ಸ್ ತೆಗೆದುಕೊಂಡು ಬಂದಿರುತ್ತಾನೆ. ಮೆಡಿಸಿನ್ ಸೇರಿ ಲಕ್ಷಾಂತರ ರೂ.ಗಳನ್ನು ಖರ್ಚು ಮಾಡಿದಂಥ ರೈತನ ನೆರವಿಗೆ ಇವರು ಬರುವುದಿಲ್ಲವೆಂದರೆ ಏನರ್ಥ? ಇನ್ನು ಇವರು ಆ ಹಂತದಲ್ಲಿಯೇ ಇದ್ದೇವೆ ಎನ್ನವಂಥ ಮಾತನ್ನು ಹೇಳುತ್ತಿದ್ದಾರೆ. ನೀವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಕಡೆ ರೈತರ ಹೆಸರಿನಲ್ಲಿ ಪ್ರಮಾಣವನ್ನು ಸ್ವೀಕಾರ ಮಾಡಿದ್ದಾರೆ. ರೈತರು ಬಹಳವೆಂದರೆ, 11 ಜಿಲ್ಲೆಯಲ್ಲಿ ಈ ಬೆಳೆಯನ್ನು ಬೆಳೆದಿದ್ದಾರೆ. 735 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಈ ಬೆಳೆ ಇದೆ. ಇಷ್ಟೊಂದು ಕಡಿಮೆ ಪ್ರಮಾಣದಲ್ಲಿರುವ ಬೆಳೆಗೆ ಇವರಿಂದ ಪರಿಹಾರವನ್ನು ಕೊಡುವುದಕ್ಕಾಗುವುದಿಲ್ಲವೆಂದರೆ, ರೈತರು ಹೇಗೆ ಮುಂದಿನ ಬೆಳೆಯನ್ನು ಬೆಳೆಯುತ್ತಾರೆ?

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪೂರ: ಮಾನ್ಯ ಅಧ್ಯಕ್ಷರೆ, ಹೋದ ಅಧಿವೇಶನದಲ್ಲಿ ಕೂಡ ಸರ್ಕಾರ ಸಿದ್ಧಪಡಿಸಿದ ಉತ್ತರವನ್ನು ಕೊಟ್ಟಿದ್ದಾರೆ. ಇವತ್ತು ಇಡೀ ರಾಜ್ಯದಲ್ಲಿಯೇ 25% ಬೆಳೆ ಬೆಳೆಯತಕ್ಕಂಥದ್ದು ಕೊಪ್ಪಳ ಜಿಲ್ಲೆಯಲ್ಲಿ, ತಾವು ಅಂಕಿ ಅಂಶಗಳನ್ನು ನೋಡಿದಾಗ, ಇವತ್ತು ಇದಕ್ಕೆ ಕೇಂದ್ರ ಸರ್ಕಾರ ಕೊಡಬೇಕಾಗಿದ್ದಂಥ ಸಹಾಯಧನವನ್ನು ಅದು ಹಂತ ಹಂತವಾಗಿ ಕೊಡತಕ್ಕಂಥದ್ದು ಇದೆ. ಈಗ ಬೇರೆ ರಾಜ್ಯಗಳಲ್ಲಿ ಮೂರನೇ ಕಂತನ್ನು ಪಕ್ಕದ ರಾಜ್ಯವಾದ ಮಹಾರಾಷ್ಟ್ರದಲ್ಲಿ ಪಡೆದಿದ್ದಾರೆ. ಇವತ್ತು ನಮ್ಮ ರಾಜ್ಯದವರು ಮೊದಲನೆಯ ಕಂತನ್ನು

ಯುಟಿಲೈಸ್ ಮಾಡದೇ ಆ ಹಣವನ್ನು ಕೊಡಲಾರದೆ, ರೈತನಿಗೆ ಮೋಸ ಮಾಡತಕ್ಕಂಥ ಕೆಲಸವನ್ನು ಮಾಡಿ, ಅದರ ಜೊತೆಗೆ ತಾವು 25% ಹಣವನ್ನು ಕೊಡಬೇಕಾಗುತ್ತದೆಂದು ಆ ಹಣವನ್ನು ಎಲ್ಲಿಂದ ತರಬೇಕು ಎಂದು ಆ ದೃಷ್ಟಿಯಿಂದ ಹಣವನ್ನು ಇವತ್ತು ಕೊಟ್ಟಿಲ್ಲ. ಈಗ ಮೂರನೆಯ ಕಂತನ್ನು ಪಡೆದಿರತಕ್ಕಂಥ ಮಹಾರಾಷ್ಟ್ರ ಮಾದರಿಯಲ್ಲಿ ನಾವು ಮೂರನೆಯ ಕಂತನ್ನು ಪಡೆಯಬೇಕಾಗಿತ್ತು. ಇಂತಹ ಒಂದು ಪರಿಸ್ಥಿತಿಯಲ್ಲಿ ರೈತ ಚಿಂತಾಜನಕ ಸ್ಥಿತಿಯಲ್ಲಿದ್ದಾನೆ. ಮಳೆ ಬಂದಿಲ್ಲ, ಮಳೆ ಬಂದಿಲ್ಲ, ಬೆಳೆ ಇಲ್ಲ, ನಾವು ಡ್ರಿಪ್ ಇರಿಗೇಶನ್ ಮಾಡಿ ಬೆಳೆದಂಥ ಬೆಳೆ ಕೂಡ ಇವತ್ತು ಬಂದಿಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ಇಲಾಖೆಯ ಅಧಿಕಾರಿಗಳು ಇದರಲ್ಲಿ ಸಂಪೂರ್ಣವಾಗಿ ವಿಫಲರಾಗಿದದಾರೆ. ಯಾವ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಈ ಕೆಲಸವನ್ನು ಮಾಡಿದ್ದಾರೆ, ಅವರ ಮೇಲೆ ಸೂಕ್ತವಾದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ಹೇಳಿ, ನಾನು ಮಾನ್ಯ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಹೋದ ಸದನದಲ್ಲಿ ಇದರ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿರುತ್ತೀರಿ, ಈಗಲೂ ಆಶ್ವಾಸನೆಯನ್ನು ಕೊಡುತ್ತಿದ್ದೀರಿ. ಇದು ಕಾರ್ಯಗತವಾಗುವುದು ಯಾವಾಗ? ಹನ್ನೆರಡುವರೆ ಸಾವಿರ ರೂ.ಗಳನ್ನು National Horticulture Mission ನಿಂದ ಕೊಡಬೇಕಾಗಿದ್ದನ್ನು ಕೊಟ್ಟು ಬಿಟ್ಟಿದ್ದೀರಿ. ಉಳಿದ ಹನ್ನೆರಡುವರೆ ಸಾವಿರ ರೂ.ಗಳನ್ನು ರಾಜ್ಯ ಸರ್ಕಾರ ಕೊಡಬೇಕೆಂದು ಕೇಂದ್ರ ಸರ್ಕಾರ ಮಾಡಿರುವ ಆದೇಶದಂತೆ ನೀವು ಕೊಡಲಿಲ್ಲ. ಅಧಿಕಾರಿಗಳು ಮಾಡುತ್ತಿದ್ದಾರೆ, ಕೊಡುತ್ತೇವೆ ಎನ್ನುವ ಮಾತನ್ನು ಇನ್ನು ಹೇಳುತ್ತಿದ್ದೀರಿ ಇದು ಸರಿಯಲ್ಲ. ನೀವು ಇಂತಹ ದಿವಸ ಕೊಡುತ್ತೇವೆಂದು ಹೇಳಿ, ಇಲ್ಲವೆ ಕೊಡುವುದಿಲ್ಲವೆಂದು ಹೇಳಿ. ಆದರೆ ನೀವು ರೈತರು ಬಿತ್ತನೆ ಮಾಡಿದ್ದನ್ನು ಕಿತ್ತು ಹಾಕಿದರು ಎಂದು ಹೇಳಿದಿರಿ. ಇಡೀ ರಾಜ್ಯದಲ್ಲಿ 13000 ಹೆಕ್ಟೇರ್ ಇರಬೇಕಾದರೆ, ನಿಮ್ಮ ಅಧಿಕಾರಿಗಳು ಹತ್ತಿ ಎಷ್ಟು ಗಿಡ ಇತ್ತು, ಎಷ್ಟು ಎಕರೆ ಪ್ರದೇಶದಲ್ಲಿತ್ತು ಎನ್ನುವ ಪ್ರತಿ ಅಂಕಿ ಅಂಶಗಳು ಇದೆ. ಯಾರೋ ಒಬ್ಬರು ಕಿತ್ತು ಹಾಕಿದರು ಎನ್ನುವ ಒಂದು ಕಾರಣವನ್ನು ಮಾಡಿಬಿಟ್ಟು ನಾವು ಯಾರಿಗೂ ಕೊಡುವುದಿಲ್ಲವೆಂದು ಹೇಳಿಬಿಟ್ಟರೆ ಹೇಗೆ? ಇವತ್ತು ಕೂಡ ಆ ರೈತರು ದುಡ್ಡು ಬರುತ್ತದೆಂದು ಹೇಳಿ ಹಾಗೆ ಬಿಟ್ಟುಕೊಂಡು ಕುಳಿತಿದ್ದಾರೆ. ದಯಮಾಡಿ ತಾವು ಇದನ್ನು ಅರ್ಥ ಮಾಡಿಕೊಳ್ಳಬೆಕು. ಇಲ್ಲದಿದ್ದರೆ ಆ ಪ್ರದೇಶದ ಶಾಸಕರನ್ನು ಕರೆದು ಚರ್ಚೆ ಮಾಡಿ ಏನಾದರೊಂದು ಕಾರ್ಯಕ್ರಮವನ್ನು ಮಾಡಿ. ನೀವು ಎಫೆಕ್ಟಿವ್ ಮಿನಿಸ್ಟರ್ ಎಂದು ನಾವು ತಿಳಿದುಕೊಂಡಿದ್ದೆವು. ನೀವು ಹೀಗೆ ಮಾಡಿದರೆ ಹೇಗೆ?

ಶ್ರೀ ಉಮೇಶ್ ವಿ.ಕತ್ತಿ: ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ 2006–07, 2007–08ರಲ್ಲಿ ದಾಳಿಂಬೆ ಬೆಳೆಗೆ ದುಂಡಾಣು ರೋಗ ಬಂದಿದ್ದು ನಿಜ. ಆಗಿನ ಸರ್ಕಾರಗಳು ಈ ರೋಗಕ್ಕೆ ಕೇಂದ್ರ ಸರ್ಕಾರ ಸಹಾಯಧನ ಒದಗಿಸಿದ್ದು ನಿಜ. ರಾಜ್ಯ

ಸರ್ಕಾರ ಕೊಡಬೇಕಾಗಿದ್ದ ಆವತ್ತಿನ ತನ್ನ ಪಾಲಿನ ಹಣವನ್ನು ಕೊಡಲಿಲ್ಲ. ಕಾರಣ ಇಷ್ಟೆ. ಆವತ್ತಿನ ದಿವಸ ಕೆಲವು ರೈತರು ಈ ಬೆಳೆಯನ್ನು ಕಿತ್ತು ಹಾಕಿದ್ದಾರೆಂದು ರಿಪೋರ್ಟ್ ಬಂದಿತ್ತು. ಆದು ಆದ ಮೇಲೆ ಮಾನ್ಯ ಯಡಿಯೂರಪ್ಪನವರ ನೇತೃತ್ವದ ಸರ್ಕಾರ ಬಂದ ಮೇಲೆ, ರೈತರ ಹೆಸರಿನ ಮೇಲೆ ಪ್ರಮಾಣ ವಚನ ಮಾಡಿದ ಮೇಲೆ, ನಾವು ಅಧಿಕಾರಿಕ್ಕೆ ಬಂದ ಮೇಲೆ ಈ ಬೆಳೆಗೆ ವಿಶೇಷವಾದಂಥ ಸವಲತ್ತುಗಳನ್ನು ಕೊಡುತ್ತೇವೆಂದು ಹೇಳಿದ್ದೇವೆ. ನಾನು ಉತ್ತರವನ್ನು ಹೇಳುವುದಕ್ಕೆ ಬಿಡಿ. ನೀವು ಹೇಳುವುದನ್ನು ನಾವು ಕೇಳಿದ್ದೇವೆ.

ಅಧ್ಯಕ್ಷರು: ಮಾನ್ಯ ಸಚಿವರು ಉತ್ತರವನ್ನು ಕಂಪ್ಲೀಟ್ ಮಾಡಲಿ. ಮಾನ್ಯ ಕರಡಿ ಸಂಗಣ್ಣನವರೆ, ತಾವು ಆಮೇಲೆ ಕೇಳಿ.

ಶ್ರೀ ಉಮೇಶ್ ವಿ.ಕತ್ತಿ: ಮಾನ್ಯ ಅಧ್ಯಕ್ಷರೆ, ಕಳೆದ ಒಂದು ವರ್ಷದಿಂದ ಅಧಿಕಾರಕ್ಕೆ ಬಂದ ನಮ್ಮ ಸರ್ಕಾರ ಇದರ ಬಗ್ಗೆ ಚಿಂತನೆಯನ್ನು ಮಾಡಿ, ಯಾವ ರೈತರು ಕಿತ್ತು ಹಾಕಿದ್ದರೂ ಇರಲಿ, ರಾಜ್ಯ ಸರ್ಕಾರ ಕೊಡಬೇಕಾಗಿರುವ ತನ್ನ ಪಾಲನ್ನು ಕೊಡಲೇಬೇಕು ಎನ್ನುವ ತೀರ್ಮಾನವನ್ನು ತೆಗೆದುಕೊಂಡು ಅದರ ಬಗ್ಗೆ ಈಗಾಗಲೇ ಹಣಕಾಸು ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿದ್ದೇವೆ. ಮುಂದೆ ಬರುವ ಒಂದು ಅಥವಾ ಒಂದೂವರೆ ತಿಂಗಳಲ್ಲಿ ಈ ಹಣವನ್ನು ಬಿಡುಗಡೆ ಮಾಡುತ್ತೇವೆ. ಅದರಲ್ಲಿ ಯಾವುದೇ ಭಿನ್ನಾಭಿಪ್ರಾಯ ಬೇಡ. ಅದರ ಜೊತೆ ಈಗಾಗಲೇ ಯೂನಿವರ್ಸಿಟಿಗಳು ಆ ರೋಗವನ್ನು ತಡೆ ಹಿಡಿಯಲಿಕ್ಕೆ ಸಾಕಷ್ಟು ಪ್ರಯತ್ನಗಳನ್ನು ಮಾಡಿ, ಇವತ್ತು ಒಂದು ತೀರ್ಮಾನಕ್ಕೆ ಬಂದು ಆ ರೋಗವನ್ನು ತಡೆ ಹಿಡಿಯಲಿಕ್ಕೆ ಒಂದು ಕಾರ್ಯಕ್ರಮವನ್ನು ರೂಪಿಸಿದ್ದಾರೆ. ಪಾಂಪ್ಲೆಟ್ ಮೂಲಕ ರೈತರಿಗೆ ಮುಟ್ಟಿಸುವಂಥ ಕೆಲಸವನ್ನು ಮಾಡುತ್ತಿದ್ದೇವೆ. ರೈತರ ಹೆಸರಿನಲ್ಲಿ ಪ್ರಮಾಣ ವಚನ ತೆಗೆದುಕೊಂಡಂಥ ಸರ್ಕಾರ ರೈತರ ಬಗ್ಗೆ ಕಳಕಳಿ ಇರುವಂಥ ಸರ್ಕಾರ ಇದನ್ನು ಕೊಟ್ಟೇಕೊಡುತ್ತೇವೆ. ಯಾವುದೇ ಭಿನ್ನಾಭಿಪ್ರಾಯ ಬೇಡ.

ಅಧ್ಯಕ್ಷರು: ಒಂದು ಟೈಂಬಾಂಡ್ ಹೇಳಿ ಬಿಡಿ. ಹಣಕಾಸು ಇಲಾಖೆಯ ಜೊತೆಯಲ್ಲಿ ಮಾತನಾಡಿ ಒಂದು ತಿಂಗಳಲ್ಲಿ ಮಾಡಿಬಿಡಿ.

ಶ್ರೀ ಉಮೇಶ್ ವಿ.ಕತ್ತಿ: ತಮಗೆಲ್ಲಾ ಗೊತ್ತಿರುವಂತೆ ತಾವು ಆರ್ಥಿಕ ಕುಸಿತವನ್ನು ನೋಡುತ್ತಿದ್ದೀರಿ. ಆದರೂ ಕೂಡ ರೈತರಿಗೆ ವಿಶೇಷವಾಗಿ ಕೊಡಬೇಕಾಗಿರುವ ಹಣವನ್ನು ಬರುವ ಎರಡು ತಿಂಗಳೊಳಗಾಗಿ ಮುಟ್ಟಿಸುವ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ಸಬ್ಸಿಡಿ ಕೊಡುತ್ತೇವೆಂದು ಹೇಳಿ, ಈ ಸಲ ಸಬ್ಸಿಡಿನ್ನೂ ಕೊಡಲಿಲ್ಲ, ಏನೂ ಕೊಡಲಿಲ್ಲ. ದಾಳಿಂಬೆ ಇರಬಹುದು, ಅಡಿಕೆ, ಕೊಬ್ಬರಿ ಇರಬಹುದು.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಒಂದು ನಿಮಿಷ, ಅದಕ್ಕೆ ಪೂರಕವಾದ ಇವರು ಏನು ಹೇಳಿದ್ದಾರೆಂದರೆ, ರೀಸರ್ಚ್ ಬಗ್ಗೆ ಹೇಳಿದ್ದಾರೆ. 100 ಲಕ್ಷ

ರೂ.ಗಳನ್ನು ಕೃಷಿ ವಿಶ್ವವಿದ್ಯಾನಿಲಯಕ್ಕೆ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೆ ಅದರ ರಿಪೋರ್ಟ್ ಏನು ಎನ್ನುವುದನ್ನು ಹೇಳುತ್ತಿಲ್ಲ. ಅವರು ಆ ಬೆಳೆಯನ್ನು ಹೇಗೆ ಉಳಿಸುತ್ತಾರೆನ್ನುವ ಬಗ್ಗೆ ಚಿಂತನೆ ಇಲ್ಲ. 100 ಲಕ್ಷ ರೂ.ಗಳಲ್ಲಿ ಏನು ನೀವು ಉಳಿಸುತ್ತೀರಿ? ಅದಕ್ಕೆ ತಾವು ಉತ್ತರವನ್ನು ಹೇಳಬೇಕು. ರೀಸರ್ಚ್ ಮಾಡಿ ಬೆಳೆ ಉಳಿಸುವುದಕ್ಕೆ ನೀವು ಏನು ಮಾಡಿದ್ದೀರಿ? ಅದನ್ನು ಇವರು ಹೇಳುತ್ತಿಲ್ಲ.

ಶ್ರೀ ಉಮೇಶ್ ವಿ.ಕತ್ತಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ದುಂಡಾಣು ರೋಗವನ್ನು ತಡೆ ಹಿಡಿಯಲಿಕ್ಕೆ 100 ಲಕ್ಷ ರೂ.ಗಳನ್ನು ಖರ್ಚು ಮಾಡಿ ಇದರ ಸಂಶೋಧನೆ ಮಾಡಲಾಗಿದೆ. ಆ ಸಂಶೋಧನೆಯಿಂದ ಬಂದಂಥ ವರದಿಯಿಂದ ಆ ಬೆಳೆ ಇಡುವುದಕ್ಕೆ ಇವತ್ತು ಸಾಧ್ಯವಿದೆ. ತಮಗೂ ಮಾಹಿತಿಯನ್ನು ಒದಗಿಸುತ್ತೇವೆ. ಏಕೆಂದರೆ, ಈಗಾಗಲೇ ನಾವು ರೈತರಿಗೆ ಈ ರೋಗವನ್ನು ಹೇಗೆ ತಡೆಹಿಡಿಯಬೇಕು ಎನ್ನುವುದರ ಬಗ್ಗೆ ಪಾಂಪ್ಲೆಟ್ ಮೂಲಕ ಹಂಚುತ್ತಿದ್ದೇವೆ. ಇದನ್ನು ಮಾನ್ಯ ಸದಸ್ಯರಿಗೂ ಒದಗಿಸುವಂಥ ವ್ಯವಸ್ಥೆಯನ್ನು ಮಾಡುತ್ತೇವೆ.

ಅಧ್ಯಕ್ಷರು: ಮಾನ್ಯ ಗೋಪಾಲ ಭಂಡಾರಿಯವರು ಪ್ರಶ್ನೆಯನ್ನು ಕೇಳಿ. ಮಾನ್ಯ ಕೃಷ್ಣಮೂರ್ತಿಯವರೆ, ನೀವು ಕೇಳಬೇಕೆಂದಿರುವುದು ಈ ಪ್ರಶ್ನೆಗೆ ಸಂಬಂಧವಿಲ್ಲ.

ಶ್ರೀ ಉಮೇಶ್ ವಿ.ಕತ್ತಿ: ನೀವು ಬೇರೆ ಪ್ರಶ್ನೆಯನ್ನು ಕೇಳಿ, ನಾವು ಸವಿಸ್ತಾರವಾಗಿ ಉತ್ತರವನ್ನು ಒದಗಿಸುತ್ತೇವೆ. ದಯವಿಟ್ಟು ಕುಳಿತುಕೊಳ್ಳಿ. ನಿಮ್ಮ ವಿಷಯ ಇದಕ್ಕೆ ಸಂಬಂಧವಿಲ್ಲ.

ಪಡಿತರ ಚೀಟಿಯಲ್ಲಿರುವ ದೋಷಗಳ ಬಗ್ಗೆ

22(332) ಶ್ರೀ ಗೋಪಾಲ ಭಂಡಾರಿ ಹೆಚ್(ಕಾರ್ಕಳ)

ಶ್ರೀ ಹೆಚ್.ಹಾಲಪ್ಪ (ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಪಡಿತರ ಚೀಟಿ ವಿತರಣೆಯಲ್ಲಿ ಲೋಪದೋಷಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಸರಿಪಡಿಸಲು ಕ್ರಮ ಕೈಗೊಳ್ಳಲಾಗಿದೆಯೇ;

ಬಂದಿದೆ.

ಇದನ್ನು ಸರಿಪಡಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ತಮ್ಮ ಅರೆ ಸರ್ಕಾರಿ ಪತ್ರ ದಿನಾಂಕ:17.7.2007ರಂದು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಅನರ್ಹರನ್ನು ಕೈಬಿಡುವ ಕ್ರಮ ಹಾಗೂ ಅರ್ಹ ಫಲಾನುಭವಿಗಳನ್ನು ಗುರುತಿಸಿ, ಪಡಿತರ ಚೀಟಿ ನೀಡುವ ಕಾರ್ಯವನ್ನು ತಕ್ಷಣ ಪೂರೈಸಿ ಭಾವಚಿತ್ರ ಹಾಗೂ ಜೀವಮಾಪಕಗಳ ಸಂಗ್ರಹಣೆ ಕಾರ್ಯಕ್ರಮವನ್ನು ಪ್ರಾರಂಭಿಸಿ ಖಾಯಂ ಪಡಿತರ

ಚೀಟಿ ನೀಡುವ ಕೆಲಸಕ್ಕೆ ಚಾಲನೆ ನೀಡಬೇಕು ಎಂದು ಸೂಚನೆ ನೀಡಿರುತ್ತಾರೆ. ಈ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ರೂಪಿಸಿ, ತೆಗೆದುಕೊಂಡ ಕ್ರಮದ ಬಗ್ಗೆ ಕಾಲಕಾಲಕ್ಕೆ ಸರ್ಕಾರಕ್ಕೆ ವರದಿ ಮಾಡಬೇಕೆಮದು ಸೂಚಿಸಿರುತ್ತಾರೆ. ಈ ಕಾರ್ಯವು ಪ್ರಗತಿಯಲ್ಲಿರುತ್ತದೆ.

ನೆಮ್ಮದಿ ಕೇಂದ್ರಗಳ ಮುಖಾಂತರ ಪಡೆದುಕೊಂಡ ಪಡಿತರ ಚೀಟಿಗಳ ಅರ್ಜಿಗಳು ಸಮರ್ಪಕವಾಗಿ ಪರಿಶೀಲನೆಗಾಗಿ ಹಾಗೂ ವಿತರಣೆಯಲ್ಲಿ ಆಗಿರುವ ಲೋಪದೋಷಗಳನ್ನು ಸರಿಪಡಿಸಲು ಸರ್ಕಾರದ ಕಾರ್ಯದರ್ಶಿಗಳು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಇವರು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ದಿ: 19.6.2009ರ ಅರೆ ಸರ್ಕಾರಿ ಪತ್ರದಲ್ಲಿ ಲೋಪದೋಷಗಳನ್ನು ಸರಿಪಡಿಸಲು ವಿವರವಾದ ಸೂಚನೆಗಳನ್ನು ನೀಡಿರುತ್ತಾರೆ.

